REGISTERED NO. M. 1393. ಎಳ ಪುಟಗಳು. ಈ ಪ್ರತಿ ಒಂದಾಣೆ

ಕಂಠೀರವ

KANTEERAVA
THE ONLY KANARESE
BI-WEEKLY.

ಶ್ರೀನ ಮ್ಹೊಪತಲೇಷು ಭಾ ತಮುಹೀಭಾಗಾ ವ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾಯಾನ್ವಯಃ ।
ಶಸ್ತ್ರಸ್ತ್ರದವಿಷು ಸಂವ್ಯವಹೃತಿಪ್ರಾಗಲ್ಭ್ಯಮಾತ್ಮೋನ್ನಹಂ
ಜೀಯಾದ್ವಿಶ್ವಜನೀನವೃತ್ತಿಚತುರಶ್ರೀಕಂಠಕಂಠೀರವಃ ॥

ನವ ಕುಲಗಳೊಳಾರ್ಯವಂಶವು, । ಧರೆಯು ದೇಶಗಳೊಳಗೆ ಭಾರತ
ವಸುತನಗಳೊಳಂಗ್ಲರೊತೆನ, ನುಡಿಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೮ ಮಂಗಳೂರು, ೧೯೩೬ನೇ ಇಸವಿ ಜುಲಾಯಿ ತಾರೀಕು ೧೪ನೇ ಮಂಗಳವಾರ ಸಂಚಿಕೆ ೩೧
VOL. XVIII MANGALORE, TUESDAY, JULY 14, 1936. NO. 31.

ಅಮೃತಾಂಜನ

(Regd.)

ತಲೆನೋವನ್ನು ಅಮೃತಾಂಜನ ಕ್ಷಣದಲ್ಲಿ ನಿವಾರಿಸುವುದು.

ತಲೆನೋವೆದನೆ, ಶಿರೋನೋವೆದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೋವೆದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೀನೆ, ಪಕ್ಷವಾತ, ನೊಡಿನು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ಕುರಿಕಜ್ಜಿ, ಹುಳುಕಡ್ಡಿ, ಪಿತ್ತಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೊ

ಬೊಂಬಾಯಿ ——— ಮದ್ರಾಸ್ ——— ಕಲ್ಕತ್ತಾ.

ಮಂಗಳೂರಲ್ಲಿ ಶಾಖಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕೊಚ್ಚಿಕಾರ್ ಬ್ರದರ್ಸ್, ಮದರಾಸು ಶಾಖಾ ಕಾರ್ಯದರ್ಶಿಗಳು

ಮತ್ತು

ಬೊಂಬಾಯಿ ನಗರ ಮತ್ತು ಅವರ ಉಪನಗರಗಳಿಗೆ ಚೀಫ್ ಏಜಂಟರು.

13-12-1935—ನಮ್ಮ ರಜತೋತ್ಸವ ವರುಷ.

——ಪ್ರಕಟಣೆ.——

ಪುತ್ತಿಯಾರದಲ್ಲಿ, ತಾಲೂಕು ಆಫೀಸು ರಸ್ತೆಯಲ್ಲಿ, ಪುತ್ತಿಯಾರಾ ಪೋಸ್ಟಾಫೀಸಿನ ಎದುರುಗಡೆಯಲ್ಲಿರುವ "ಸೌಮ್ಯಾಲಯಂ" ಎಂಬ ಹೊಸ ಬಂಗಲೆಯನ್ನು ನಾವು ಪಡಕೊಂಡು, ನಮ್ಮ ಕಲ್ಲಿಕೋಟೆ ಬ್ರಾಂಚ್ ಆಫೀಸನ್ನು ಅಲ್ಲಿ ತಾ. 14-3-36ರಲ್ಲಿ ತೆರೆದಿರುವೆನೆಂದು ನಮ್ಮ ಯಾನತ್ತೂ ಕೆಲಸಗಾರರಿಗೂ ಏಜಂಟರಿಗೂ ಪೊಲಿಸಿಧಾರರಿಗೂ ತಿಳಿಸಲು ಸಂತೋಷಪಡುತ್ತೇವೆ. ನಮ್ಮ ಮಲಬಾರು ಜಿಲ್ಲಾ ಏಜಂಟರಾದ ಮಿ. ಸಿ. ಶಂಕರನ್ ನಾಯರರ ಆಫೀಸು, ಹಜೂರು ರಸ್ತೆಯಲ್ಲಿದ್ದುದು ಮೊಕೂಪು ಮಾಡಲ್ಪಟ್ಟು, ಈ ಹೊಸ ಬ್ರಾಂಚ್ ಆಫೀಸಿನಲ್ಲಿಯೇ ಸಮ್ಮಿಲನವಾಗುವುದು. ಈ ಹೊಸ ಆಫೀಸು ಅನುಕೂಲ ಸ್ಥಳದಲ್ಲಿದ್ದು, ವಿಶಾಲವಾಗಿ ಸೌಕರ್ಯಗಳುಳ್ಳುದಾದ್ದರಿಂದ, ದಿನೇ ದಿನೇ ಮಲಬಾರು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ನಮ್ಮ ವಿಮಾಕಾರ್ಯದ ದೆಸೆಯಿಂದ ಈ ಹೊಸ ಕಟ್ಟಡವನ್ನು ಪಡೆಯುವ ಆವಶ್ಯಕತೆ ಕಂಡಿದ್ದು, ನಮ್ಮ ಪೊಲಿಸಿದಾರರಿಗೆ ಮತ್ತಷ್ಟು ಒಳ್ಳೆಯದಾಗಿ ನಮ್ಮ ಕಾರ್ಯಸೇವೆಯನ್ನು ಸಲಿಸಲನುಕೂಲವಾಗುವುದೆಂಬ ಭರವಸೆ ಇದೆ. ನಮ್ಮ ಆಶ್ರಯದಾತರೂ ಹಿತಚಿಂತಕರೂ ಆದಷ್ಟು ತ್ವರ್ಯದಲ್ಲಿ "ಸೌಮ್ಯಾಲಯ"ವನ್ನು ಸಂದರ್ಶಿಸಬೇಕಾಗಿ ವಿನಂತಿ. ಎಲ್ಲ ಪತ್ರವ್ಯವಹಾರವನ್ನೂ ಹಣಸಾಮಾನುಗಳನ್ನೂ ಚೆಕ್ಕುಗಳನ್ನೂ ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕುದು.

ಮೆಸರ್ಸ್. ಕೊಚ್ಚಿಕಾರ್ ಬ್ರದರ್ಸ್,
ಬೊಂಬೇ ಲೈಫ್ ಆಫೀಸು,
ಪುತ್ತಿಯಾರ ಪೋಸ್ಟು (ಕಲ್ಲಿಕೋಟೆ—ಮಲಬಾರು)

ನಮ್ಮ ಕಂಪೆನಿಯೊಂದಿಗೆ ವ್ಯವಹಾರವಿರುವವರ ಸೌಕರ್ಯಕ್ಕಾಗಿ ನಮ್ಮ ತಂತಿಗ್ರಾಫ್ ವಿಳಾಸವನ್ನು "Kochikar—Calicut" ಎಂದು ರಿಜಿಸ್ಟರ್ ಸಹ ಮಾಡಿಸಿರುವೆವು.

ಸಿ. ಶಂಕರನ್ ನಾಯರ್, ಮಲಬಾರ್ ಜಿಲ್ಲಾ ಏಜಂಟ್,
ಇವರ ಸವಿನಯ ಆಮಂತ್ರಣ.

ಕೊಚ್ಚಿಕಾರ್ ಬ್ರದರ್ಸ್,
ತಾ. 1—3—1936.

ESTD:—1906.

THE CANARA BANKING CORPORATION UDIPI, LTD.

THE FIRST INDIGENOUS & COSMOPOLITAN BANK OF S. K. DISTRICT.

Capital: Authorised, Issued and Subscribed	Rs. 3,50,000—0—0
Paid up	Rs. 2,88,840—0—0
Reserve and other funds	Rs. 3,72,337—0—0
Deposits	Rs. 29,50,717—0—0.

Fixed deposit rates up to 5% p. a.

16/6/1936.

Head Office:— UDIPI.

Branches:—1. Saklaspur. 2.Udipi, 3. Coondapoor, 4. Car Street—Mangalore, 5. Shimoga, 6. Madras. 7. Bunder—Mangalore, 8. Mercara and 9. Virarajendrapet.

ಲಕ್ಷ್ಮೀ ಕವಚ.

ಬಡಕನದಿಂದ ಕಷ್ಟಪಡುತ್ತಿರುವವರು ಈ ರಕ್ಷಾಯಂತ್ರವನ್ನು ಧರಿಸತಕ್ಕದ್ದು. ಇದನ್ನು ಧರಿಸುವುದರಿಂದ, ದುಡ್ಡುಕಾಸಿನ ತಾಪತ್ರಯಗಳು ದೂರವಾಗುವುವು; ಮತ್ತು ದಿನದಿನಕ್ಕೂ ವೃದ್ಧಿಗತಿಯು ಸಂಭವಿಸುವುದು. ಅಲ್ಲದೆ, ಸಾಲದ ಮೂಲವಾದ ತೊಂದರೆಗಳ ಪರಿಹಾರವೂ, ಸಂಸಾರದಲ್ಲಿ ಐಕ್ಯವೂ, ಪ್ರಯತ್ನಿಸಿದ ಕಾರ್ಯಗಳಲ್ಲಿ ಜಯವೂ, ಶತ್ರುಗಳೊಡನೆ ರಾಜಿಯೂ, ಕೈಕೊಂಡ ಎಲ್ಲಾ ಕೆಲಸಗಳಲ್ಲಿಯೂ ಜಯವೂ, ಅಧಿಕಾರಿಗಳ ಅನುಗ್ರಹವೂ ಇನ್ನೂ ಅನೇಕ ಉಪಕಾರಗಳನ್ನೆಸಗುವ ಉಪಯೋಗಕರಗಳಾದ ಫಲಿತಾಂಶಗಳೂ ಸಿದ್ಧಿಸುವುವು. ವರ್ತಕವರ್ಗವೂ, ಕಸುಬುದಾರರೂ, ಇಬ್ಬರೂ ಈ ರಕ್ಷಾಯಂತ್ರವನ್ನು ಧರಿಸುವುದರಿಂದ, ತಮ್ಮ ತಮ್ಮ ವೃತ್ತಿಗಳಲ್ಲಿ ಅತಿಶಯವಾದ ಅಭಿವೃದ್ಧಿಯನ್ನು ಪಡೆಯುವರು. ಈ ರಕ್ಷಾಯಂತ್ರಗಳನ್ನು ಧರಿಸುವವರು, ತಮ್ಮ ಕಾಗದದಲ್ಲಿ, ಸ್ಪಷ್ಟವಾಗಿ, ತಮ್ಮ ಸಂಪೂರ್ಣವಾದ ಹೆಸರುಗಳನ್ನೂ, ಅಂದಾಜಿನ ಪ್ರಾಯವನ್ನೂ ನಮೂದಿಸತಕ್ಕದ್ದು.

ಚಾರ್ಜಿನ ವಿವರ.

ಲಕ್ಷ್ಮೀ ಕವಚ	ರೂ. 5—0—0
ವಿ. ಪಿ. ಪಾರ್ಸೆಲು	ರೂ. 0—5—0

ಹನುಮಂತ ಉಪಾಸಿ ವಿ. ಕೆ. ಸತಗೋಪಾಚಾರಿಯರ್,

ಹನುಮಾನ್ ಜ್ಯೋತಿಷ್ಯ ಆಶ್ರಮ, ತಿರುತ್ತಣ್ಣಿ, ದ. ಇಂಡಿಯಾ.

ಡಾಕ್ಟರ್ ಜಿ. ಬಿ. ಇವರ

ಸುಗಂದ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

Pomona Sprayers

Here is a very useful Sprayer for Agriculurists, landholders, farmers, for spraying chemicals to the infected trees even to the height of 80 ft. from the ground level. It is strongly built so as to give a satisfactory service for many

years and is imported from Germany specially to meet the needs of **Estate** owners for spraying chemicals to the infected trees.

Price each Sprayer Rs. 33—0—0
Spray Controller ,, 7—8—0

BASEL MISSION BOOK DEPOT,
MANGALORE.

1936ನೇ ಮೂಡರಿಯ

ಹೊಸ ಸೀರೆಗಳು

ಗಟ್ಟಿ ಬಣ್ಣದಲ್ಲಿ ಪ್ರಖ್ಯಾತಿ ಹೊಂದಿದ ನಮ್ಮ **"ಕಾಫಿ ಕಲ್ಲರ್"** ಸೀರೆಗಳನ್ನೇ ಉಪಯೋಗಿಸಿರಿ!

ಕಡಿಮೆ ಬೆಲೆಗೆ-ತರತರದ ಬಣ್ಣದ-ನಮೂನೆವಾರು ಅಂಚಿನ-ಸೀರೆಗಳು!

ಒಮ್ಮೆ ಬಂದು ನಮ್ಮ ಆಂಗಡಿಯನ್ನು ಸಂದರ್ಶಿಸಿರಿ!

ಪಿ. ಎ. ಹೈ ಬ್ರದರ್ಸ—ಉಡುಪಿ.

ದಿ ಕರ್ನಾಟಕ ಡ್ರಾಯಿಂಗ್ ಎಂಡ್ ವೀವಿಂಗ್ ಇಂಡಸ್ಟ್ರೀಯಲ್ ಏಜಂಟರು:—**ಸೂಜಿಕಾರ್ ಬ್ರದರ್ಸ್—ಮಂಗಳೂರು.**

VASANTHI HARMONIUMS FOR MELODY AND DURABILITY.

ಶುದ್ಧ ಮತ್ತು ಮಂಜುಳ ಧ್ವನಿಯಿಂದ ಕೂಡಿರುವ ವಸಂತಿ ಹಾರ್ಮೋನಿಯಂನ್ನು ನಿಮ್ಮ ಗೃಹಗಳಲ್ಲಿ ಉಪಯೋಗಿಸಿ, ಸಂಗೀತಸುಖವನ್ನು ಪಡೆಯಿರಿ. ಸಿಂಗಲ್, ಡಬ್ಬಲ್, ಟ್ರಿಬ್ಲ್, ಪೋರ್ಟಬ್ಲ್, ಕಾಲಿನ ಫೊಲ್ಡಿಂಗ್ ವಗೈರೆ ಎಲ್ಲಾ ತರದ ಹಾರ್ಮೋನಿಯಂಗಳು ತಯಾರಿಸಲ್ಪಡುವುವು.

ವಸಂತಿ
ಹಾರ್ಮೋನಿಯಂ ವರ್ಕ್ಸ್,
ಹಂಪನಕಟ್ಟೆ, ಮಂಗಳೂರು.



MUSIC IS THE CHARM OF LIFE

and Vasanthi Harmoniums supply that charm.

VASANTHI HARMONIUM WORKS,
Hampankatta, Mangalore.

Specially constructed in our workshop.
Well Tuned & Fitted to withstand Indian Climate.

Proprietor:—

ATTAVAR BABOO.

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು ನಿತ್ಯವೂ ಉಪಯೋಗಿಸುವುದರ ಪರಿಣಾಮವೇನೆಂದರೆ, ಶಾರೀರಕ ಯೋಗ್ಯತೆಯ ರಮ್ಯವಾದ ಅನುಭವವಾಗಿದೆ ಅದು ಚರ್ಮವನ್ನು ಕೂಡ ಕಾಪಾಡುತ್ತದಲ್ಲದೆ, ಅದನ್ನು ಕೋಮಲವಾಗಿಯೂ ನುಣ್ಣಗಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ, ಬಿ. ಪಿ. ಗುಣವಿಶೇಷದ ಶುದ್ಧವಾದ ಮೈಸೂರು ಗಂಧದ ಎಣ್ಣೆಯು ಈ ತಯಾರಿಯ ಸ್ವಚ್ಛ ದಿನಸುಗಳೊಡನೆ ಮಿಶ್ರುವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

**GOVT. SOAP FACTORY,
BANGALORE.**

THE

Popular Insurance Co., Ltd.

Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/-ಬೋನಸ್ ಹಂಚಲಾಗುವುದು

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ-ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತವಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.
—ಓರಿಯಂಟ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರೋಡ್,
ಮಲ್ಲೇಶ್ವರಮ್, ಪಿ. ಒ. ಬೆಂಗಳೂರು ಸಿಟಿ.

The Central Mutual Life Assurance Society, Ltd., BOMBAY.

MUTUAL means Policyholders, own

Insure with for safety through

——→ **The Pioneer General Insurance** AGENCY OF **West Coast, Mangalore.**

DIAMOND POLICY

offers unique advantages.

Investment consistant with saftey.

ASK FOR PROSPECTUS.

ಈ ವಾರದ ಕಥೆ:—

ಪಾಪಿಗಳ ವಿಚಾರಣೆ.

(ನರಕದ ಒಂದು ದೃಶ್ಯ.)

(ಲೇಖಕ:—'ಶ್ರೀರಾಮು')

(ನ್ಯಾಯಾನ್ಯಾಯವಿಚಕ್ಷಣ ಮುಂತಾದ ಬಿರುದುಳ್ಳ ಶ್ರೀ. ಯಮ ರಾಜನು ತನ್ನ ಒಡ್ಡೋಲಗದಲ್ಲಿ ಕುಳಿತಿದ್ದಾನೆ. ಪಕ್ಕದಲ್ಲಿ ಗುಮಾಸ್ತೆ (personal clerk) ಮಿ. ಚಿತ್ರಗುಪ್ತನು ಕೈಯಲ್ಲಿ ಲೇಖಣಿ ಹಿಡಿದು ಯಾವುದೋ ಪುಸ್ತಕದ ಹಾಳೆಗಳನ್ನು ತಿರುವಿಹಾಕುತ್ತಿದ್ದಾನೆ.)

ಯಮ:—ಯಾರೋ ಅಲ್ಲಿ? ಪಾಪಿಗಳನ್ನು (ಅಪರಾಧಿ) ಜಾಗ್ರತೆ ಕರೆದುಕೊಂಡು ಬಾ! (ಭಟರು ತಕ್ಷಣವೇ ಒಬ್ಬ ಪಾಪಿಯನ್ನು ನೂಕಿಕೊಂಡು ಬರುವರು.) ಯಾರೋ? ಇವನು ಒಳ್ಳೆ ದೊಣ್ಣೆ ಭಾಗವತ ಇದ್ದ ಹಾಗೆ ಇದ್ದಾನೆ! Hallo Mr. ಚಿತ್ರಗುಪ್ತ! ಇವನ ಸಮಾಚಾರವೇನು?

ಚಿತ್ರಗುಪ್ತ:—'ಮಹಾಸ್ವಾಮಿ! ಅಪ್ಪಣೆ' ಎಂದು ಕೆಲವು ಕಾಗದಗಳನ್ನು ತಿಪ್ಪರಿಹಾಕಿ ಹೇಳಿದನು; 'ಸ್ವಾಮಿ, ಇವನೊಬ್ಬ ಅಯ್ಯಂಗಾರಿ. ಇವನಿದ್ದ ಊರಿನಲ್ಲಿ ಇವನನ್ನು ಬಹು ದೊಡ್ಡ ಮನುಷ್ಯನೆಂದೂ ಮತ್ತು ಇವನಿಂದ ತಮಗೆ ಮಹದುಪಕಾರವಾಗುವುದೆಂದೂ ಇವನು ಬಹಳ ಒಳ್ಳೆಯವನೆಂದೂ ತಿಳಿದು ಇವನನ್ನು ನಂಬಿ ಇವನ ಹೇಳಿಕೆಯಂತೆ ಅಲ್ಲೇ ಒಂದು ಸಂಘ (Society) ವನ್ನು ಸ್ಥಾಪಿಸಿದರು.'

ಅಪರಾಧಿ:—Yes! your Honour! (ಹೌದು ಮಹಾಸ್ವಾಮಿ) ನಾನು ಈ ಅನಾಗರೀಕರನ್ನು ಉದ್ಧಾರಮಾಡಲು ಬಹು ಕಷ್ಟಪಟ್ಟು, ನಾನೂ ಸಹ ಬಹಳ ಓದಿ, ಬಿ. ಎ., ಬಿ. ಎಲ್. ಪ್ಯಾಸ್ ಮಾಡಿ ಆ ಹಳ್ಳಿಯ ಜನರನ್ನು ಬಹು ಬುದ್ಧಿವಂತರನ್ನಾಗಿ ಮಾಡಿದ್ದೇನೆ ಮಹಾಸ್ವಾಮಿ. ನಾನೂ ಸಹ ಒಬ್ಬ ಅಡ್ವೊಕೇಟ್.

ಯಮ:—ಎಲಾ! ಬಾಯಿ ಮುಚ್ಚು. ಇದು ನಿಮ್ಮ ಕೋರ್ಟುಗಳಲ್ಲ, ಬಾಯಿಗೆ ಬಂದದ್ದೆಲ್ಲಾ ಹರಟಿ, ಕಾಲ ಕಳೆಯುವುದಕ್ಕೆ! ಚಿತ್ರಗುಪ್ತನು ಹೇಳುವುದೆಲ್ಲಾ ಕೇಳುತ್ತಿರು.

ಚಿತ್ರಗುಪ್ತ:—ಸ್ವಾಮಿ! ಇವನು ಸಂಘದ ಸೆಕ್ರೆಟರಿಯಾದ ಕೆಲವು ವರುಷಗಳು ಏನೂ ತಿಳಿಯದವನಂತೆ ಇದ್ದು, ಆ ಮೇಲೆ ಆ ಮೆಂಬರುಗಳು ತಂದಿಟ್ಟಿದ್ದ ಹಣದ ರುಚಿಯನ್ನು ಕೊಂಚ ಕೊಂಚವಾಗಿ ನೋಡುತ್ತಾ ಬಂದು, ಕಡೆಗೆ ಯಾರಾದರೂ ಮೆಂಬರುಗಳು ತಮ್ಮ ಕಷ್ಟವನ್ನು ನಿವಾರಿಸಿಕೊಳ್ಳುವುದಕ್ಕೋಸ್ಕರ, ಸಾಲವಾಗಲಿ, ಮತ್ತೇನನ್ನಾದರೂ ಕೇಳಿದರೆ ಕೊಡದೆ ಬಹು ತೊಂದರೆಪಡಿಸಲು ಪ್ರಾರಂಭಿಸಿದನು. ಅದೂ ಅಲ್ಲದೆ ಯಾರಾದರೂ ಹೊಸ ಷೇರಿಗಾಗಲಿ ಕೇಳಿದರೆ ಏನಾದರೊಂದು ಸುಳ್ಳು ನೆಪವನ್ನು ಅವನ ಮೇಲೆ ಹಾಕಿ ತನಗೂ ಮತ್ತು ತನ್ನ ಕಡೆಯವರಿಗೂ ಬೇಕಾದಷ್ಟು ಸಾಲಗಳನ್ನೂ ತೆಗೆದುಕೊಂಡು ಆನಂದಪಡುತ್ತಿದ್ದನು. ಅಲ್ಲದೆ ಇವನ ಜೊತೆಗೆ ಮತ್ತಿಬ್ಬರು ಗುಮಾಸ್ತೆಯರೂ, ಗಾಳಿಬೆಂಕಿಗಳಂತೆ ಸೇರಿಕೊಂಡು, ಆ ವೂರನ್ನೇ ಹಾಳುಮಾಡಿದ್ದಾರೆ. ಇವನು ತನ್ನ ಲಾಯರ ವೃತ್ತಿಯಲ್ಲಿ ಸುಳ್ಳನ್ನೆಲ್ಲಾ ನಿಜವಾಗಿಯೂ, ನಿಜವನ್ನೆಲ್ಲಾ ಸುಳ್ಳಾಗಿಯೂ ಮಾಡಿ 'ಮೂರು ದೋಸೆ ಕೊಟ್ಟರೆ ಅತ್ತೆಯ ಕಡೆ, ಆರು ದೋಸೆ ಕೊಟ್ಟರೆ ಸೊಸೆಯ ಕಡೆ' ಎಂಬಂತಾಗಿದ್ದಾನೆ. ಇವನು ಸ್ವಜನ ಪ್ರೇಮಿ. ಅದರ ಮೇಲೆ ಇವನು, ಬಾಯಲ್ಲಿ ಗಾಂಧಿ ಉಪಾಸಕ. ಆದರೆ ಕಾರ್ಯತಃ ಬಹಳ ಪಕ್ಷಪಾತಿ. ಇವನಿಗಿರುವ ಅಹಂಕಾರ, ಕ್ರೋಧ ಭೂಮಂಡಲದಲ್ಲಿ ಯಾರಿಗೂ ಇಲ್ಲ. ಇದೇ ಇವನ ಸಮಾಚಾರ.

ಯಮ:—ಲೋ! ಅಯ್ಯಂಗಾರಿ! ಕೇಳಿದೇನೋ? ನೀನು ಜನಗಳನ್ನು ಉದ್ಧಾರ ಮಾಡಿ ಅವರ ತಲೆಯ ಮೇಲೆ ಕಿರೀಟ ಇಟ್ಟದ್ದು! ನೋಡುವುದಕ್ಕೆ ಆಳುದ್ದದ ನಾಮ. ಜನರನ್ನು ಮಾಡುವುದು ನಿರ್ನಾಮ. ಲೋ ಇವನ ಇಬ್ಬರು ಗುಮಾಸ್ತರನ್ನೂ ಕರಿಯಿರಿ. ನೋಡೋಣ ಅವರ ಮೋರೆಗಳು. (ಭಟರು ಇಬ್ಬರನ್ನೂ ತಳ್ಳಿಕೊಂಡು ಬರುವರು.) ಏನ್ರೀ-ೀ-ೀ ನೀವು ಆಚಾರ್ರಿದ್ದ ಹಾಗೆ ಕಾಣುತ್ತೆ. ಚೆನ್ನಾಗಿ ಜನಗಳ ದುಡ್ಡನ್ನು ತಿಂದು ಬೊಜ್ಜು ಬೆಳೆಯಿಸಿಕೊಂಡಿದ್ದೀರಾ? ನಿನಗೆ ಈಗಲೇ ೫೦ ವರುಷವಾಗಿದೆ ನಿನಗೆ ಮದುವೆ ಮಾಡಿಕೊಳ್ಳಬೇಕೆಂದು ಆಸೆ ಬೇರೆ ಇದೆಯೋ? ಪಾಪ! ಆ ಹುಡುಗಿ ತಲೆಯ ಮೇಲೆ ಬಂಡೆ ಬೇರೆ ಹಾಕಬೇಕೇನೋ? ಏಮಿರಾ? ಶಾಸ್ತ್ರೀ! ಚೆನ್ನಾಗಿದ್ದೀಯಾ? ಹೋಗಲಿ! ಲೋ! ಭಟರಿರಾ! ಈ ಅಯ್ಯಂಗಾರಿಯನ್ನು ಕರೆದುಕೊಂಡುಹೋಗಿ ಇವನು ಉದ್ಧಾರ ಮಾಡಿದ ಊರಿನಲ್ಲೇ ಹೆಣ್ಣುನಾಯಿಯಾಗಿ ಬೀದಿ ಬೀದಿ ಅಲೆಯುತ್ತಾ ೧೦೦ ವರುಷದ ವರೆಗೂ ಅನುಭವಿಸಲಿ! ಆ ಮೇಲೆ ಪುನಃ ಶಿಕ್ಷೆ ವಿಧಿಸೋಣ. ಮತ್ತೆ ಈ ಅಚಾರ್ರನ್ನು ಸ್ಮಶಾನದಲ್ಲಿ ಹೆಣ್ಣುಪಿಶಾಚಿಯಾಗಿ ರಾತ್ರಿಹಗಲೆನ್ನದೆ ಹೊಟ್ಟೆಗಿಲ್ಲದೆ, ಹೋ! ಎಂದು ಕೂಗುತ್ತಾ ಕೋರ್ಟು ಏಳುವ ತನಕ ಬಿದ್ದಿರಲಿ. ಈ ಶಾಸ್ತ್ರಿಗೆ ಆ ಸಂಘದಲ್ಲಿ ದೀಪದ ಹುಳುವಾಗಿ ಸಾಯುತ್ತಲೂ ಹುಟ್ಟುತ್ತಲೂ ಬಿದ್ದಿರಲಿ! ಎಲ್ಲರನ್ನೂ ಕರೆದುಕೊಂಡು ಹೋಗು. ಪಾಪಿಗಳು! ನನ್ನ ಮುಂದೆ ನಿಲ್ಲಿಸಬೇಡ!

ಅಪರಾಧಿಗಳು:—ಸ್ವಾಮೀ! ತಾವು ದಯವಿಟ್ಟು ನಮಗೆ ಇನ್ನೊಂದು ಹಿಯರಿಂಗ್ (Hearing) ಹಾಕಿ ಕೇಸು ಅಡ್ಜರ್ನ್ (Adjourn) ಮಾಡಬೇಕು ಸ್ವಾಮಿ! ಅಷ್ಟರಲ್ಲಿ ನಾವು ಒಬ್ಬ ಕೇಪಬಲ್ (capable) ಆವ ಲಾಯರನ್ನು ಇಟ್ಟುಕೊಳ್ಳುತ್ತೇವೆ.

ಯಮ:—ಎಲಾ! ನೀಚರುಗಳಿರಾ! ಇದು ನಿಮ್ಮ ಕೋರ್ಟುಗಳೆಂದು ತಿಳಿದಿರಾ? ಬಡಪಾಯಿಗಳನ್ನು ಸುಮ್ಮನೆ ಅಡ್ಜರ್ನ್ ಅಂತ ಹೇಳಿ ಬಂದಾಗಲೆಲ್ಲಾ ದುಡ್ಡು ಸುಲಿಗೆ ಮಾಡುತ್ತಿರುವುದಕ್ಕೆ ನಿಮ್ಮಗಳ ಹಾಗೆ ಅಡ್ಜರ್ನ್ ಆಗಿ ಆಗಿ ಕೊನೆಗೆ ಒಂದು ದಿನಸ ಹಿಯರಿಂಗ್, ಆ ಮೇಲೆ ಆರ್ಗ್ಯುಮೆಂಟ್ (Argument), ಆ ಮೇಲೆ ಜಡ್ಜ್‌ಮೆಂಟ್ (Judgment) ಅಂತ ತಿಳಿದ್ದಿರೋ? ಯಾವ ಕೇಪಬಲ್ ಲಾಯರೂ ಇಲ್ಲಿ ಬಂದು ಏನೂ ಮಾಡಲಾರ. ನಮ್ಮಲ್ಲಿ ಎಲ್ಲಾ ಆಗಲೆ. ನಮ್ಮಲ್ಲಿ ಸುಳ್ಳು ಇಲ್ಲವೇ ಇಲ್ಲ. ನಾನಾರೆಂದು ತಿಳಿದೆ! ನಾನೇ 'ಧರ್ಮರಾಜ'! ಧರ್ಮಕ್ಕೆ ಒಡೆಯ! ತಳ್ಳಿರೋ! ಇವರನ್ನು! (ಭಟರು ತಳ್ಳಿಕೊಂಡು ಹೋಗುವರು).

ಯಮ:—Mr. ಚಿತ್ರಗುಪ್ತ, ಈ ದಿನ ಇನ್ನಾರಿದ್ದಾರೆ? ಬೇಗ ಕರೆಸು. (ಭಟರು ಒಬ್ಬನನ್ನು ಕರೆದುಕೊಂಡು ಬಂದು ನಿಲ್ಲಿಸುವರು) ಇವನಾರಯ್ಯ! ಇವನು! ಯುರೋಪಿಯನ್ ಶಾಸ್ತ್ರಿಯಾಗಿದ್ದಾನೆ. (European Sastry) ಇವನ ಸಮಾಚಾರವೇನು? ಈ ಬ್ರಾಹ್ಮಣರ ಕೇಸು ಬಹಳವಾಗಿದೆಯಲ್ಲಾ?

ಚಿತ್ರ:—ಸ್ವಾಮಿ! ಇವನು ಒಬ್ಬ ಮುಲಕನಾಡು ಬ್ರಾಹ್ಮಣ. ಇವನೂ ಸಹ ಒಬ್ಬ ಬಿ. ಎ., ಬಿ. ಎಲ್. ಪ್ಯಾಸು ಮಾಡಿದ ಅಡ್ವೋಕೇಟ್. ಇವನಂತಹ ಆಶಾಪಾತಕನು ಮತ್ತಾರೂ ಇಲ್ಲ. ಮೊದಲು ಈತನು ಸರ್ಕಾರಿ ಕೆಲಸದಲ್ಲಿದ್ದು, ಲಾಯರ ಕೆಲಸದಲ್ಲಿ ಬಹು ಸಂಪಾದನೆಮಾಡಬಹುದೆಂದು ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಲಾಯರಾದನು. ಲಾಯರಾದ ಮೇಲೆ ಮೊದಲು ಮೊದಲು ಕೇಸು ಚೆನ್ನಾಗಿ ನಡೆಸಿದನು. ಆದರೆ ಬರುತ್ತಾ ಆಶೆಯು ಜಾಸ್ತಿಯಾಗಲು ಬಂದ ಕಕ್ಷಿಗಾರರ ಕೂಡೆಲ್ಲಾ ದುಡ್ಡು ವಸೂಲುಮಾಡಿ ಎಲ್ಲರ ಕೇಸನ್ನೂ ಹಾಳುಮಾಡಿ ಬಂದವರನ್ನೆಲ್ಲಾ ಗೋಳಾಡಿಸಿದನು. ಕಕ್ಷಿಗಾರರು ಏನನ್ನಾದರೂ ಕೇಳಿದರೆ ಸಾಕು, ತಟ್ಟನೆ ಮೇಲೆ ಬಿದ್ದುಬಿಡುವವನ ಹಾಗೆ ಹಾರಾಡುತ್ತಾ ಒಬ್ಬರಿಗೂ ಸಮುಜಾಯಿಸಿ ಹೇಳದೆ ಎಲ್ಲರಿಗೂ ಹಿಂಸೆಕೊಡುತ್ತಿದ್ದನು. ತಾನೇ ದೊಡ್ಡ ಮನುಷ್ಯನೆನ್ನಿಸಿಕೊಳ್ಳಬೇಕೆಂದು ಹಾರಾಡುತ್ತಿದ್ದನು. ಅದೇ ಊರಿನಲ್ಲಿಯೇ ಇವನನ್ನು ಯಾರೋ ಒಂದು ದೇವಸ್ಥಾನದ ಜೀರ್ಣೋದ್ಧಾರದ ಕಾರ್ಯಕ್ಕಾಗಿ ಧರ್ಮಧರ್ಶಿಯನ್ನಾಗಿ ನೇಮಿಸಿದರು. ಇವನು ಧರ್ಮಧರ್ಶಿಯಾದ ಮೇಲೆ ಅಲ್ಲಿನ ಪೂಜಾರಿಗೆ ಬಂತು ಪೀಕಲಾಟ. ತಮ್ಮ ಕಟಾಕ್ಷವನ್ನೆಲ್ಲಾ ಅವನ ಮೇಲೆ ಬೀರಿದರು. ಯಾವುದಾದರೂ, ದೀಪಾರಾಧನೆಯೇ ಆಗಲಿ ಉತ್ಸವವೇ ಆಗಲಿ, ಏನೇ ಆಗಲಿ, ತಾನು ಬರುವ ವರೆಗೂ ಪೂಜಾರಿಗಳೂ, ಜನರೂ ಕಾದಿರಬೇಕು.

ಅಪರಾಧಿ:—You See! Your Honour! ಅಸ್ ಸೂನ್ ಅಸ್ ಐ ಬಿಕೇಮ್ ಯೆ ಧರ್ಮಧರ್ಶಿ, ಐ ಇಂಪ್ರೂವ್ಡ್ ದಿ ಟೆಂಪಲ್ ಟು ಯೆ ವೆರಿ ಗ್ರೇಟ್ ಎಕ್ಸ್ಟೆಂಟ್, ಯುವರ್ ಆನರ್!

ಯಮ:—ಮುಚ್ಚು ಬಾಯಿ. ಕೇಳು ನೀನು ಮಾಡಿರುವ ಉದ್ಧಾರ.

ಚಿತ್ರ:—ಅಲ್ಲದೆ ಈತನು ಅಖಿಲಭಾರತ ಮುಲಕನಾಡು ಸಂಘವೊಂದನ್ನು ಬೇರೆ ಸ್ಥಾಪಿಸಿ ಸ್ವಜನಗಳನ್ನು ಉದ್ಧಾರ ಮಾಡುತ್ತೇವೆಂದು ಜನಗಳನ್ನು ನಂಬಿಸಿ ಅವರಿಗೆ ಯಾವ ಉಪಕಾರವನ್ನೂ ಮಾಡದೆ ಸುಮ್ಮನೆ ಉಪನ್ಯಾಸ, ಪಾರ್ಟಿ ಸಂಘಗಳನ್ನು ಸ್ಥಾಪಿಸುತ್ತಾ, ಚಂದಾ ವಸೂಲುಮಾಡುತ್ತಾ ದೇವರ ಹೆಸರಿನದನ್ನು ತಾನೇ ಉಪಯೋಗಿಸಿಕೊಳ್ಳುತ್ತಾ, ಎಲ್ಲರನ್ನೂ ನಂಬಿಸಿ ಅವರಿಗೆ ಯಾವುದೂ ದಿಕ್ಕು ತೋಚದೆ ಮಾಡಿ, ನಂಬಿದವರಿಗೆ ಯಾವ ಮತದಲ್ಲಿಯೂ ಪ್ರವೇಶವಿಲ್ಲದಂತೆ ಮಾಡಿರುತ್ತಾನೆ. ಅಲ್ಲದೆ, ಯಾವುದಾದರೂ ಬೇವಾರ್ಸು ಸ್ವತ್ತು ಕೇಳಿದರೆ ಸರಿ, ಅದನ್ನು ಸ್ವಾಹ ಮಾಡುವುದಕ್ಕೆ ಎಷ್ಟು ಪ್ರಯತ್ನ ಬೇಕೋ ಎಲ್ಲಾ ಮಾಡಿ ಎಲ್ಲರ ಬಾಯಿ ಬಡಿದು ಎಲ್ಲರನ್ನೂ ಉದ್ಧಾರಮಾಡಿದವನು ಇವನೇ ಸ್ವಾಮಿ.

ಯಮ:—ಏನಯ್ಯಾ! ಕೇಳಿದೆಯಾ? ಸರಿ, ಇವನು ಉದ್ಧಾರಮಾಡಿದ ದೇವಸ್ಥಾನದಲ್ಲಿ ೧೦೦ ವರುಷ ಜಿವಟೆಯಾಗಿಯೂ, ಮತ್ತೆ ೧೦೦ ನೂರು ವರುಷ ಅಲ್ಲಿಯೇ ಕಸ ಗುಡಿಸುವವನಾಗಿಯೂ ಇರಲಿ. ಆ ಮೇಲೆ ನೋಡೋಣ. ತಳ್ಳಿ ಇವನನ್ನು. (ದಬ್ಬಿಕೊಂಡು ಹೋಗುವರು.

ಯಮ:—ಎಲ್ಲಿ, ಇನ್ನೊಬ್ಬನನ್ನು ಕರೆತನ್ನಿ. (ಭಟರು ಒಬ್ಬ ಯುವಕನನ್ನು ಕರೆತರುವರು). ಯಾರಯ್ಯಾ! ಇವನು? ಒಳ್ಳೆ ಫಿರಂಗಿಯವನಂತೆ ಇದ್ದಾನೆ?

ಚಿತ್ರ:—ಸ್ವಾಮಿ, ಇವನೊಬ್ಬ ಅಧುನಿಕ ಶಿಕ್ಷಣವನ್ನು ಪಡೆದ ಬ್ರಾಹ್ಮಣ ಯುವಕ. ಇವನ ಹಿರಿಯರೆಲ್ಲಾ ಬಹು ದೊಡ್ಡ ಮನುಷ್ಯರು, ಮತ್ತು ಒಳ್ಳೆಯ ಗೌರವಸ್ಥರು. ಮಹಾ ಉದಾರಿಗಳು.

ಯುವಕ:—ಎಸ್ ಯುವರ್ ಲಾರ್ಡ್‌ಷಿಪ್. ಐ ಹ್ಯಾವ್ ಪಾಸ್ಡ್ ದಿ ಲಂಡನ್ ಮೆಟ್ರಿಕ್ಯುಲೇಷನ್ ಅಂಡ್ ವೆಂಟ್ ಟು ಫಾರಿನ್ ಕಂಟ್ರೀಸ್ ಫಾರ್ ಹಯ್ಯರ್ ಸ್ಟಡೀಸ್.

ಯಮ:—ಲೋ! ನಿನ್ನ ಆ ಗಲೀಜು ಭಾಷೆ ಇಲ್ಲಿ ಬೇಡ. ಸ್ವಲ್ಪ ತಡಿ.

ಚಿತ್ರ:—ಇವನು ವಿದ್ಯಾವಂತನಾದ ಮೇಲೆ ಇವನ ತಂದೆ ತಾಯಿಗಳು ಮದುವೆಗಾಗಿ ಪ್ರಯತ್ನಿಸಲು ಕೆಲವು ಗೌರವಸ್ಥರು ಹೆಣ್ಣು ಕೊಡುವುದಾಗಿ ಹೇಳಿದರು. ಆದರೆ ನಮ್ಮ ಯುವಕನು ಬಂದವರಿಗೆಲ್ಲಾ ತನ್ನ ಬೆಲೆ ೧ ಲಕ್ಷ ರೂಪಾಯಿಗಳೆಂದು ಹೇಳಿ ಎಷ್ಟೋ ಸಂಸಾರಗಳನ್ನು ಹಾಳು ಮಾಡಿದ ಪುಣ್ಯಾತ್ಮ.

ಯುವಕ:—ಹೌದು. ನಾನು ಲಕ್ಷಾಂತರ ರೂಪಾಯಿಗಳು ಖರ್ಚುಮಾಡಿ ಓದಿದ್ದಕ್ಕೆ ಫಲವೇನು? ನನ್ನ ಖರ್ಚುಗಳನ್ನೆಲ್ಲಾ ಕೊಡುವರ್ಯಾರು? ಅದಕ್ಕಾಗಿ ನನ್ನ Bid one Lakh ಅಂತ ಹೇಳಿದ್ದು ನಿಜ.

ಯಮ:—ಸರಿ, ನೀನು ಬಹು ಪುಣ್ಯಾತ್ಮ. ಇವನು ಯಾವ ಯಾವ ಮನೆಗಳನ್ನು ಹಾಳುಮಾಡಿದನೋ ಅವರ ಮನೆಗಳಲ್ಲಿ ನೂರು ನೂರು ವರುಷಗಳು ಜಾಕಿ ಮಾಡಿಕೊಂಡು ಮಾತುಗಳನ್ನೆಲ್ಲಾ ಕೇಳಿಕೊಂಡು ಅವರ ಮನೆಯ ಎಂಜಿಲನ್ನು ತಿನ್ನುತ್ತಿರಲಿ. ತಳ್ಳಿ ಇವನನ್ನು.

ಸಾಕು, ಈ ದಿನಕ್ಕೆ ಇಷ್ಟು ಸಾಕು. ಏನು ಬ್ರಾಹ್ಮಣರು ಇವರು! ಮಾಡೋದು ಅನಾಚಾರ, ಮನೆ ಮುಂದೆ ಬೃಂದಾವನ ಎಂತ ಎಲ್ಲಾ ಬ್ರಾಹ್ಮಣರದೇ ಜಾಸ್ತಿಯಾಗುತ್ತಾ ಇದೆ. ಏನು ಬ್ರಾಹ್ಮಣರಪ್ಪಾ! ದೇವರು, ಭಯ, ಭಕ್ತಿ ಎಲ್ಲಾ ಹೋಗಿಬಿಟ್ಟಿದೆಯಲ್ಲಾ? ಆಗಲಿ, ಎಲ್ಲಾ ಒಳ್ಳೆಯದಕ್ಕೆ. 'ಕುರಿ ಕೊಬ್ಬಿದಷ್ಟು ಕುರುಬನಿಗೆ ಲಾಭ.'

ECONOMY

The Practice of rigid economy will make you a better businessman, a better man to your family and friends and a better citizen generally. We do not encourage any one to be stingy. But many persons have never stopped to consider, that between practicing economy and being stingy there is a vast difference.

A BANK ACCOUNT HERE WILL HELP YOU TO SAVE MONEY SENSIBLY.

THE PALAI CENTRAL BANK, LTD,

(INCORPORATED IN TRAVANCORE.)

BUNDER ROAD, MANGALORE.

London Agents— Lloyds Bank, Ltd.

New York— National City Bank of New York.

ಮೊಡರ್ನ್ ಡ್ಯಾಮಮಂಡ್ಸ್.

MODERN DIAMONDS

ಆಧುನಿಕ ಕ್ರಮದಂತೆ ಸಾಣೆ ಹಿಡಿದ ಈ 'ನವೀನ ಮಾದರಿಯ ವಜ್ರಗಳು' ಮೈಮರೆಯಿಸುವಂಥ ಶುಭ್ರ ಪ್ರಕಾಶದಿಂದ ಹೊಳೆಯುತ್ತಿದ್ದು ಅವನ್ನು ಧರಿಸುವವರ ಅಂಗಸೌಂದರ್ಯವನ್ನು ಅತಿಶಯವಾಗಿ ಹೆಚ್ಚಿಸುತ್ತಿವೆ.

ಕಲ್ಕತ್ತೆಯ ಹಂಗಾಮಿ ಚೀಫ್ ಜಸ್ಟೀಸರಾದ ಮಾನ್ಯ ಸರ್. ಎಮ್. ಎನ್. ಮುಖರ್ಜಿಯವರ ಅಭಿಪ್ರಾಯ.

ಈ ಅತ್ಯಪೂರ್ವವಾದ ವಜ್ರಗಳು, ಸ್ವಾಭಾವಿಕವಾದ, ಬಹಳ ಬೆಲೆಯುಳ್ಳ, ಅಪರೂಪವಾದ, ಅಮೂಲ್ಯ ರತ್ನಗಳಿಗೇ ಸರಿಸರಿಯಾಗಿವೆ ಎಂಬೀ ಸಂಗತಿಯು ನನ್ನ ಅನುಭವಕ್ಕೆ ಬಂದಿದೆ, ಸಂತೋಷವಾಗಿದೆ ಎಂಬುದನ್ನು ನಿಮಗೆ ನಾನು ತಿಳಿಸಬೇಕಾಗಿದೆ. ಈ ನಿಮ್ಮ ನಿರ್ಮಾಣವು ಎಲ್ಲರಿಂದಲೂ ಸ್ಪೃಹಣೀಯವಾದ ಮನ್ನಣೆಯನ್ನು ಪಡೆಯುವುದಲ್ಲದೆ, ನಿಮ್ಮ ಉದ್ಯೋಗಕ್ಕೂ, ಹಿಂದೀ ಸಾಹಸಕಾರ್ಯಕ್ಕೂ ಯಶಸ್ಸನ್ನೂ ಸಂಪಾದಿಸಿ ಕೊಡುವಲ್ಲಿಯೂ ಎಂದೂ ವಿಫಲವಾಗಲಾರದೆಂದೂ ನಾನು ನಂಬುತ್ತೇನೆ.

ವಿಚಾರಿಸಿದಲ್ಲಿ ಎಲ್ಲ ವಿವರಗಳನ್ನೂ ಉಚಿತವಾಗಿ ಒದಗಿಸಲಾಗುವುದು.

C. C. Acharyulu & Son,
Jewellers and Gem Experts,
Post Box No. 543, Park Town, Madras.

ಅಪೂರ್ವ ಲಾಭ! ಒಳ್ಳೆ ಸಮಯ!!
ಎಂದಿಗೂ ದೊರೆಯಲಾರದು!!!

ವಿವಾಹ ಜಾತಕ ಕುಂಡಲಿ ಪದಕ ಗ್ರಂಥ

ಈ ಅಪೂರ್ವ ಗ್ರಂಥವನ್ನು ಸಣ್ಣ ಹುಡುಗರು, ಹೆಣ್ಣು ಮಕ್ಕಳು ನೋಡಿ ೫ ನಿಮಿಷಗಳಲ್ಲಿ ಗುರುಬಲ, ಶನಿಬಲ ಹೇಳಲಿಕ್ಕೆ ಬರುತ್ತೆ. ಒಂದು ಪಾವು ಪುಡಿಯಲ್ಲೆ ಗ್ರಹ ರಾಶಿ ಕುಂಡಲಿಯನ್ನು ಹಾಕಿ ಲಗ್ನ ಸಾಧಿಸಿ, ಜನ್ಮಲಗ್ನ ಕುಂಡಲಿ, ಅಂಶ ಕುಂಡಲಿ, ನಕ್ಷತ್ರ, ಆಷ್ಟಂತ ಇಷ್ಟಕಾಲ, ಚಂದ್ರಚಾರ, ಗ್ರಹದಶಾನಿರ್ಣಯ, ಶಿಶುವು ಹುಟ್ಟಿದ ನಕ್ಷತ್ರ ದೋಷ, ಯಾರ್ಯಾರಿಗೆ ಅರಿಷ್ಟವಾಗುವದು, ಶಾಂತಿ ದಾನಕೊಡುವ ಕ್ರಮ, ಶಿಶುವಿಗೆ ಇಷ್ಟನೆ ವರುಷಗಳಲ್ಲಿ ಬಾಲಾರಿಷ್ಟವುಂಟಾಗುವದು, ಇದರ ಪರಿಹಾರಕ್ಕೆ ಶಾಂತಿಕ್ರಮ, ಶಿಶುವಿಗೆ ಜನನಾದಿಯಾಗಿ ಆಯುಷ್ಯದ ವರೆಗೂ ಇಪ್ಪತ್ತಪ್ಪನೇ ವರುಷಗಳಲ್ಲಿ ಇಂಥಾ ಕಂಟಕಗಳು ಜರುಗುವ ವಿಷಯ, ಇಷ್ಟೆ ವರುಷ ಆಯುಷ್ಯವನ್ನು ತಿಳಿದು ಜಾತಕಪತ್ರಿಕೆಯನ್ನು ಬರೆಯಲಿಕ್ಕೆ ಬರುತ್ತೆ. ಬೇಕಾದ ಮಾಸದಲ್ಲಿ ಬಲವಾದ ವಿವಾಹಲಗ್ನವನ್ನು ತೆಗೆದು:— ಸುಮುಹೂರ್ತಕಾಲವನ್ನು, ತಾರಾಬಲ, ಚಂದ್ರಬಲವನ್ನು ಕಂಡುಹಿಡಿದು, ಲಗ್ನಪತ್ರಿಕೆಯನ್ನು ಬರೆದು ಕಂಕಣಧಾರಣ, ಮಾಂಗಲ್ಯಧಾರಣ ಮುಂತಾದ ಎಲ್ಲಾ ವಿವಾಹಕಾರ್ಯಗಳನ್ನು ಆಯಾಯ ಮಂತ್ರಗಳಿಂದ ಮಾಡಿಸುವ ವಿವಾಹವಿಧಿಯನ್ನು ಜೆನ್ನಾಗಿ ಬರೆದಿರುತ್ತೆ. ೨ ನಿಮಿಷದಲ್ಲೆ ಗಂಡು ಹೆಣ್ಣಿನ ಸಾಲಾವಳಿಯಲ್ಲಿ ಇಷ್ಟು ಗುಣಗಳು ಬರುತ್ತವೆಂಬುವದನ್ನು ತಿಳಿಯುತ್ತೆ. ಮನೆ ಕಟ್ಟುವ, ಆಯ, ಧನ, ಋಣ, ಆಯುಷ್ಯ ಮುಂತಾದ ಯಾವತ್ತು ಬರತಕ್ಕ ಉದ್ದ ಅಗಲದ ಮೊಕಗಳ ಸಂಖ್ಯೆಯನ್ನು ಹಾಕಿರುತ್ತೆ. ಬೇರೆ ಗುಣಿಸುವ ಅವಶ್ಯಕವಿಲ್ಲ. ಬೆಲ್ಲ, ಆಡಿಕೆ, ಅಕ್ಕಿ, ಬೆಳ್ಳಿ, ಭಂಗಾರ ಮುಂತಾದ ಯಾವತ್ತೂ ಪದಾರ್ಥಗಳಿಗೆ ಪ್ರತಿದಿನವು ತೇಜಿ ಮಂದಿ ಆಗುವ ವಿಷಯವನ್ನು ಸುಲಭವಾಗಿ ತಿಳಿಯುವ ಕ್ರಮ, ವೇದಮಂತ್ರಗಳಿಂದ ಸರ್ವಗ್ರಹಶಾಂತಿ ಮಾಡುವ ಕ್ರಮ, ಶನಿ ಜಪ ಕ್ರಮ ಇನ್ನೂ ಅನೇಕ ಅಪೂರ್ವ ವಿಷಯಗಳನ್ನೂ ಹಾಕಿರುತ್ತೆ. ಮೇಲ್ಕಂಡ ಎಲ್ಲಾ ಮರ್ಮಗಳನ್ನು ತಿಳಿಯಲಿಕ್ಕೆ ಬಂದು ಶ್ಲೋಕವನ್ನು ಕಲಿಯುವದೂ ಗಣಿತ ಮಾಡುವದೂ ಅವಶ್ಯಕವಿಲ್ಲ. ಯಾರ ಸಹಾಯ ಬೇಕಿಲ್ಲ.. ಹಾಗಿಲ್ಲ ಬಿದ್ದರೆ ವಾಪಸು ಮಾಡಿರಿ. ಈ ಅಪೂರ್ವ ಗ್ರಂಥವನ್ನು ಪ್ರತಿಯೊಬ್ಬರು ತರಿಸಿಕೊಂಡು ತಮ್ಮ ಸಂಸಾರದಲ್ಲಿ ಸುಖ ಹೊಂದಿರಿ.

ಕ್ರಯ ಪ್ರತಿ ೧ಕ್ಕೆ ರೂ. ೧-೦-೦.

ವಿಳಾಸ:— ಮೇನೇಜರ್,
ಟಿ. ಹೆಚ್. ಎಂ. ಅಂಡ್ ಕೊ.,
ಹರಪನಹಳ್ಳಿ (ಜಿಲ್ಲಾ ಬಳ್ಳಾರಿ.)

For all kinds of
NEAT AND ACCURATE PRINTING,
please consult
The Saraswathi Printing Works, Ltd.,
MANGALORE, S. K.



ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ



ಡಿ. ಗೋಪಾಲಾಚಾರ್ಯರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಸ್ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರವ್ಯಾಧಿಗಳಿಗೂ ಸಿದ್ಧೌಷಧವು. ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು.

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು:—ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶೋಕ್

ಬೋನಸ್
ಪ್ರತಿ ಸಾವಿರಕ್ಕೆ ರೂ. 10/-
ಅದೂ
ಪ್ರಥಮ ಮೂಲ್ಯವೇತನದಲ್ಲಿಯೇ.

ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.

ಗುಜರಾಥಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡೈರೆಕ್ಟರರ ಮಂಡಲಿಯಲ್ಲಿ, ದೆಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನದ ಮಾಜೀ ಪ್ರೆಸಿಡೆಂಟರಾದ ಸೇಟ್ ರಾಂಚೋಡ್‌ಲಾಲ್, ಕಟ್ನಿಯ ಸಿಮೆಂಟ್ ಮತ್ತೂ ಇಂಡಸ್ಟ್ರಿಯಲ್ ವರ್ಕ್ಸ್, ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್ ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜಿ. ವಿ. ಮಾವಲಂಕರ್, ಬೀ. ಏ., ಎಲ್. ಎಲ್. ಬಿ. ಇಂಥವರೂ ಇತರರೂ ಇದ್ದಾರೆ.

ಕಂಪೆನಿಯ ಏಕ್ಚುವೆರಿಯಾದ ಶ್ರೀ. ಜಿ. ಎಸ್. ಮರಾತೇ, ಎಂ. ಏ., ಏ. ಐ. ಏ. ಇವರು ಬರೆಯುವುದೇನೆಂದರೆ:—

'ಮೂಲ್ಯವೇತನದ ಫಲವು ಉತ್ತೇಜನಕಾರಿಯೆಂದು ಎಣಿಸಬೇಕು. ನಿಮ್ಮ ಕಂಪೆನಿಯು ಕಷ್ಟದ ಸಮಯವಾದ ಒಂದೊಂದು ಆಪತ್ತಿಯನ್ನೀಗ ದಾಟಿದೆ. ಯಾವ ಆ ಸಮಯದ ಒಂದು ಭಾಗದಲ್ಲಿ ನೀವೂ, ಜನತೆಯೂ ಅನಿಶ್ಚಿತವಾದ ವಿದ್ಯಮಾನಗಳ ಅನುಭವವನ್ನು ಪಡೆದಿರೋ ಯಾವ ಆ ಸಮಯದಲ್ಲಿ ನಿಮ್ಮ ಆಫೀಸಿನ ಉದ್ಯೋಗಿಗಳು ಕೊಂಚ ಮಟ್ಟಿಗೆ ಸಾರ್ವಜನಿಕ ಸೇವೆಯನ್ನು ಸಮರ್ಪಿಸಲು ಯತ್ನಿಸಿದರೋ, ಆ ಸಮಯದಲ್ಲಿ, ನಿಮ್ಮ ಕೆಲಸಕಾರ್ಯಗಳ ಮೇಲೆ ವಿಶೇಷವಾದ ಮಾನಸಿಕ ಪರಿಶ್ರಮದ ಭಾರವು ಹೇರಿರಲೇ ಬೇಕು; ಆದರೆ, ಇಷ್ಟೊಂದು ಸಂಕಷ್ಟಾನುಭವವನ್ನು ಮಾಡಿಕೊಂಡೂ, ನೀವು ಇಷ್ಟೊಂದು ಶೀಘ್ರಗತಿಯ ವೃದ್ಧಿಯನ್ನು ಸಾಧಿಸುವ ಹಾಗೆ, ನಿಮ್ಮ ಕಂಪೆನಿಯು ಪ್ರದರ್ಶಿಸಿದ ಈ ವೃದ್ಧಿಗತಿಯನ್ನು ಜನತೆಯೂ ಮೆಚ್ಚಿರಬೇಕೆಂದು ನಾನು ಭಾವಿಸುತ್ತೇನೆ...ಆದುದರಿಂದ, ನೀವು... ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ತೋರಲು ಸಮರ್ಥರಾಗುವಿರೆಂದು ನನ್ನ ನಂಬಿಕೆ.'

ಚುರುಕಾದ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:

THE ASHOK INSURANCE CO., LTD.,
9, Forbes Street, Fort, BOMBAY. Raikhad, AHMEDABAD.
ಅಥವಾ ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
ನಾಥ ಬ್ರದರ್ಸ್, 3, ಆಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ
ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ **ದ್ರಾಕ್ಷಾಮೃತ** ಮೊದಲನೇ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರಗಳಿಂದ ಶಾಸ್ತ್ರೋಕ್ತ, ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೇಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಬಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟು ನಿಂತಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ಸಂತರ ತಿಳಿದೀತು.

ಪ್ರಮಾಣ:—ಸಸಿಕಿನಲ್ಲಿ ಒಂದು ತೊಲೆ ಮತ್ತು ಸಂಜಿಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೩॥ ರೂ.
೧ ಡಜನ್ ಬಾ. ಬೆಲೆ ೧೩ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಷ್ಟ ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು–ಮಿಜಾರಕರ ಬ್ರದರ್ಸ, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ,
ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತಂಕಪೇಟೆ.
ಕಾರ್ಕಳ—ವ್ಹಿ. ವ್ಹಿ. ಶೆಣೈ.
ಕುಂದಾಪುರ–ಕೆ. ಆರ್. ಭಡಜೀ.
ಕಾಸರಗೋಡು—ಕೆ. ರಾಮು ನಾಯ್ಕ ಮತ್ತು ಭಕ್ತ ಬ್ರದರ್ಸ್.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೊಅರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

MODERN PRINTING AT MODERATE RATES!
CONSULT
The Saraswathi Printing Works, Limited,
CANTONMENT, MANGALORE.

ದುರ್ವಾಸ-ಭೋಜನ

[ಮೂಲ್ಕಿ ವೆಂಕಣ್ಣ ಕವೀಶ್ವರರ ಇನ್ನೊಂದು ಗಂಭೀರವಾದ ಕಾವ್ಯ ಪ್ರಬಂಧ. 'ತರುಮೂಲದೆಡೆಗಳೆಲ್ಲವ ತಣುಪಿಸೇ ॥ ಕೊನೆಗಳ್ಗೆ ಬೇರೆ ನೀರೆರೆಯಲುಂಟೇ?' M. NARASING RAO.]

(ರಾಗ ರೇಗುಪ್ತಿ, ತಾಳ ಝುಂಪೆ; ಪಲ್ಲವನ್ನು ಬಿಟ್ಟಿಲ್ಲ ವಾರ್ಥಿಕ ಪಟ್ಟಿಕ)

ಶ್ರೀಕೃಷ್ಣನೊಲಿದ ಭಕತರಿಗೆ ಭಯವಿಲ್ಲ ಅ-।
ಪ್ರಾಕೃತಾನಂದಸ್ವರೂಪನಾಗಿರುವಾ ॥ ಪಲ್ಲ ॥

(೧)

ಕವಟ ಜೂಜಿಂದ ಸೋಲ್ತಿಸುತ ಸರ್ವಸ್ವನ- ।
ನ್ನಪಹರಿಸಿ ಕೌರವಂ ಕುಂತೀಕುಮಾರರಂ ।
ವಿಪಿನಕಟ್ಟಲ್ಕೈಂಟು ವರ್ಷವಂ ಕಳೆದು ಯಮು-
ನಾ ನದಿಯ ತಟದೊಳಿರಲೂ ॥

ದ್ವಿವನಗರಕೊಂದು ದಿನ ದುರ್ವಾಸನೈತರ- ।
ಲ್ಕವರಮಿತ ಸಂಭ್ರಮೋತ್ಸಾಹದಿನಿದಿರ್ಗೊಂಡು ।
ತಪಸಿಯನ್ನೀರೆಂಟ್ಟು ಸಾವಿರದ ಶಿಷ್ಯಸಮು-
ದಾಯವಂ ಕರೆತಂದನೂ ॥ ಶ್ರೀ ಕೃಷ್ಣ.... ॥

(೨)

ಸುರುಚಿರಾಸನದಿ ಕುಳ್ಳಿರಿಸಿ ಮಧುಪರ್ಕಮಂ ।
ವಿರಚಿಸುತ ಷಡ್ರಸಾದಿಗಳ ಭೋಜನದಿ ಸ- ।
ತ್ಕರಿಸಿ ಸಂತುಷ್ಟಿಯಂ ಪಡಿಸೆ ಮುನಿನಾಥ ಮೆ-
ಚ್ಚಿದೆ ವರವ ಬೇಡೆನಲ್ಕೇ ॥

ತೆರಳುವುದು ಪಾಂಡವರ ಬಳಿಗೆ ನೀವ್ ಭೋಜನಾಂ- ।
ತರಸಮಯಕೆಂದು ಬಿನ್ನಯಿಸಲೊಪ್ಪುತಲಾಗ ।
ಮರುದಿವಸ ಶಿಷ್ಯರಂ ಬೆರಸಿ ನಡೆತಂದ ಕುಂ-
ತಿಜರಿರುವರಣ್ಯದೆಡೆಗೇ ॥ ಶ್ರೀ ಕೃಷ್ಣ.... ॥

(೩)

ಸದಮಲದ ಭಕ್ತಿಯಿಂ ಸೋದರರ್ವೆರಸಿ ಮುನಿ- ।
ಪದಕೆರಗಿ ದರ್ಭಾಸನದಿ ಕುಳ್ಳಿರಿಸುತರ್ಘ್ಯ- ।
ಮಧುಪರ್ಕದಿಂದ ಸತ್ಕರಿಸಿ ಮಜ್ಜನಕಖಿಳ-
ರಂ ಬೀಳುಗೊಟ್ಟು ಬಳಿಕಾ ॥

ಸುದತಿಯಂ ಕರೆಸುತ್ತೆತಂದ ಭಾವವ ತಿಳಿದು ।
ಬೆದರಿದಂ ಮನದೊಳಗೆ ಬಂದ ದುರ್ವಾಸಾದ್ಯ- ।
ರುದರದ ಕ್ಷುಧಾಗ್ನಿಯಂ ತಣುಪಿಸದಿರಲ್ ಕೋಪಿ-
ಸುವನೆಂದು ಚಿಂತಿಸಿದನು ॥ ಶ್ರೀ ಕೃಷ್ಣ.... ॥

(೪)

ರುದ್ರನೀತಂ ಸುರಪನತುಲ ಸಂಪದವಂ ಸ- ।
ಮುದ್ರದೊಳಗರ್ದ್ದಿದಂ ಭೂಪಾಂಬರೀಷನನು- ।
ಪದ್ರವಿಸೆ ಚಕ್ರದಿಂದುಳಿದನಲ್ಲದೆಯವನ
ರೋಷದಿಂದುಳಿದರುಂಟೇ ॥

ಅದ್ರಿಧರನೇ ಬಲ್ಲನೆನುತಾಗ ಕಳವಳಿಸೆ ।
ಭದ್ರದಿಂ ಸುರಭಿಯಂ ತಹೆನೆಂದು ಭೀಮನೆನ- ।
ಲುದ್ರಿಕ್ತಮಲ್ಲ ಶ್ರೀ ಕೃಷ್ಣನಲ್ಲದೆ ಕಾಯ್ವ-
ರಿಲ್ಲೆಂದನಾ ಧೌಮ್ಯನೂ ॥ ಶ್ರೀ ಕೃಷ್ಣ.... ॥

(೫)

ಎನಲರಸಿ ನುಡಿದಳಿಮ್ಮನಸರಕ್ಕೊದಗುತಿಹ ।
ಹೊಣೆಗಾರ ಕೃಷ್ಣನಂ ಭಾವಿಸುವೆನೀಗಳೆಂ- ।
ದೆನುತರ್ಕಮಂಡಲವನೀಕ್ಷಿಸುತ ನಿಮಿಲಿತೇ-
ಕ್ಷಣೆಯಾಗಿ ಕರಪುಟವನೂ ॥

ಅನುಸರಿಸಿ ಮಸ್ತಕದೊಳಿಟ್ಟು ಚಿನ್ಮಯಮೂರ್ತಿ- ।
ಯನು ಹೃದಯದೊಳ್ ಧಾರಣಂಗೆಯ್ದು ದೃಢದಿ ಧಾ- ।
ರಿಣಿಯ ಮೇಲೂರಿ ಪದದುಂಗುಟವನಮಲ ಚಿ-
ತ್ತದಿ ನೆನೆದಳಾ ಹರಿಯನೂ ॥ ಶ್ರೀ ಕೃಷ್ಣ.... ॥

(೬)

ಕಾಮುಶತಕೋಟಿಲಾವಣ್ಯನಂ ಪುಣ್ಯನಂ ॥
ತಾಮರಸಸಂಭವನ ತಾತನಂ ಖ್ಯಾತನಂ ।
ರಾಮಣೀಯಕ ಕೋಮಲಾಂಗನಂ ರಂಗನಂ
ಮಂಗಲತರಂಗವೆನಿಪಾ ॥

ಶ್ರೀಮನೋಹರ ಸತ್ಕಲಾಪನಂ ಭೂಪನಂ ।
ಕಾಮಿತಪ್ರದ ಘನಶ್ಯಾಮನಂ ರಾಮನಂ ।
ಪ್ರೇಮಸದ್ಭಕ್ತಸಂಕೃಷ್ಟನಂ ಕೃಷ್ಣನಂ
ನೆನೆದಳಾ ಪಾಂಚಾಲೆಯೂ ॥ ಶ್ರೀ ಕೃಷ್ಣ.... ॥

(೭)

ಘೋರತಾಪತ್ರಯವಿದೂರ ದನುಜಾಟವಿಕು- ।
ಠಾರ ಸಕಲಾಗನುವಿಚಾರರಂಜಿತ ಜನೋ- ।
ದ್ಧಾರ ಧಂಣೀಧರ ಅಪಾರಸಲ್ಲೀಲಾವ-
ತಾರ ಪಾವನಚರಿತ್ರಾ ॥

ವಾರಪಿತ ಮೋಹನಾಕಾರ ಭಯಕೃತ್ಸ್ನಸಂ- ।
ಹಾರ ವಾರಾಂನಿಧಿಗಭೀರ ತ್ರೈಭುವನದಾ- ।
ಧಾರ ವರಕೀರ್ತಿವಿಸ್ತಾರ ಕರುಣಾಬ್ಧಿ ಶ್ರುತಿ-
ಸಾರ ಮೈದೋರೆಂದಳೂ ॥ ಶ್ರೀ ಕೃಷ್ಣ.... ॥

(೮)

ಶ್ರುತಿತತಿಗಗಮ್ಯ ಸನ್ನುತತಪೋನಿಷ್ಠ ವರ- ।
ಮತಿಗಗೋಚರ ಸದಾಮೃತಮೂರ್ತಿ ಭಕ್ತಸರ- ।
ತತಿರಕ್ಷ ಸತತಸದ್ವ್ರತಭರಿತ ದೇವಕೀ-
ಸುತ ಸುರಾರ್ಚಿತಚರಣನೇ ॥

ಗತನಯನನಾತ್ಮಜನ ಕೃತಕದಿಂದೈತಂದ ।
ಯತಿಯತಿಥಿ ಕೂಟವ ಕೃಪುತಿ ಪಡಿಸದಿರಲಿಕುಪ- ।
ಹತಿಯೆಸಗದಿರನು ನೀನತಿ ದಯದಿ ಶ್ರೀರಮಾ
ಪತಿಯೆ ಮೈದೋರೆಂದಳೂ ॥ ಶ್ರೀ ಕೃಷ್ಣ.... ॥

(೯)

ನೆರೆ ಧ್ರುವ ಪ್ರಹ್ಲಾದ ಬಲಿ ವಿಭೀಷಣರನು- ।
ದ್ಧರಿಸಿದಂದದಲಂಬರೀಷನಂ ಕಾಯ್ದಂತೆ ।
ಮರೆಯದೀಕ್ಷಣದಿ ಮೈದೋರನಾಥರ ನಾಥ-
ಎಂದು ದ್ರೌಪದಿ ಧ್ಯಾನಿಸೇ ॥

ಅರಿತನಾಗಳ್ ಜಗದ್ಭರಿತ ಶ್ರೀಕೃಷ್ಣ ತವ ।
ಕರುಣಮಿನ್ನೆನಿತೊ ಭಕ್ತರ ಮೇಲೆ ತೀವ್ರದಿಂ ।
ಗರುಡವಾಹನನಾಗಿ ಸರಿದನಾಗಳ್ ಸಕಲ
ಸುರವರರು ಘೇಯೆನ್ನಲೂ ॥ ಶ್ರೀ ಕೃಷ್ಣ.... ॥

(೧೦)

ಅತ್ತಲರಸುವ ನಿಗಮಪಾಟಿಗಳ ಕೋಟಿಗಳ ।
ಚಿತ್ತಕೊದಗುತಿಹ ಪರಮಾತ್ಮ ನಿತ್ಯಾತ್ಮ ಪರ- ।
ವಸ್ತು ತಾನೆಂಬೀ ಮಹಾತತ್ವಮಂ ಜಗಕೆ
ತಾನಾಗ ಬೆರಸಿ ಮೆರಸೀ ॥

ಇತ್ತಲೀ ಪಾಂಚಾಲೆ ನೆನೆದಾಗ ಬಲುಬೇಗ ।
ಚಿತ್ತವಿಸುತಲಿ ಮನುಜನಾಟಕದ ಪಾಟಕದ ।
ಭಕ್ತಸುಲ್ಲಭ (!) ನೆನಿಪ ಮೂರ್ತಿಯನ್ನರ್ತಿಯಿಂ
ಕಂಡರಾ ಪಾಂಡುಸುತರೂ ॥ ಶ್ರೀ ಕೃಷ್ಣ.... ॥

(೧೧)

ಪದಕೆರಗಲನಿಬರಂ ತೆಗೆದಪ್ಪಿ ಸಂತವಿಸು- ।
ತಧಿಕವಹ ಪ್ರೇಮದಿಂ ದ್ರೌಪದಿಯ ಬಳಿಗೈದಿ ।
ಮುದದಿ ನುಡಿಸಿದನೆಲೌ ತಂಗಿ ಎನ್ನಂ ಬರಿಸಿ-
ದಾ ಕಾರಣವನುಸಿರೆನೇ ॥

ಹೃದಯದೊಳ್ ಧ್ಯಾನಿಸುವ ಚಿನ್ಮಯಾತ್ಮಕನ ಬಾ- ।
ಹ್ಯದಿ ಕಂಡು ಕಣ್ದೆರೆದು ಕಮಲಾಕ್ಷಿ ಭಕ್ತಿಭಾ- ।
ವದಿ ಚರಣಕೆರಗಿ ಜಯ ಜಯ ನಮೋ ಜಯ ಭಕ್ತ-
ವತ್ಸಲ ನಮೋ ಎಂದಳು ॥ ಶ್ರೀ ಕೃಷ್ಣ.... ॥

(೧೨)

ಕೃತಕದಿಂ ತಪ್ಪ ಸಾಧಿಸ ಬಂದ ದುರ್ವಾಸ- ।
ನತುಲ ಕ್ಷುದ್ಬಾಧೆಯಂ ತಣುಪಿಸಲುಪಾಯವದು ।
ಮತಿಗೆ ಗೋಚರಿಸಲಿಲ್ಲದರಿಂದ ತವಪದಾ-
ಬ್ಜಗಳ ಮರೆಹೊಕ್ಕೆನೆನುತಾ ॥

ನುತಿಸುತಿಹ ಪಾಂಡವೆರ ರಾಣಿಯಾ ಶಿರವ ನೆಗ- ।
ಹುತ ನುಡಿದನೆಲೆ ತಂಗಿ ಪಸಿದಿರ್ಪೆನೆನ್ನಂ ಕೃ- ।
ಪುತಿಗೊಳಿಸಿ ಮತ್ತೆ ನಿನ್ನಯ ಕಾರ್ಯಭಾರವಂ
ಜತನದಿಂ ಪೇಳಲಹುದೂ ॥ ಶ್ರೀ ಕೃಷ್ಣ.... ॥

(೧೩)

ಚರದೊಳಚರದೊಳು ಭರಿತನ ನಿತ್ಯತೃಪ್ತನಂ ।
ಪರಿತೃಪ್ತಿ ಪಡಿಪೆನೆಂತೆನೆ, ಸಾಕು ತಂಗಿ ಕ್ಷುಧೆ- ।
ಯ್ಯುರವಣಿಸುತಿದೆ ನಿನ್ನ ಪಾತ್ರದೊಳಗುಳ್ಳುದಂ
ವಂಚಿಸದೆಯುಣಿಸೆಂದನೂ ॥

ತರುಣಿ ತತ್ಪಾತ್ರದೊಳು ಕೈಯಿಕ್ಕುತರಸಲುಳಿ- ।
ದಿರುವ ಕಿಂಚಿಚ್ಛೇಷ ಶಾಕಪತ್ರವನು ಶ್ರೀ- ।
ವರನ ವಂಕಮಲಹಸ್ತದೊಳಿಡಲ್ ಬ್ರಹ್ಮಾರ್ಪ-
ಣಂ ಎನುತ ಸವಿದುಂಡನೂ ॥ ಶ್ರೀ ಕೃಷ್ಣ.... ॥

(೧೪)

ಚರದೊಳಚರದೆ ಭರಿತನಹ ನಿತ್ಯತೃಪ್ತನುರಿ ।
ಪರಿತುಷ್ಟನಾಗಿ ಧರ್ಮನೆ ತೇಗಲತ್ತ ಮುನಿ- ।
ವರರ ದುರ್ವಾಸಮುಖ್ಯರ ಕ್ಷುಧೆಗಳಡಗುತ-
ಳ್ಳೆಗಳುಬ್ಬುತುದರಂಗಳೂ ॥

ಭರಿತನಾಗಲ್ ತಿಳಿದು ಮನದಿ ದುರ್ವಾಸನೈ- ।
ತರುತಖಿಳ ಶಿಷ್ಯಸಮುದಾಯದಿಂದೊಡಗೂಡಿ ।
ಅರರೆ ಗೋವಿಂದ ಬಂದನೆನುತ್ತಿರೆಲ್ ಕಾಣು-
ತಿದಿರೆದ್ದನಾ ಕೃಷ್ಣನೂ ॥ ಶ್ರೀ ಕೃಷ್ಣ.... ॥

(೧೫)

ಮುನಿವರನ ಚರಣಕ್ಕೆರಗಲ್ಕೈತರಲ್ಕೆ ಘ- ।
ಕ್ಕನೆ ತೊಲಗಿ ವಂದಿಸುತ ಕುಳ್ಳಿರಿಸಿ ಶ್ರೀಕೃಷ್ಣ- ।
ನನು ನುಡಿದನೆಲೆ ಪರಾತ್ಪರ ಮೂರ್ತಿ ತರುಮೂಲ-
ದೆಡೆಗಳೆಲ್ಲವ ತಣುಪಿಸೇ ॥
ಕೊನೆಗಳ್ಗೆ ಬೇರೆ ನೀರೆರೆಯಲುಂಟೇ ದೇವ ।
ಅಣುರೇಣುತೃಣಕಾಷ್ಟಭರಿತ ತಾ ತುಷ್ಟಿಸಲು ।
ವನಜೋದ್ಭವಾಂಡ ತೃಪ್ತಿಸದಿಹುದೆ ಕೃಷ್ಣ ತವ
ಮಹಿಮೆಗೆ ನವೋ ಎಂದನೂ ॥ ಶ್ರೀ ಕೃಷ್ಣ.... ॥

(೧೬)

ಕರುಣದಿಂ ಭೋಜನವ ಕೈಗೊಂಬುದೆನುತ ಪದ- ।
ಕೆರಗಲರಸಂಗೆಂದನೆಲೆ ಭೂಪ ನಿಮ್ಮಗಳ ।
ಪರಿಪಾಲಿಸುವ ಕೃಷ್ಣನಿರಲನ್ಯರಿಂದಲೇ-
ನಹುದು ಕುಹಕೋಪಾಯಮಂ ॥

ಕುರುರಾಯನೆಸಗಲ್ಕೆತಂದೆ ಶ್ರೀವಿಷ್ಣುಪದ- ।
ದರುಶನವದಾಯ್ತು ಸುಖವಹುದಿನ್ನು ನಿಮಗೆನುತ ।
ಹರಿಗೆ ನಮಿಸುತ್ತಖಿಳ ಶಿಷ್ಯರೊಡಗೂಡಿ ತೆರ-
ಳಿದನಾಗ ದುರ್ವಾಸನೂ ॥ ಶ್ರೀ ಕೃಷ್ಣ.... ॥

(೧೭)

ಮಂಗಳವದಾಯ್ತು ತನ್ನೈದು ವೈದುನರನಾ- ।
ಲಿಂಗಿಸುತ ದ್ರೌಪದಿಯ ಸಂತವಿಸಿ ದಯದಿ ಯದು- ।
ಪುಂಗವಂ ದ್ವಾರಕೆಗೆ ತೆರಳ್ದನಿತ್ತಲು ಪಾಂಡು-
ಸುತರಿರ್ದರತಿ ನೋ

ತುಂಗಬಲವಾಯುರಾರೋಗ್ಯಸುಖಮಖಿಳ ವಿ- ।
ಘ್ನಂಗಳಾ ಪರಿಹಾರ ಬರವೋದಿ ಕೇಳ್ದ ಜನ- ।
ರಿಂಗೆ ಸಂಪದವಿತ್ತು ಪೊರೆವ ಮೂಲಿಕೆಯ ಶ್ರೀ
ಗುರು ವೆಂಕಟೇಶನೊಲಿದೂ ॥ ಶ್ರೀ ಕೃಷ್ಣ.... ॥



ನಾವು ಈ ವಾಚನ್ನು ಮಾಡಿದ್ದೇವೆ.
ಕೆಲಸ ಮಾಡುವ ಜನರಿಗಾಗಿ!

ಪ್ರತಿಯೊಬ್ಬ ಕೆಲಸ ಮಾಡುವವನು ಪಡೆಯಲು ಸಾಧ್ಯವಾದ ವಾಚೀಗ ಇಲ್ಲಿದೆ. ರೂ. 13—8—0 ಕ್ರಯದ 'ವೆಸ್ಟ್ ಎಂಡ್' ವಾಚಿದು ರಚನೆಯ ಮತ್ತು ಸಾಮಗ್ರಿಗಳ ಕುಂದುಕೊರತೆಗಳಿಂದ ಬಾಹಿರವಾದುದೆಂದು ಭರವಸೆಯುಳ್ಳುದಾಗಿದೆ. 'ಸೆಕುಂಡಸ್' ಕೀ ಇಲ್ಲದ ಲೀವರ್ ಪೊಕೆಟ್ ವಾಚು ಬಲವಾಗಿಯೂ, ವಿಶ್ವಾಸಾರ್ಹವಾಗಿಯೂ ಮತ್ತು ಸುಂದರವಾಗಿಯೂ ಇದೆ. ಅದು ವರ್ಷಾಂತರಗಳ ವರೆಗೂ ನಿಖರಕಾಲವನ್ನೇ ಕೊಡುವುದು.

ದಿ 'ಸೆಕುಂಡಸ್'

ಕೀಲೆಸ್ ಲೀವರ್ ಪೊಕೆಟ್ ವಾಚ್
ಏನೊಂದೂ ಖರ್ಚಿಲ್ಲದ್ದು ಮತ್ತು
ಭರವಸೆಯುಳ್ಳ ನಿಖರಕಾಲಸೂಚಿ
ನಿಕಲ್ ಬೆಳ್ಳಿಯದು
ರೂ 13—8—0.
ದೊಡ್ಡ ಸಚಿತ್ರ ಕೆಟಲಾಗು
ಅಪೇಕ್ಷಕರಿಗೆ ಉಚಿತ.

ವೆಸ್ಟ್ ಎಂಡ್ ವಾಚ್ ಕಂಪೆನಿ, ಬೊಂಬಾಯಿ ಮತ್ತು ಕಲ್ಕತ್ತ.

WEST END WATCH Co
BOMBAY CALCUTTA
86

ಹೊಸ ಪುಸ್ತಕ.

೧. **ನನ್ನ ಗೃಹಿಣಿ**:-(ಸೋಸಲ) ಪುಟ ೧೫೦; ಬೆಲೆ ೧೦ ಆಣೆ.
೨. **ಚೋದ್ಯಪುರದ ಚೋಜಿಗರಾಯ**:—(ಪೊಲಿಟಿಕಲ್) ಪುಟ ೩೩೨; ಬೆಲೆ ೨ ರೂ.
೩. **ಮೋಜಿನ ಜೀವನ**:—(ಡಿಟೆಕ್ಟಿವ್) ಪುಟ ೨೨೪; ಬೆಲೆ ೧—೪—೦ ರೂ.

ಇವುಗಳ ಹೊರತು ನಮ್ಮಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಪತ್ತೆದಾರಿ ನಾವೆಲ್ಲುಗಳೂ, ಚರಿತ್ರೆ, ನಾಟಕ, ಪಾರಮಾರ್ಥಿಕ ಪುಸ್ತಕಗಳೂ ದೊರೆಯುತ್ತಿವೆ.

ಶ್ರೀ ಶೇಷಾಚಲ ಪ್ರೆಸ್ಸು,
ಪೋಸ್ಟು ಆನಂದವನ, (ಜಿ. ಧಾರವಾಡ.)

ಸೂಚನೆ:- ಆರ್ಡರು ಕಳುಹಿಸುವವರು 'ಕಂಠೀರವ' ಪತ್ರಿಕೆಯ ಹೆಸರು ಬರೆಯಬೇಕು.

ತೊನ್ನಿಗೆ ಅದ್ಭುತ ಔಷಧಿ
(ರಿಜಿಸ್ಟರ್ಡ್)
ಗುಣ ದೊರಕದಿದ್ದರೆ ರೂ. 1000 ಬಹುಮಾನ!

18 ಪ್ರಕಾರಗಳ ಎಲ್ಲಾ **ಕುಷ್ಟ ರೋಗಗಳೂ, ಬಿಳಿ ತೊನ್ನು, ಚರ್ಮವ್ಯಾಧಿಗಳೂ** ಮತ್ತು **ಮೇಹ ಸಂಬಂಧ ರೋಗಗಳೂ,** ಬುಡ ಸಮೇತ ಕಿತ್ತುಹೋಗಿ, ಖಂಡಿತವಾಗಿಯೂ **ಗುಣ**ಹೊಂದುವುವು. 25 ವರ್ಷಗಳ ಜಗತ್ಪ್ರಸಿದ್ಧಿಯಿದೆ. ಇಂಜೆಕ್ಷನ್ ಮತ್ತು ಇತರ ಯಾವ ರೀತಿಯಲ್ಲಿಯೂ ಗುಣಹೊಂದದ ರೋಗಿಗಳೂ ಇದರಿಂದ ಗುಣಪಡೆದಿರುವರು. ಗುಣಕ್ಕಾಗಿ ಭರವಸವಿದೆ. ಕುಷ್ಟ ರೋಗ ಮತ್ತು ಚರ್ಮವ್ಯಾಧಿಗಳಿಗಾಗಿ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ.

ಸೇಲಮಿನ ಡಾ। ವಿ. ಎನ್. ಸಾಶನ್‌ರವರು ಬರೆಯುತ್ತಾರೆ:— ನಾನು ನಿಮ್ಮ **ಅತ್ಯಾಶ್ಚರ್ಯ ಕುಷ್ಟರೋಗ ನಿರ್ಮೂಲಿನಿ**ಯನ್ನು ಇಬ್ಬರು ಕುಷ್ಟರೋಗಿಗಳಿಗೆ ಉಪಯೋಗಿಸಿದ್ದು, ಪರಿಣಾಮವು ಉತ್ಕೃಷ್ಟವಾಗಿತ್ತು. **ಲಕ್ಷ್ಮಿ ಮತ್ತು ಕಂಪೆನಿ**ಯವರ ಸಿದ್ಧೌಷಧ ಇಂದ ಸಂಪೂರ್ಣ ಗುಣ ಹೊಂದಿದ ನಂತರ, ರೋಗಿಗಳ ರಕ್ತವನ್ನು ಪರೀಕ್ಷಿಸಿದಲ್ಲಿ, ಅದು ಕುಷ್ಟ ರೋಗದ ಮೊಳಿಕೆಗಳಿಂದ ವಿರಹಿತವಾಗಿತ್ತು. ಈ ಔಷಧವು ಅತ್ಯುತ್ತಮವೆಂದೂ, ಟೀಕೆಯೇನೂ ಅಗತ್ಯವಾಗಿಲ್ಲವೆಂದೂ ನಾನು ಕಂಡಿರುತ್ತೇನೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಬೇಕು.
ಯಾವತ್ತೂ ಮಾಹಿತಿಗಾಗಿ ಮತ್ತು ಕೆಟಲಾಗಿಗೆ ಬರೆಯುವರಿ ವಿಳಾಸ:—

ಮೆಸರ್ಸ್ ಲಕ್ಷ್ಮಿ ಅಂಡ್ ಕೋ. (ರಿಜಿಸ್ಟರ್ಡ್),
ತೊನ್ನು ಚಿಕಿತ್ಸಾ ಪ್ರವೀಣರು,
ವಾಲ್ಪೇರ್, ಆರ್. ಎಸ್. ಪೋಸ್ಟ್.

ಬಿಳೇ ತೊನ್ನು—
ಮತ್ತೂ ಕುಷ್ಟ ರೋಗ.

ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನೂ ಕುಷ್ಟರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ಸೂರಾರು ಮಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ಸ್ಪಷ್ಟವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.

Vaidiya Raj Akhila Kishori Ram,
No. 223, P. O., Katri Sarai. (GAYA).

8, 11-2. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

ಆರ್. ಮಾರ್ಟಿನ್ಸ್‌ರ
ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸಿದಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ, ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಈ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಸಿವಿಲ್ ಮತ್ತು ಮಿಲಿಟರಿ ಇಲಾಖೆಗೆ ಸೇರಿದ ಎಲ್ಲರಿಂದಲೂ ಹೊಗಳಲ್ಪಟ್ಟಿದೆ. ವೈದ್ಯರೂ ಪ್ರಶಂಸಿಸಿದ್ದಾರೆ. ಹೆಚ್ಚು ಮಾರಾಟವಾಗುತ್ತಿದೆ.

ಬೆಲೆ: ಸೀಸೆ ಒಂದಕ್ಕೆ ರೂ. 2—0—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟೆಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೆಟಿನ ಎದುರು,
ಬೊಂಬಾಯಿ.

The United India Life Assurance Co., Ltd.

Head Office: **MADRAS.** { ESTABLISHED: 1906. } Branch for Karnatak: **UDIPI.**

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.
A policy in United India will give you the maximum benefits.

For particulars apply to:—

M. K. SRINIVASAN, B. A., B. L.,
Managing Director.

OR

PANGALKAR BROTHERS,
DISTRICT & GENERAL AGENTS,
KODIALBAIL, MANGALORE.

THE TRAVANCORE NATIONAL BANK, LIMITED.

Head Office: ALLEPPEY.
London Agents: MIDLAND BANK LTD.

Bombay Office:—25-27, Church Gate Street, Fort, BOMBAY. MADRAS OFFICES: (1) 164, Broadway, (2) 183, Mount Road, (3) Luz-Corner, Mylapore & (4) Vepery (No. 1, Purasawalkam High Road).

BRANCHES EVERYWHERE IN SOUTH INDIA.

We have pleasure to announce that this Bank is now in a position to handle business on the following centres also:—

AGRA	CALCUTTA	HYDERABAD (Deccan)	LUCKNOW
AHMEDABAD	CAWNPORE	HYDERABAD (Sind)	RAICHUR
AMINABAD (Lucknow)	DACCA	JAMNAGAR	RANGOON
AMRITSAR	DELHI	KARACHI	SAMBHAR LAKE
AURANGABAD	GORAKHPORE	LAHORE	SECUNDERABAD

SURAT and other centres in Northern India.

ENQUIRIES SOLICITED.

Alleppey, 10th January 1936.

K. C. Eapen, B. A.,
Managing Director.

ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. **ಕೋಲನ್ ವಾಟರ್** (ರಿ. ನಂ. ೧೪೭೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.

೨. **ಮಸ್ಕ್ ಲವೆಂಡರ್**—ಕರನಸ್ತದಲ್ಲಿ ಉಪಯೋಗವಾಡತಕ್ಕೆ ಸುವಾಸನೆಯಾವ ಸೆಂಟು.

೩. **ಅನಂಷ್ ಸ್ನೋ**—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. **ಬ್ಲಿಲಿಯಂಟಾಯಿನ್**—ಕೂದಲಿನ ಸೌಂದರ್ಯಕ್ಕೋಸ್ಕರ ಆರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. **ಬ್ರಾಹ್ಮೀ ತೈಲ**—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. **ದ್ರಾಕ್ಷಾಸವ**—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಕ್ರಮವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. **ಆರಾಮೇತಿಪಾಲ್**—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. **ವೆಜಿಟೇಬಲ್ ಪೈನ್-ಹಂಟರ್**—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳ ಗೋಸ್ಕರ ಕೂಡಿಯತಕ್ಕ ಔಷಧ.

೯. **ರತ್ನಾಂಜನ ಪೇನ್ ಬಾಮ್**—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ.

೧೦. **ಕ್ರೀಸೋರಿಂಗಾ**—ಕಪ್ಪು ಅಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲವಾಡುತ್ತೆ.

೧೧. **ಓಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್**—ಕೇಶಗಳಿಗೋಸ್ಕರ ಗುಲಾಬಿಯ ಪರಿಮಳವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, 3.

KOHINOOR WORKS,
60 Abdul Rehiman Street,
BOMBAY, No. 3.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

Apply for particulars:—

K. R. GURU, *Managing Director.*

ವಿಚಿತ್ರ-ಚಿತ್ರ-ಪತ್ರಾವಳಿ

(ಮಳೆಗಾಲದ ಸಾಹಿತ್ಯ)

ಕಳೆದ ವರ್ಷ, ಪತ್ರಿಕಾತರ್ಕರಾದಂಥಾ ನಾವು, 'ಪತ್ರಾವಳಿ'ಯಂಥಾದ್ದರ ಕುರಿತು, ಜ್ಯಾಹೀರು ಹೊಗಳಿಕೆಯ ಪ್ರಕಟಣೆಯಂಥಾದನ್ನು, ಹೊರಡಿಸಿದಂಥಾ ಪ್ರಯುಕ್ತ, ನಮ್ಮ ಕಾರ್ಯಾ+ಲಯವಾದಂಥಾ ವಾಯುಮಂಡಲದ ಅರಮನೆಗೆ, ಅನೇಕವಾದಂಥಾ ಲೇಖಗಳು, 'ವಾಯರ್‌ಲೆಸ್' ರೈಲ್ವೆಯ ಮೂಲಕ ಬಂದು, ದೊಡ್ಡ ಗುಡ್ಡದ ಹಾಗೆ ರಾಶಿಬಿದ್ದಿವೆ. ಅವುಗಳಲ್ಲಿ 'ಆಕಾಶಮಂಡಲದಲ್ಲಿ ಕಾಗೆಗಳ ಟೀ ಪಾರ್ಟಿ' 'ಪ್ರಮಿಳೆ ಪಟ್ಟಣದಲ್ಲಿ ವಸ್ತ್ರಶಸ್ತ್ರಧಾರಣೆಯ ಪರಿಷತ್ತು' 'ನಂದಗೋಕುಲದಲ್ಲಿ ಗೋಪಿಯರ ಥಕ್ಕಥ್ಥೈ' 'ಕೈಲಾಸ ಪರ್ವತದಲ್ಲಿ ಲೆಫ್ಟ್ ಆ ನರೆಬಲ್ ದ್ರೋಣಾಚಾರ್ಯರ ವ್ಯಾಖ್ಯಾನ' ಇವೇ ಮೊದಲಾದುವೂ ಇರುವುದಲ್ಲದೆ, ಹಿಂದಿನ ಶಕಕ್ಕೆ ಸಂಬಂಧಪಟ್ಟ ಕೆಲವು ಬ್ರಹ್ಮಲಿಪಿಯ ಶಿಲಾಸ್ತಂಭಗಳ ಲೇಖಗಳೂ, ಮಾಲೆಗಳೂ ಇರುವುವು.

ಹಿಂದಿನ ಶಕದ ಆ ಪ್ರಾಚೀನ (ಕರ್ಮಾದ) ಲೇಖಮಾಲೆಗಳ ಚರಿತ್ರೆ ಬಹಳ ಕೌತುಕಮಯವಾಗಿದೆ. ಜಂಬೂ ದ್ವೀಪದಲ್ಲಿ, ಆಂಗ್ಲರಾಳಿಕೆಯ ಶಕದ ಈ ಇಸ್ವಿಯಲ್ಲಿ ಕನ್ಯಾಮಾಸ ವ ಸರ್ವಪಿತೃಗಳ ಅಮಾವಸ್ಯೆಯ ಶುಭ ತಿಥಿಯಂದು, ನಮ್ಮಂಥ ಹೊಟ್ಟೆಗಿಲ್ಲದ ಮಹಾನುಭಾವರೊಬ್ಬರು, ಹದಿನಾಲ್ಕು ಲೋಕಗಳನ್ನೂ, ಹದಿನೆಂಟು ಸಾಗರಗಳನ್ನೂ ಚಳಿಜ್ವರ ಹಿಡಿಸಿ ನಡುಗಿಸಿ, ಗುಡುಗಿಸುವಂಥ 'ಪತ್ರಾವಳಿ' ಎಂಬ ದಿವ್ಯ ಸಾಹಿತ್ಯ ಭೋಜನದ ಉಚ್ಚಿಷ್ಟ ಪತ್ರಿಕೆಯ ಹರಕಲು ಪುಟಗಳನ್ನು ಪ್ರಕಟಿಸುವವರಿದ್ದಾರೆಂದು, ಆ ಬ್ರಹ್ಮಲಿಪಿಯ ಪ್ರಾಚೀನ (ಕರ್ಮಾದ) ಲೇಖ ಬರೆದ, ಆ ಶುಂಠ ವಿದ್ವಾಂಸರು, ತಪೋಮಗ್ನರಾಗಿದ್ದ ಮಹಾ ಮಾರೀಚ ಮಹಾರ್ಷಿಗಳ ಜ್ಞಾನದೃಷ್ಟಿಯ ಬಲದಿಂದ ಅಂದೇ ತಿಳಿದವರಾಗಿ, ಆ ಲೇಖಗಳನ್ನು ಇಂದಿನ ಈ ಪತ್ರಿಕೆಯ ಬಗ್ಗೆಯೇ ಬರೆದಿಟ್ಟಂತೆ ತೋರುತ್ತದೆ.

ಅಲ್ಲದೆ, ಆ ಶಿಲಾಸ್ತಂಭಗಳಲ್ಲಿ ಬರೆದಿಡಲ್ಪಡೋಣಾದಂಥಾ ಆ ಲೇಖಗಳನ್ನೂ, ಹಿರಿಯಣ್ಣಾಕ್ಷನು ಭೂಮಿಯನ್ನು ಚಾಪೆಯಂತೆ ಸುತ್ತಿ, ಆ ಸುರುಳಿಯನ್ನು ಪಾತಾಳಕ್ಕೆ ಒಯ್ಯುವಂಥಾ ಸಮಯದಲ್ಲಿ ಅಲ್ಲಿಗೆ ಕೊಂಡುಹೋದನೆಂದೂ, ವರಹ ಅವತರಿಸಿ, ಆ ಚಾಪೆಯನ್ನು ಮೇಲೆ ತರುವಾಗ, ಈ ಶಿಲಾಸ್ತಂಭಗಳು ಆ ವರಹದ ದಾಡೆಗಳಿಗೆ ಭಾರವಾಗಿ, ಜಾರಿ, ಕೆಳಗುರುಳಿ ಅಲ್ಲೇ ಉಳಿಯಿತೆಂದೂ, ಅನಂತರ ಕೈಸ್ತವೇದಕಾಲದಲ್ಲಿ ಜಲಪ್ರಳಯವಾದಾಗ, ಈ ಶಿಲಾಸ್ತಂಭಗಳು ತೇಲುತ್ತಿದ್ದದ್ದನ್ನು ಕಂಡು, ಗೆದ್ದಲು ಹುಳುಗಳು ಕನಿಕರದಿಂದ ತಮ್ಮ ಗೂಡಿನಲ್ಲಿ ಇರಿಸಿ ಕಾಪಾಡಿದವೆಂದೂ, ಅನಂತರ ಕೆಲವು ಪ್ರಾಕ್ತನ ವಿದ್ವಾರ್ಯ ಮಂಡೂಕಪಂಡಿತರು, ಈ ಗೆದ್ದಲು ಹುಳಗಳನ್ನು ಬ್ರಹ್ಮಾಸ್ತ್ರದಿಂದ ಸಂಹಾರ ಮಾಡಿ, ಅವುಗಳನ್ನು ತಮ್ಮ ಸ್ವಾಧೀನ ಪಡಿಸಿಕೊಂಡು, ಅದರಲ್ಲಿನ ಒಂದಕ್ಷರವೂ ಅವರಿಗೆ ಅರ್ಥವಾಗದಿದ್ದರೂ, ಅವುಗಳನ್ನೆಲ್ಲಾ ಕನ್ನ+ಇಡಿಸಿ (ಕನ್ನಡಿಸಿ)ದರೆಂತಲೂ, ಅನಂತರ ಅವರ ವಂಶೀಯರಾದ ಯಾರೋ ವಾ—ನರನರರಿಂದ 'ಪತ್ರಾವಳಿ'ಯ ಪ್ರಕಟಣೆಗಾಗಿ ಅವು ಕಳುಹಿಸಲ್ಪಟ್ಟಿರುವುದೆಂದೂ ತಿಳಿದುಬರುತ್ತದೆ.

ಟಪ್ಪಣಿ:—ಈ ಶಿಲಾಸ್ತಂಭಗಳ ಮೂಲಲೇಖಕನು ಯಾರೆಂದು ತಿಳಿದುಬರುವುದಿಲ್ಲ. 'ಸಕಲ ಸರ್ವ ವಿಘ್ನಮಸ್ತು' 'ಅಮಂಗಲಾದಿ ಮುಂಡನ ಮಸ್ತು' ಎಂದು ಲೇಖವನ್ನು ಆರಂಭಿಸಿರುವುದರಿಂದ, ಈತನಿಗೆ ಗಣಪತಿಯ ಪರಿಚಯವಿದ್ದ ಹಾಗೆ ತೋರುವುದಿಲ್ಲ. ಅಲ್ಲದೆ, ಈತನ ಲೇಖಗಳಲ್ಲಿ ಎಲ್ಲಿಯೂ ದುರ್ಗಾಣಿಯ ಎಳ್ಳುಂಡೆ, ಕಾಸಿನ ಚಕ್ಕುಲಿ,-ಕಬ್ಬು, ಮತ್ತೂ ಪ್ಲೇಗಿನ ಇಲಿಗಳ ಸುದ್ದಿಯೇ ಇಲ್ಲದಿರುವುದರಿಂದ, ಈತನು ಗಣಪತಿ ಹುಟ್ಟುವುದಕ್ಕೂ ಮೊದಲೇ ಸತ್ತುಹೋದ ಒಬ್ಬ ಮಹಾ ಕವಿ ಎಂದು ತಿಳಿಯಬಹುದಾಗುತ್ತದೆ.

ಈತನ ಲೇಖಗಳಲ್ಲಿ ಸಿಗರೆಟ್, ಸೋಡಾ, ಲೆಮನೆಡ್‌ಗಳ ಉಲ್ಲೇಖವಿಲ್ಲದ ಕಾರಣ ಈತನು ಅಗ್ನಿ ಮತ್ತೂ ವರುಣರ ಆರಾಧಕನೂ ಅಲ್ಲ.

ಈತನ ಲೇಖಗಳಲ್ಲಿ 'ಶನಿ ಮಹಾರಾಯ' 'ಮಹಿರಾವಣ ದೇವಾಯ' ಎಂದಿರುವುದರಿಂದ ಈತನು ಪಾತಾಳ ಲೋಕದ ಮೈರಾವಣ ಚಕ್ರವರ್ತಿಯ ಆಸ್ಥಾನದಲ್ಲಿಯೋ, ಶನಿ ಮಹಾರಾಯನ ಸ್ವಸ್ಥಾನದಲ್ಲಿಯೋ ಇದ್ದ ಮಹಾ ಕವಿ ಎಂದು ತಿಳಿಯಬಹುದಾಗುತ್ತದೆ.

ಈತನ 'ಗೋತ್ರ' ಯಾವುದೆಂದು ತಿಳಿದುಬರುವುದಿಲ್ಲ. 'ಧೋತ್ರ' ಕಂಬಿಯವರು ಈತನ 'ಗೋತ್ರ' ನಿರ್ಣಯಕ್ಕಾಗಿ ಬಡಿಗೆ-ಕಸಬರಿಗೆಗಳಿಂದ ಹೊಡೆದಾಡಿಕೊಳ್ಳುತ್ತಾ, ಈತನು 'ಅಶ್ವ[ಪ]ಲಾಯನ' ಗೋತ್ರದವನಲ್ಲವೆಂದು ನಿರ್ಣಯಿಸಿದ್ದಾರೆ. ಈತನ ತಂದೆಯು ಗಂಡಸಾಗಿರಬೇಕೆಂದೂ, ತಾಯಿ ಹೆಂಗಸಾಗಿರಬೇಕೆಂದೂ, ಪಾಶ್ಚಾತ್ಯ ವಿದ್ವಾಂಸರಾದ ಮಿ॥ಗಳಾದ ಸ್ಪೋನ್, ವುಡ್, ಗೂಜ್, ಕುಕ್, ಬಟ್ಲರ್ ಮೊದಲಾದವರು ತಮ್ಮ ಅದೃಶ್ಯಆಧಾರಗ್ರಂಥವಾದ 'ಬ್ರಹ್ಮರಾಕ್ಷಸೋಪನಿಷತ್ತಿನ ಟೀಕೆ'ಯಲ್ಲಿ ಚರ್ಚಿಸಿ ಏಕಾಭಿಪ್ರಾಯವನ್ನೇ ಬರೆದಿರುತ್ತಾರೆ.

ಈತನ ಶಿಲಾಶಾಸನವನ್ನು ಕನ್ನ+ಇಡಿಸಿದವನು ಸುಮಾರು ಫಜ್ಜೇ ಮಹ್ಮನೂದನಿಗೂ ಅವರಂಗಜೀಬನಿಗೂ ನಡುವೆ ಇದ್ದವನು. ಮೂಲ ಕವಿಯ ಅನಂತರದವನು. ಈತನು ಬೆಳಗ್ಗೆ ಗೋಪಿಮುದ್ರೆ ಹಾಕಿಕೊಂಡು, ಮಧ್ಯಾಹ್ನ ವಿಭೂತಿ ಧಾರಣೆ ಮಾಡಿ, ಸಂಜೆ ತುರ್ಕೀ ಟೋಪಿಯೊಂದಿಗೆ ತ್ರಿನಾಮ ಹಾಕಿಕೊಳ್ಳುತ್ತಿದ್ದನೆಂದು, ಆತನ ಜಾತಿಯ ವಿಷಯದಲ್ಲಿ ತಿಳಿಯಬಹುದಾಗುತ್ತದೆ. ಈತನು, 'ಮೂಲಗ್ರಂಥದ ಅರ್ಥವಾಗದಿದ್ದರೂ ಭಾಷಾಂತರ ಮಾಡುವವರು ನನ್ನ ವಂಶೀಯರು; ಮುಂದೆ ಅವರು ನನ್ನ ಹೆಸರು ಹೇಳಿ ಬಾಳಿ ಬಾಳಲಿ'ಎಂದು ಆಗ್ರಹಪೂರ್ವಕವಾದ ಆಶೀರ್ವಾದದೊಡನೆ ನಿಲ ಕೈ ಹೊಡೆದು ಸತ್ತಂತೆ, ಯನು ಲೋಕದ ಚಿತ್ರಗುಪ್ತರ ರಿಕಾರ್ಡಿನಿಂದ ಕಂಡುಬರುತ್ತದೆ.

ಈ ಕನ್ನ+ಇಡಿಸಿದವರ ಸಮಕಾಲೀನರು (ಅಥವಾ ಸಮಕಾಲಿನವರು) ಯಾರೂ ಈಗ ಬದುಕಿರುವ ಹಾಗೆ ತೋರುವುದಿಲ್ಲ.

ಈ ಭಾಷಾಂತರಖಾರರಿಗೆ ಕನ್ನಡ ಲಿಪಿ ಬಂದಂತೆ ತೋರುವುದಿಲ್ಲ. ತಮಿಳು ಬರಹವೂ, ಕನ್ನಡ ಮಾತೂ ಬಂದಂತೆ ತೋರುತ್ತದೆ. ಇಂಗ್ಲೀಷಿನ ಶಬ್ದಗಳೂ ಕೆಲವು ಇವರಿಗೆ, ಹೇಗೊ ತಿಳಿದಿತ್ತಂತೆ.

ಇವರು ಪದ್ಯ ಪ್ರಿಯರಲ್ಲ; ಗದ್ಯಗಂಭೀರರು.' ಇವರು ಅಲ್ಲಲ್ಲಿ ಗದ್ದೆಗಳಲ್ಲಿ ಕುಳಿತೇ ಗದ್ಯ ಬರೆಯುತ್ತಿದ್ದರಂತೆ. ಇವರಿಗೆ 'ಪಳಗನ್ನಡಂ' 'ಸಿರಿಗನ್ನಡಂ' 'ಪೊಸಗನ್ನಡಂ' 'ತಿಳಿಗನ್ನಡಂ' 'ಪೂಗನ್ನಡಂ'-ಮೊದಲಾದ ಹಲವು ಕನ್ನಡಕಗಳು ಪ್ರಾಯಶಃ ಬರುತ್ತಿದ್ದುದರಿಂದ, ಅವರು ಆ ಎಲ್ಲ ಕನ್ನಡಗಳ ಬೆರಿಕೆ ಮಾಡಿ ಆ ಮುದ್ದಿಗನ್ನಡವಲ್ಲಿ ಬರೆಸಿಡುತ್ತಿದ್ದರಂತೆ.

ಇವರು ಯಾವ ಚಂಪೇ (ಚಂಪೂ) ಗ್ರಂಥಗಳನ್ನಾಗಲೀ ಭಾಷಾಂ+ತರಿಸಿದ್ದಿಲ್ಲ.

ಇದೇ ಲೇಖಕ ಮಹಾಶಯರ್ ಬರೆಸಿಟ್ಟಿರ್ಪ ಅನೇಕಾನೇಕ ಭಾಷಾಂತರ ಲೇಖಂಗಳೊಳ್, ನಮ್ಮ ಕರಗತವಾದ ಆ 'ಮಹಾಪುರುಷನೋರ್ವನ ಜೀವಿತ ಚರಿತಮಂ' ಬಹು ಪುಣ್ಯ ಪ್ರದವಾಗಿ ಇರ್ಪುದರಿಂದೆ, ಅದನೆ ಕೇಳ್ವರ್ ಕರಿಕರೆಗೊಂಡು ಬೇಸ+ರಂಬಡೆ+ದೋಡುವಂತೆ, ಪೇಳಲಾರಂಭಿಸುವುದು ಅದೆಂತು ಎಂದು ಒಡೆ:—

ಈ ಧರಾತಲದಲ್ಲಿ ಒಂದು ನಗರಂ. ಆ ನಗರದಲ್ಲಿ ಓರ್ವ ಗೃಹಸ್ಥಂ. ಆತಂಗೆ ಬಹುಕಾಲ ಮಕ್ಕಳಿಲ್ಲಂ. ಅಂತಿರಲು ಆತನ್ಹೆಂಡತಿ ಕಂಡ ಮೈಲಿಕಲ್ಲಿಗೆರಗಿ, ನೋಪಿಯನಾಂತು, ಬಸಿರಾಗಿ ಒಂದು ರತ್ನಪುತ್ರನಂ ಪಡೆದಳ್.

ಕೂಡಲೇ ಬಂದರ್ ಜೋಯಿಸರು. ಗುಣಿಸಿದರ್ ಗ್ರಹಗಳ್. ಜಾತಕ ಫಲವಂ ಕೇಳಲು ಕುಳಿರ್ದ್ದರಾ ಗೃಹಸ್ಥರು; ಹಿಂದೆ ನಿಂತಿರ್ದರಾ ಆ ಗೃಹಸ್ಥರ ಭಾವಂದರ್. ಜೋಯಿಸರ್ ಬಾಯ್ದೆರೆದು ಸುಳ್ಳು ಸುಳ್ಳು ಫಲಗಳಂ ಪೇಳ್ದರ್:—

ಈ ಮಾಣಿ ೨ ವರ್ಷಕ್ಕೆ ಕೂತುಕೊಂಡು, ೫ ವರ್ಷಕ್ಕೆ ನಿಂತು ೮ ವರ್ಷಕ್ಕೆ ನಡೆದು ೧೦ನೆಯ ವರ್ಷದಲ್ಲಿ ಮಾತಾಡುವನು.

ಈ ಮಾಣಿಯ ಶನಿಗ್ರಹವು, ತನ್ನ ಮೋಟಕಾಲನ್ನು ಸ್ವಲ್ಪ ಜಾಚಿ ರವಿಯ ತಲೆಯ ಮೇಲೆ ಇಟ್ಟದ್ದೇ ಆಗಿದ್ದರೆ, ಇವನು ಯುರೋಪಿನಲ್ಲಿ ಬಿಳಿಯ ಮಾಣಿಯಾಗಿ ಹುಟ್ಟುತ್ತಿದ್ದ. ಅಂಥಾ ಆನೆ ಕುದುರೆ ಯೋಗ.

ಈ ಮಾಣಿಗೆ ಸಾಯುವ ವರೆಗೆ ಆಯುಷ್ಯವಿದೆ.

ಈ ಮಾಣಿಗೆ ದೇಶೀಯ ವಿದ್ಯಾಭ್ಯಾಸ ತಲೆಗೆ ಹತ್ತಲಾರದು. ಕನ್ನಡ ಬರಲಾರದು. ಏ. ಬೀ. ಸೀ. ಡಿ. ಪರ್ಯಾಮವನ್ನಾ ವಿದ್ಯಾಭ್ಯಾಸದಲ್ಲಿ ಈ ಮಾಣಿ ಪಾರಂ+ಗತನಾಗುವನು. ಡಿಕ್ಷೆನರಿಯನ್ನು ಬಾಯಿಪಾಠ ಕಲಿಯುವನು. ಮುಂದೀತನು ಮಹಾ ಇಂಗ್ಲಿಸು 'ಗರ್ವಾ+ಲಿಸ್ಟ್' ಆಗಿ, ಯಾರಿಗೂ ಅರ್ಥವಾಗದ ಅಮೂಲ್ಯ ಲೇಖಂಗಳಂ ಪತ್ರಿಕೆಗಳ್ಗೆ ಬರೆಯುವನು.

ಈ ಮಾಣಿಗೆ ಬಹಿರ್‌ವ್ಯಾಪಾರಕ್ಕೆ ಒಂದೂವರೆ ಕಣ್ಣುಗಳೂ, ಅಂತರ್‌ವ್ಯಾಪಾರಕ್ಕೆ ಮೂರು ಕಣ್ಣುಗಳೂ ಇರುವುವು.

ಆ ಮೂರು ಕಣ್ಣುಗಳಲ್ಲಿ ಒಂದು ಕಣ್ಣು-ಒಂದು ಪಾಲಾಗಿ ಗುಡಿಸುವವರ ಮೇಲೆ; ಒಂದು ಕಣ್ಣು ಎರಡು ಪಾಲಾಗಿ ಸೇಫ್ಟಿ ರೇಜರ್, ಫೋಮೇಡ್ ವ್ಯಾಸ್ಲಿನ ಮೇಲೆ; ಮತ್ತೊಂದು ಕಣ್ಣು, ಮೂರು ಪಾಲಾಗಿ ಆಸ್ಪತ್ರಿ, ನರಸು, ಹಾಸಿಗೆಗಳ ಮೇಲೆ.

ಈ ಮಾಣಿಗೆ ನುಸಿ ಹಿಡಿಯುವುದೋ, ಹೊಡೆಯುವುದೋ, ತಿನ್ನುವುದೋ ಏನೋ ಒಂದು ಗೌರವಾರ್ಥದ ಘನ ಉದ್ಯೋಗ ದೊರಕುತ್ತದೆ. ಆದರೂ ನುಸಿ ಮಾಂಸ ತಿಂದು ಜಾತಿ ಹೋಗಲಾರದು; ಅದರ ಉದಲಿಗೆ, ಈ ಮಾಣಿ ಬಲೆ ಬೀಸಿ, ಬೋನು ಇಟ್ಟು ನುಸಿ ಹಿಡಿಯುವ ಕಾರ್ಯದಲ್ಲಿ ಕೃತಾರ್ಥನಾಗಿ, ನಗರವಾಸಿಗಳನ್ನು ಆ ನುಸೀ ಬಾಧೆಯಿಂದ ಉದ್ಧಾರ ಮಾಡಿದರೆ, ಆಗ್ಗೆ ನಗರ ಸಂಸ್ಥಾನದ ಸಭೆಯವರು ನುಸಿಗಳ ಯಜ್ಞಪುರೋಹಿತನಾದ ಈತನ 'ಬ್ಲಾಕ್ ಹೆಡ್ಡ'ನ್ನು (ತಲೆ ಮಾತ್ರವಿರುವ ಬ್ಲಾಕಿನ ಚಿತ್ರ) ಅಲ್ಲಲ್ಲಿ ಓಣಿಗಳ ಸಂದಿನಲ್ಲಿ ತೂಗಾಡಿಸುವ ಯೋಚನೆ ಮಾಡಬಹುದು.

ಈ ಮಾಣಿಯು ತನ್ನ ಮಿತ್ರನೆಂಬವನ ಒಂದು ಕೂದಲು ಗಾಳಿಗೂ ಅಲ್ಲಾಡುವುದನ್ನೂ ಸಹಿಸನು. 'ಮಿತ್ರ'ನೆಂದರೆ ಇವನಿಗೆ ಜೀವದ ಗಂಟು. ಆದರೆ, ಆ Friend 'Friend, in need!' ಅನ್ನುವಾಗ ಈ 'Friend, never in-deed!' ಅಂದರೆ ಸ್ನೇಹಿತ ತೊಂದರೆಯಲ್ಲಿದ್ದಾಗ ಈ ಮಾಣಿಗೆ ಸಹಾಯ ಮಾಡಲು ಪುರ್ಸೋತಿಲ್ಲ. ತೊಂದರೆ ಮುಗಿದು, ಸ್ನೇಹಿತನೂ, ಇತರರೂ ಅದನ್ನು ಮರೆತ ಮೇಲೆ, ಕಣ್ಣೊರಸಿಕೊಳ್ಳುತ್ತಾ,—ವೀರಾವೇಶದಿಂದ,

ನಿನಗಾಯಿತೆ ಗತಿ ಇದು? । ಮಿತ್ರನೆ ಪೇಳ್ ಯಾರದು? ।
ಸುಮ್ಮನೆ ಬಿಡುವೆನೆ ನಾನು? । ಮಿತ್ರನೆ ಕೇಳೆಲೋ ನೀನು ॥ ೧ ॥
ಹರಿಹರ ಬ್ರಹ್ಮನೆ ಇರಲಿ । ಸುರಿಮಳೆ ಬಂದರೆ ಬರಲಿ ।
ಹುರಿಗಡಲೆಯ ತೆರ ಅವರ । ಹುರಿದು ಮುಕ್ಕುವಾ ಸಮರ ॥ ೨ ॥
ಪೇನನು ಝಳಪಿಸಿ ಬರಿವೆ । ಬರಿವುದೇನೆಂದು ಅರಿವೆ ।
ಶಬ್ದ ಸಮುದ್ರದ ಮಧ್ಯ । ಅರ್ಥವು ಮಾತ್ರ ಅಸಾಧ್ಯ ॥ ೩ ॥ ಎಂದು ಪರಾಕ್ರಮ ಕೊಚ್ಚಿಕೊಳ್ಳುವನು. ಇದಕ್ಕೆ ಕಾರಣ ಈ ಮಾಣಿಯ ನಕ್ಷತ್ರ, 'ಉತ್ತರಾ' ಭಾದ್ರ.

ಅಂದು ಇರುಳಿನ ತನಕ ಈ ಪುತ್ರೋತ್ಸವದ ಫಲಿತಾಂಶವಂ, ಅನ್ನಾಹಾರವಂ ಬಿಟ್ಟು ಕೇಳ್ದು, ಆನಂದತುಂದಿಲ ಸ್ವಾಂತ ಭ್ರಾಂತರಾಗಿ, ಆ ಗೃಹಸ್ಥರು ಜೋಯಿಸರಂ ಕುರಿತು 'ಈಗ ಪೋಗಿರಿ; ನಾಳೆ ಬನ್ನಿರಿ. ನನ್ನ ಪುತ್ರನ ಅಪಾರ ಮಹಾತ್ಮೆಯಂ, ಮಹಿಮೆಯಂ ಇನ್ನೂ ಕೇಳಿ ಇನ್ನಷ್ಟು ಆನಂದಸಾಗರದಲ್ಲೋಲಾಡಬೇಕಾಗಿದೆ' ಎಂದರು.

ಜೋಯಿಸರು, 'ದಿನವೆಲ್ಲಾ ಕಂಠಶೋಷಣೆ ಮಾಕಾಸೂ ಕೊಡಲಿಲ್ಲ. ನಾಳೆ ಬರುತ್ತೇನೆ. ನೋಡು ಎಂದು ಶಪಿಸುತ್ತಾ ಕೆಳಗಿಳಿದಂ

ಆ ಮಗುವಿಗೆ ಅಂದೇ ಆ ಬ್ರಹ್ಮಶಾಪವು ತ ಕಾಲು ನೆಟ್ಟಗಾಗಲು ಆರಂಭವಾಯಿತು—ಬಾಲಗ್ರಹ

ವಿದೇಶ

ನಿರುದ್ಯೋಗದ ಸಹಾಯದ ಸಂಬಂಧ ವರ್ಷಂಪ್ರತಿ ವಿನಿಯೋಗ ವಾಗುವ ೩೮ ಮಿಲ್ಯಗಳೊಡನೆ ಇನ್ನೂ ೭ ಲಕ್ಷ ೭೫ ಸಾವಿರವು ಬ್ರಿಟನಿನಲ್ಲಿ ಮುಂಜೂರಾಗಿದೆ. ಈ ಸಹಾಯ ಪಡೆಯುವ ೬ ಲಕ್ಷ ಮಂದಿಯ ಮೂರನೆ ಒಂದಂಶದವರಿಗೆ ಹೆಚ್ಚಿಗೆಯಾದ ಎಲೋವೆನ್ಸ್ ದೊರಕುವುದು.

ಫೋಟೋಗ್ರಾಫನ್ನು ರೇಶ್ಮೆ ಅಥವಾ ಕ್ಯಾನ್‌ವಾಸ್ ಬಟ್ಟೆಯ ಮೇಲೆ ತೆಗೆಯುವ ವಿಧಾನವೊಂದು ಹೊಸದಾಗಿ ಸೋವಿಯಟ್ ರಷ್ಯದಲ್ಲಿ ಜ್ಯಾರಿಗೆ ಬಂದಿದೆ.

ಗ್ರೀಸಿನಲ್ಲಿ ಗೋಧಿ ಬೆಳೆ ಕೆಟ್ಟು, ರೊಟ್ಟಿ ಮಾರುವ ಕಾನೂನು ಗಳನ್ನು ಬಿಗಿ ಮಾಡಲಾಗಿದೆ.

ದಕ್ಷಿಣ ಆಸ್ಟ್ರೇಲಿಯದ ಒಬ್ಬ ಕನ್ಸಿಕೆಯು ೨೦ ಮಂದಿ ವಿಧವೆಯ ರಿಗೆ ಪ್ರತಿಯೊಬ್ಬರಿಗೂ ೫೦ ಪೌಂಡುಗಳ ದಾನ ದೊರೆಯುವಂತೆ ಒಂದು ಟ್ರಸ್ಟನ್ನು ನಿರ್ಮಾಣ ಮಾಡಿದ್ದಾಳೆ.

ಯುಗೋಸ್ಲಾವಿಯದ ಒಂದು ಹಳ್ಳಿಯಲ್ಲಿ ಒಬ್ಬ ಮನುಷ್ಯ ನನ್ನು ಆಲ್ಲಿನ ಬೀದಿಗಳಲ್ಲಿ ನಡೆಯಬೇಕೆಂದು ಆ ಗ್ರಾಮಸ್ಥರು ಕೇಳಿ ಕೊಂಡಿದ್ದಾರೆ. ಇದರಿಂದ ಸ್ವೀವರ್ ರೋಲರನ್ನು ಉಪಯೋಗಿಸುವ ಖರ್ಚು ಉಳಿಯುವುದು. ಈ ಮನುಷ್ಯನ ಭಾರ ೨೩ ಸ್ಟೋನುಗಳು. ಈತನು ಕುಳಿತಲ್ಲಿ ಹುಲ್ಲು ಬೆಳೆಯುವುದಿಲ್ಲವಂತೆ.

ಬ್ರಿಟನಿನ ಸೇನಾಂಗದ ಸಮಸ್ತ ಶಾಖೆಗಳನ್ನೂ ಬಲಪಡಿಸಲು ಈ ಬಾರಿ ಇನ್ನೂ ಹೆಚ್ಚಿನ ಹಣವನ್ನು ವಿನಿಯೋಗಿಸಿದೆ. ನೌಕೆಗಾಗಿ ಪೌಂಡು ೧,೦೫೯,೦೦೦ ಸ್ಟರ್ಲಿಂಗು; ನೆಲಸೈನ್ಯಕ್ಕಾಗಿ ಪೌಂಡು ೬,೬೦೦,೦೦೦ ಸ್ಟರ್ಲಿಂಗು; ವಿಮಾನಬಲಕ್ಕಾಗಿ ಪೌಂಡು ೧೧,೬೦೦,೦೦೦ ಸ್ಟರ್ಲಿಂಗು; ಆರ್ಡಿನೆನ್ಸ್ ಫ್ಯಾಕ್ಟರಿಗಳಿಗಾಗಿ ಪೌಂಡು ೨೯೩,೦೦೦ ಸ್ಟರ್ಲಿಂಗು;—ಜುಮ್ಲಾ ಸುಮಾರು ೩೦ ಮಿಲ್ಯ.

ಅಮೆರಿಕದ ಮಧ್ಯಪಶ್ಚಿಮದಲ್ಲಿ ಉಷ್ಣಾತಿರೇಕದಿಂದ ೩೬೫ ಮಂದಿ ಜನರೂ, ನೂರಾರು ಜಾನುವಾರುಗಳೂ ಸತ್ತವು. ಬೆಳೆ ಕೆಟ್ಟು, ಅಲ್ಲಿನ ರೈತರಿಗೆ ಸುಮಾರು ೬೦ ಮಿಲ್ಯ ಸ್ಟರ್ಲಿಂಗಿನ ನಷ್ಟವೆಂದು ತಿಳಿದು ಬರುತ್ತಿದೆ.

ಮೆಡಿಟರೇನಿಯನಿನಲ್ಲಿ ಬ್ರಿಟಿಷರು ತಮ್ಮ ನೌಕಾಬಲವನ್ನು ಕಡಿಮೆ ಮಾಡುವರೆಂಬುದರಿಂದ ಇಟೆಲಿಗೆ ಸಂತೋಷವಾಗಿದೆ.

ಐರಿಷ್ ರಿಪಬ್ಲಿಕಿನವರ ಅಧಿಕಾರನಿಯುಕ್ತ ಪತ್ರಿಕೆಯೊಂದರ ಸಂಪಾದಕರಾದ ಮಿ. ಒಡೊನೋ ಹ್ಯೂರವರನ್ನು ಕೈದು ಮಾಡಲಾಗಿದೆ. ಅವರ ವಿಚಾರಣೆ ಡಬ್ಲಿನಿನಲ್ಲಿ ಮಿಲಿಟರಿ ಟ್ರಿಬ್ಯೂನಲಿನ ಮುಂದೆ ನಡೆಯಲಿದೆ.

ಆಗಸೇ ಮರದ ನಾರಿನಿಂದ ಬಟ್ಟೆಗಳನ್ನು ಜರ್ಮನಿಯಲ್ಲಿ ಮಾಡಲಾರಂಭಿಸಿದ್ದಾರೆ.

ಹೆಂಗಸೊಬ್ಬಳು ವಿಂಡ್ಸರಿನಿಂದ ಲಂಡನಿಗೆ—೨೬ ಮೈಲುಗಳ ದೂರವನ್ನು—೪ ಗಂಟೆ ೨೫ ನಿಮಿಷಗಳಲ್ಲಿ ಓಡಿ ಮುಗಿಸಿದ್ದಾಳೆ. ಓಟ ದಲ್ಲಿ ಹೆಂಗಸರೂ ಸಮರ್ಥರೆಂದು ತೋರಿಸುವುದೇ ಈಕೆಯ ಉದ್ದೇಶ.

ಕೆಲವು ವರ್ಷಗಳಿಂದ ಬ್ರೆಜಿಲಿನಲ್ಲಿ ಹಳೇ ಕಾಫಿಯನ್ನು ನಾಶಪ ಡಿಸುತ್ತಿರುವಂತೆ, ಈ ವರ್ಷವೂ ೬೮ ಮಿಲ್ಯ ಪೌಂಡು ಕಾಫಿಯನ್ನು ನಾಶಮಾಡುವುದರಲ್ಲಿದ್ದಾರೆ. ಆಲ್ಲಿ ೧೯೩೪ರಲ್ಲಿ ೮ ಮಿಲ್ಯ ಗೋಣಿ ಕಾಫಿಯನ್ನೂ, ಕಳೆದ ವರ್ಷ ೨ ಮಿಲ್ಯವನ್ನೂ ಸುಟ್ಟರು.

ಹೊಲ್ಲಂಡಿನ ಸರಕಾರವು, ಆಲ್ಲಿ ಆವಶ್ಯವಿರುವುದಕ್ಕಿಂತಲೂ ಹೆಚ್ಚಾಗಿರುವ ಹಸುಗಳಲ್ಲಿ, ೧ ಲಕ್ಷ ಹಾಲು ಕೊಡುವ ಹಸುಗಳನ್ನು ವಧೆ ಮಾಡಬೇಕೆಂದು ಯೋಚಿಸುತ್ತಿದ್ದಾರೆ.

ಅಮೆರಿಕದ ಮಾಜಿ ಸೈನಿಕರಿಗೆ ಕಳೆದ ಜೂನ್‌ನಲ್ಲಿ ೪೦೦ ಮಿಲ್ಯ ಪೌಂಡುಗಳನ್ನು ಹಂಚಿದ್ದಾರೆ.

ಇಟೆಲಿಯ ಮೇಲಿನ ಸ್ಯಾಂಕ್ಷನುಗಳ ರದ್ದಿಯಾತಿಗೆ ನಮ್ಮ ಸಾರ್ವ ಭೌಮರ ಸಮ್ಮತಿ ಮುದ್ರೆ ಬಿದ್ದಿತು. ಇದೇ ೧೫ರಿಂದ ಇಂಡಿಯದ ಲ್ಲಿಯೂ ಆ ಆಸ್ತ್ರದ ಉಪಸಂಹಾರವಾಗಲಿದೆ. ಫ್ರಾನ್ಸು ಕೂಡ, ಸಂತೋಷದಿಂದ ಕತ್ತಿನ ಮೇಲಿನ ಆ ಸ್ಯಾಂಕ್ಷನುಗಳನ್ನು ತೆಗೆದು ಬಿಸಾಡಿದೆ.

ತಮ್ಮ ಹೆಸರನ್ನು ತಿಳಿಸದೆ ಒಬ್ಬ ಪುಣ್ಯಾತ್ಮರು ೧೦ ಸಾವಿರ ಪೌಂಡುಗಳನ್ನು ಲಂಡನಿನ ಕಿಂಗ್ ಎಡ್ವರ್ಡ್ ಫಂಡಿಗೆ ದಾನವಾಗಿ ಕಳುಹಿಸಿರುವರು.

ಲಂಡನಿನ 'ಡೈಲಿ ಹೇರಾಲ್ಡ್'ನ ವಾರ್ತೆಯೊಂದು ಹೀಗೆ ಹೇಳು ತ್ತಿದೆ:—'ಅಬಿಸೀನಿಯಾ ಚಕ್ರವರ್ತಿಗಳು ಇನ್ನೂ ಯುದ್ಧ ಮಾಡುವುದು ಖಂಡಿತ. ಈಗಲೂ ಆಲ್ಲಿ ಕೆಲವು ಕಡೆ ಕಠಿನ ಯುದ್ಧವಾಗುತ್ತದೆ. ಪುನಃ ಘೋರ ಸಂಗ್ರಾಮವು ಇದೇ ಅಕ್ಟೋಬರದಲ್ಲಿ ಆರಂಭವಾಗ ಲಿದೆ. ಅಬಿಸೀನಿಯದ ವೈಸರಾಯರು ಆಲ್ಲಿನ ಜನರನ್ನೆಲ್ಲ ದಿಗಿಲು ಗೊಳಿಸಿ, ಆಯುಧಗಳ ಸಹಿತ ಶರಣಾಗತರಾಗದ ಹಳ್ಳಿಯವರನ್ನೆಲ್ಲ ಬಾಂಬಿನ ಮೂಲಕ ನಿರ್ಮೂಲ ಮಾಡುತಿದ್ದಾರೆ. ಮುಂದೆ ಅಬಿಸೀನಿ ಯದವರು ತಮ್ಮ ಮೇಲೆ ತಿರುಗಿ ಬಿದ್ದಾರೆಂಬ ಭೀತಿ ಅವರಿಗೆ ಪೂರಾ ಇದೆ.'

ಸಾಲ್ಟ್ ಲೇಕ್ ಸಿಟಿಯಲ್ಲಿ ೨೨ ವರ್ಷ ಪ್ರಾಯದ ಡೆಲ್ಬರ್ಟ್ ಗ್ರೀನ್ ಎಂಬಾತನು ತನ್ನ ಹೆಂಡತಿ, ಚಿಕ್ಕ ತಂದೆ, ಸ್ವಂತ ತಾಯಿ ಈ ಮೂವರನ್ನು ಕೊಂದನೆಂದು ಆರೋಪಕ್ಕೆ ಒಳಗಾಗಿ ಆತನಿಗೆ ಮರಣ ದಂಡನೆಯಾಗಲು ಗಲ್ಲು ಬೇಡವೆಂದು ಬಂದೂಕಿನ ಏಟಿಗೆ ಪ್ರಾಣ ಕೊಟ್ಟನು. ಬಂದೂಕನ್ನು ಹಾರಿಸಿದ ೫ ಮಂದಿಯಲ್ಲಿ ಪ್ರತಿಯೊಬ್ಬ ರಿಗೂ ೨೫ ಡಾಲರುಗಳ ಬಹುಮಾನ ಸಿಕ್ಕಿತು.

ಹಂಬರ್ಗಿನಲ್ಲಿ ಎಡ್ಗರ್ ಆಂಡ್ರೆ ಎಂಬ ಕಮ್ಯುನಿಸ್ಟ ಮುಖಂಡ ನಿಗೆ ಮರಣದಂಡನೆ ವಿಧಿಸಲಾಗಿದೆ.

ಭಾರತೀಯ ಚಾ

ಭಾರತೀಯರ ಬಹು ಸುಲಭ ಬೆಲೆಯ ಪಾನೀಯ



ಭಾರತೀಯ ಚಾವು ಎಲ್ಲಾ ಸ್ತ್ರೀಪುರುಷರಿಗೂ, ಬಡವರಿಗೂ, ಹಣವಂತ ರಿಗೂ ಸುಲಭವಾಗಿ ದೊರೆಯುವುದು. ಕಾಲಾಣೆ ಸೊಪ್ಪಿಗೆ ಐದು ಬಟ್ಟಲುಗಳು ಚಾ ತಯಾರಿಸಬಹುದು. ಚಾವಿನಿಂದ ಯಾವ ಹಾನಿಯೂ ಉಂಟಾಗಲಾರದು. ಏಕೆಂದರೆ ಕ್ರಿಮಿರಹಿತವಾದ ಕುದಿಯುವ ನೀರನ್ನು ಚಾ ತಯಾರಿಸುವುದಕ್ಕೆ ಉಪಯೋಗಿಸುತ್ತೇವೆ. ಈ ಬಹು ಸುಲಭ ಬೆಲೆಯುಳ್ಳ ಪಾನದಿಂದ ನಿಮ್ಮ ದೇ ಹಕ್ಕೆ ಯಾವ ಕುಂದಕವೂ ಆಗುವುದಿಲ್ಲ ಮತ್ತು ದೇಹದ ಆಯಾಸವನ್ನು ಹೋಗಲಾಡಿಸುವುದು. ಭಾರತೀಯ ಚಾವು ನಮಗೆ ಸುಲಭ ಬೆಲೆಯುಳ್ಳ ಆರೋಗ್ಯಕರವಾದ ಪಾನವು.

ಚಾ ತಯಾರಿಸುವ ವಿಧಾನ:—

ನಿರ್ಮಲವಾದ ನೀರನ್ನು ಕಾಸಿ ಶುಚಿಯಾದ ಒಂದು ಪಾತ್ರೆಯನ್ನು ಬೆಚ್ಚಗೆಮಾಡಿ ಅದರಲ್ಲಿ ತಲಾ ಒಬ್ಬರಿಗೊಂಡು ಚಮಚ, ಕೊಸರಿಗೊಂದು ಚಮಚ ಉತ್ತಮವಾದ ಭಾರತೀಯ ಚಾಸೊಪ್ಪನ್ನು ಹಾಕಿ ನೀರು ಚೆನ್ನಾಗಿ ಕುದಿದ ಮೇಲೆ ಅದರ ಮೇಲೆ ಬಿಡಿ. ಐದು ನಿಮಿಷಗಳಾದ ಮೇಲೆ ಬಟ್ಟಲುಗಳಲ್ಲಿ ಹಾಕಿ ಹಾಲು ಸಕ್ಕರೆ ಬೆರಸಿ ಸೇವಿಸಿ.

ಕಾಲಾಣೆಗೆ ಐದು ಕಪ್ ಚಾ

ಹಿಂದೂದೇಶದ ಆನಂದ ಮತ್ತು ಹೆಮ್ಮೆ- ಭಾರತೀಯ ಚಾ

I. K 25

ಕುಡಿಯಿರಿ! ಕುಡಿಯಿರಿ!!

ಕಣಿನ್ ದೇವನ್ ಟೀ

ಶುದ್ಧತೆ, ಸುವಾಸನೆ ಮತ್ತೂ ಶಕ್ತಿಗಳಿಗಾಗಿ ಹೆಸರ್ಗೊಂಡದ್ದು.

ರಿಜಿಸ್ತ್ರಿಯಾದ ಟ್ರೇಡ್‌ಮಾರ್ಕ್-

ಬಿಕ್ಕ ಪ್ಯಾಕಿಂಗ್ ಎಲ್ಲರ ಉಪಯೋಗಕ್ಕೂ ಸುಲಭವಾಗಿದೆ.



ಆಹ್ಲಾದಕರವಾದ ಪಾನೀಯ

SOLE SOUTH KANARA AGENTS:-

THE KERALA TEA SYNDICATE,

PONANI-MALABAR.

JAYA LAXMI BANK, LTD.,
MANGALORE.

ಜಯಲಕ್ಷ್ಮೀ ಬೇಂಕ್,
ಲಿಮಿಟೆಡ್, ಮಂಗಳೂರು.

ಶಾಖೆಗಳು: ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ್ಷ್ಯ ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರಟರಿ.

FOR YOUR DIAMONDS
ENQUIRE AT
SOWCAR
SRINIVAS RANGA PAI,
SOWCAR MAHAL,
Car Street,
MANGALORE.



ಈಶ್ವರನಲ್ಲಿ ನಂಬುಗೆಯಿದ್ದುದಾದರೆ, ಸಂಕಷ್ಟ ಸಮಯದಲ್ಲಿಯೂ ಮಾನವನ ವೃತ್ತಿ ಸ್ಥಿರವಾಗಿರುವುದು.

ಸೂಕ್ತಿಮಾಲೆ.

XVIII] ಮಂಗಳೂರು, ತಾ. ೧೪—೭—೧೯೩೬ [೩೧ ೧೪೫೫ ಧಾತು ಸಂ। ಆಷಾಢ ಬ। ೧೧ ಕುಜವಾರ.

ದುಡ್ಡು ಮಾಡುವ ಬುದ್ಧಿವಂತಿಗೆ ಇದೇ?

ಕಳೆದ ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ಮಾನ್ಯ ಸರ್ ಮಹಮ್ಮದ್ ಜಫ್ರುಲ್ಲಾ ಖಾನ್‌ರವರು, ರೈಲ್ವೆ ಕಂಪೆನಿಗಳು ಕೈಯಿಂದ ನಷ್ಟ ತುಂಬುವುದು ತಪ್ಪಬೇಕಾದರೆ ಏನು ಮಾಡಬೇಕು, ಎಂಬ ದರ ಕುರಿತು ಮೂರು ಮುಖ್ಯ ಸೂತ್ರಗಳನ್ನು ಹೊಸೆದುಕೊಟ್ಟರು. ಹೀಗೇ ಮಾಡಬೇಕೆಂದು ಸಿದ್ಧಾಂತ ಮಾಡಿ ಹೇಳಿದರು: (೧) ದರಗಳನ್ನು ಹೆಚ್ಚಿಸಿ. (೨) ಮೋಟರಿನವರ ಮೇಲಾಟವನ್ನು ನಿರ್ಮೂಲ ಮಾಡಿ. (೩) ಟಿಕೆಟ್ ಇಲ್ಲದೆ ಪ್ರಯಾಣ ಮಾಡುವ ನೆಂಟರಿಷ್ಟರ ಕಾಟವೊಂದಕ್ಕೆ ಸರಿಯಾದ ನಿವೃತ್ತಿ ಕಲ್ಪಿಸಿಬಿಡಿ. ಇವು ಮೂರೂ ಆದರೆ, 'ಮೂರಕ್ಕೆ ಮುಕ್ತಾಯ'ವೆಂಬಂತೆ ರೈಲ್ವೆಯ ನಷ್ಟಕ್ಕೊಂದು ಮುಕ್ತಿ ದೊರಕಿದಂತಾಗುತ್ತದೆಂದು ಸಾಹೇಬರವರ ಅಭಿಪ್ರಾಯ.

ಆದರೆ ಚರ್ಚಾಕಾಲದಲ್ಲಿ ಎಸೆಂಬ್ಲಿಯ ಮೆಂಬರರು ಈ ಸಾಹೇಬರ ಈ ಅಭಿಪ್ರಾಯವನ್ನು ಮನ್ನಿಸಲಿಲ್ಲ. ಇದರಿಂದ ರೈಲ್ವೆ ಆದಾಯ ಹೆಚ್ಚದು ಅಂದರು; ರೈಲ್ವೆಗಳಿಗೆ ಇದರಿಂದ ಹೊಸ ತೊಂದರೆಗಳು ಒದಗಬಹುದು ಎಂದರು. ಆದರೆ ನಮ್ಮ ರೈಲ್ವೆ ಅಧಿಕಾರಿಗಳು ಎಷ್ಟಾದರೂ ಪ್ರಾಜ್ಞಶಿರೋಮಣಿಗಳಲ್ಲವೇ? ಆದ್ದರಿಂದ ಈ ಸದಸ್ಯರ ಮಾತುಗಳು ರೈಲ್ವೇ ದೊರೆಗಳಿಗೆ ಒಂದಿಷ್ಟೂ ಪಥ್ಯವಾಗಲಿಲ್ಲ. ಹೀಗಾಗಿ, ಕೆಲವು ದಿನಗಳ ವರೆಗೆ ನಡೆದ ಆ ಚರ್ಚೆಯ ಪ್ರಕರಣವು ಬರೀ ಒಂದು ಪ್ರಹಸನವಾಗಿ ಕೊನೆಗಂಡಿತು. 'ಹಣ್ಣು ಕೊಳೆತು, ಬೀದಿಗೆ ಬಿಸಾಡಿದರೂ ಚಿಂತ್ಯವಿಲ್ಲ. ಗಳಿತ, ಕೊಳೆತುಹೋಗಲಾದ ಹಣ್ಣನ್ನಾದರೂ ನಾವು ಬೆಲೆ ಕಡಿಮೆ ಮಾಡಿ ಕೊಡಲಾರೆವು' ಎಂಬ ಹಣ್ಣಿನ ವ್ಯಾಪಾರಿಗಳ ಕೆಲವು ವ್ಯವಹಾರಗಳೂ ಇವರಲ್ಲಿ ತೋರಬಂದುವು. ಅಧಿಕಾರಿಗಳಿಗೆ 'ಕುರುಡ ಹಿಡಿದುದೇ ಬಡತಿಗೆ' ಎಂಬಂತಾಯಿತು.

ಸರಕಾರಕ್ಕಾದರೋ ಹಿಡಿದ ಹಾದಿಯನ್ನು ಬಿಡುವ ಇಷ್ಟವಿದ್ದ ಹಾಗೆ ಭಾಸವಾಗುವುದಿಲ್ಲ. ಟಿಕೆಟಿಲ್ಲದ ಪ್ರಯಾಣವನ್ನು 'ಚೆಕ್ಕ್' ಮಾಡುವ ಸಂಬಂಧವಾ ಒಂದು ಗವರ್ನಮೆಂಟ್ ಬಿಲ್ಲು ಆಗಲೇ ಮುಂದೆ ಬಂದಿದೆ; ವೋಟರಿನವರ ಅವಾಂತರವನ್ನು ನಿರ್ಮೂಲಮಾಡಲು ಉದ್ದೇಶಿಸಿರುವ ಇನ್ನೊಂದು ಬಿಲ್ಲೂ ತೆರೆಮರೆಯ ಹಿಂದೆ ಸಿದ್ಧವಾಗುತ್ತಿದೆ. ಇಷ್ಟೂ ಅಲ್ಲದೆ 'ಸ್ಪುಟಾರು ೫೦೦ ಸಾಮುಗ್ರಿಗಳ ಮೇಲೆ, ರೈಲ್ವೆ ಫ್ರೈಟನ್ನು ಹೆಚ್ಚಿಸಬೇಕೆಂದಿದ್ದೇವೆ. ಇದಕ್ಕೆ ನೀವು ಅನ್ನುವುದೇನು?' ಎಂದು ಕೆಲವೊಂದು ಪ್ರಶ್ನೆಗಳು ಬೇರೆ,—ಅಭಿಪ್ರಾಯವನ್ನು ಸಂಗ್ರಹಿಸಿದ ಹಾಗೂ, ಸಂಗ್ರಹಿಸದ ಹಾಗೂ ಇರುವ ರೀತಿಯಲ್ಲಿ,—ಕೆಲವೊಂದು ವ್ಯಾಪಾರೀ ಸಂಸ್ಥೆಗಳ ಬಳಿಗೂ ಕಳುಹಲಾಗಿವೆ. ಆದರೆ ಅದಕ್ಕೆ ಯಾವ ಸಂಸ್ಥೆಯೂ ಒಪ್ಪಿಲ್ಲ; ಈ ಪ್ರಶ್ನೆಗಳನ್ನು ಅಲ್ಲಲ್ಲಿ ಚೆನ್ನಾಗಿ ಖಂಡಿಸಿವೆ. ಸಹಜವೇ ತಾನೇ?

'ಸ್ವದೇಶೀಯವಾದ ಕೃಷಿ-ಕೈಗಾರಿಕೆಗಳು ವೃದ್ಧಿಗೊಳ್ಳಬೇಕಾದರೆ, ಈ ರೈಲ್ವೆ ಫ್ರೈಟ್ ತಗ್ಗಬೇಕೆಂದು ೧೯೧೭ನೇ ಇಸ್ವಿಯ ಕೈಗಾರಿಕೆಯ ಕವಿಶನ್ ಅಭಿಪ್ರಾಯವಟ್ಟಿದ್ದಿತು. ೬ ವರ್ಷಗಳ ಅನಂತರದ ಫಿಸ್ಕಲ್ ಕವಿಶನೂ ಅದೇ ಅಭಿಪ್ರಾಯಗಳನ್ನೇ ಸಮರ್ಥಿಸಿತು. ಅಂದಿನಿಂದಿತ್ತ ಹಿಂದೀ ಸಾಮುಗ್ರಿಗಳ ಮೇಲೆ 'ರೈಲ್ವೆ ಫ್ರೈಟ್‌ಗಳ ದರ ಕಡಿಮೆ ಮಾಡಿ, ಕಡಿಮೆ ಮಾಡಿ' ಎಂದು ಎಸೆಂಬ್ಲಿಯ ಮೆಂಬರರ ಒತ್ತಾಯವು ವರ್ಷವರ್ಷಕ್ಕೂ ಹೆಚ್ಚಾಗುತ್ತ ಬಂದರೂ ಕೇಳುವವರೊಬ್ಬರು ಬೇಕಲ್ಲ? ರೈಲ್ವೆಯವರು ಈ ಪ್ರತಿನಿಧಿಗೊಂಬೆಗಳು ಹೇಳುವುದನ್ನು ಆ ಕಿವಿಯಿಂದ ಕೇಳುವುದು, ಈ ಕಿವಿಯಿಂದ ಬಿಡುವುದು—ಹೀಗೇ ಆಗುತ್ತಾ ಇರುವುದು ವಾಡಿಕೆಯಾಯಿತು. ಆದರೆ ಕಳೆದ ಸಲ, ಚರ್ಚೆ ಕೊಂಚ ಬಲವಾಯಿತು. 'ಪ್ರಯಾಣಿಕರ ದರ, ಸಾಮುಗ್ರಿಗಳ ಮೇಲಿನ ಫ್ರೈಟು ಇವನ್ನು ಹೆಚ್ಚಿಸುವುದು, 'ನಾವು ಕೂತ ಮರಕ್ಕೆ ನಾವೇ ಕೊಡಲೀ ಇಟ್ಟುಕೊಂಡ ಹಾಗೆ.' ಹಾಗೆ ಮಾಡಬೇಡಿ. ಸರಿ; ಪ್ರಯಾಣದ ದರ, ಫ್ರೈಟ್ ಇಳಿಸಿಬಿಡಿ; ಆಗ ನಿಮಗೆ ಕೈಯಿಂದ ಬೀಳುವುದು ತಪ್ಪುತ್ತದೆ. ಲಾಭದ ಗಂಟು ಒಳಗೆ ಬೀಳುತ್ತದೆ; ಮಾಡಿ ನೋಡಿ!' ಎಂದು ಸದಸ್ಯರು ತುಂಬ ಆಗ್ರಹಪೂರ್ವಕವಾಗಿ ಹೇಳಿದರು. ಏನು ಮಾಡೋಣ? ನಮ್ಮ ರೈಲ್ವೆ ಸಾಹೇಬರಿಗೆ ದಯೆ ಬರಲಿಲ್ಲ! ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ರೀತಿ ದರಗಳನ್ನು 'ಕಡಿಮೆ ಮಾಡಿದುದರಿಂದ ಎಷ್ಟು ಲಾಭವಾಯಿತೆಂಬುದೂ ಅವರ ಚಿತ್ತಕ್ಕೇ ನಾಟಲಿಲ್ಲ!

ಹೀಗೆ ದರಗಳನ್ನು ಏರಿಸುವುದರಿಂದ ಉಂಟಾಗುವ ಪರಿಣಾಮವೇನೆಂದು ನೋಡುವುದು ಅವಶ್ಯವಾಗಿದೆ. ಕೆಲವು ಸಾಮುಗ್ರಿಗಳಿಗೆ ಸೇಕಡಾ ೭ರಿಂದ ೪೪ ಸಲ, ಒಂದೆರಡಕ್ಕೆ ಸೇಕಡಾ ೭೯ರಷ್ಟು ಕೂಡ ದರಗಳನ್ನು ಹೆಚ್ಚಿಸುವುದಾಗಿ ಪ್ರಕಟವಾಗಿದೆ. ಇದರಿಂದ ನಮ್ಮ ಯಾವತ್ತು ಕೃಷಿ-ಕೈಗಾರಿಕೆಗಳ ಮೇಲೂ ಕೆಟ್ಟ ಪರಿಣಾಮವಾಗುತ್ತದೆ. ಈಗಲೇ ಭಾರವಾಗಿರುವ ಆ ದರಗಳನ್ನು ಇನ್ನಷ್ಟು ಹೆಚ್ಚಿಸಿದರೆ, ಮುಂದೆ ನಮ್ಮ ಕೈಗಾರಿಕೆಗಳೂ, ಕೃಷಿಸಾಧನಗಳೂ ತಲೆ ಎತ್ತುವ ಬಗೆ ಹೇಗೆ? ಮುಂದುವರಿದ ದೇಶಗಳಲ್ಲಿ ರೈಲ್ವೆ ನೀತಿಯು ಹೀಗಿದೆಯೇ? ತೆರಿಗೆದಾರನ ಹಣದಿಂದ ನಿರ್ಮಾಣವಾದ ಇಂಡಿಯದಲ್ಲಿ ಮಾತ್ರ, ನಮ್ಮ ಅವಸ್ಥೆ ಹೀಗಾಗಿರಬೇಕೆಂದುದೇಕೋ!

ಈ ಸಂದರ್ಭದಲ್ಲಿ ಬೊಂಬಯಿಯ ವ್ಯಾಪಾರ ಸಂಘದವರು ಎತ್ತಿ ತೋರಿಸುವ ಈ ಸಂಗತಿಗಳು ಸ್ವಾರಸ್ಯವಾಗಿವೆ. 'ನಮ್ಮ ವೈಸರಾಯರು ನಮ್ಮ ಕೃಷಿಯ ಅಭಿವೃದ್ಧಿಯ ಕುರಿತು ನಿರ್ವಹಿಸಿರುವ ಅತಿಶಯ ಆಸಕ್ತಿಯನ್ನು ನೋಡುವಾಗ, ಅದನ್ನು ಅನುಸರಿಸಿ, ಅದಕ್ಕೆ ಅನುಕೂಲಿಸುವಂತೆ, ರೈಲ್ವೆಯವರೂ ಆ ಕೃಷಿಗೆ ಹಿತವಾದ ಒಂದು ಧೋರಣೆಯನ್ನು ಅವಲಂಬಿಸಬಹುದೆಂಬ ನಿರೀಕ್ಷೆ ಇದ್ದಿತು. ಆದರೆ ಇಲ್ಲ; ದರಗಳು ಕೃಷಿ ಉಪಕರಣಗಳ ಮೇಲೆ ಹೆಚ್ಚಾಗುವವಂತೆ!' ಅನಂತರ ಅದೇ ಸಂಘವು ಟೀಕಿಸುತ್ತಿದೆ ಏನೆಂದು? 'ನಮ್ಮ ವೈಸರಾಯರು ಹೆಚ್ಚು ಹಾಲಿನ ಉಪಯೋಗವಾಗಬೇಕೆಂಬ ಕುರಿತು ವಿಶೇಷ ಪ್ರಯತ್ನಿಸಿದ್ದಾರೆ. ಆದರೆ, ಕೃಷಿಯನ್ನು ಮೇಲಕ್ಕೆ ತರಬೇಕೆನ್ನುವ ವೈಸರಾಯರ ಪ್ರಯತ್ನಕ್ಕೆ ಎದುರಾಗಿಯೋ ಎಂಬಂತೆ, ರೈಲ್ವೆ ಕಂಪೆನಿಗಳು ಅದರಲ್ಲಿ ಸೇಕಡಾ ೨೦ರ ಸಲೆಯನ್ನೇ ಹೆಚ್ಚಿಸುವ ಯೋಚನೆಯಲ್ಲಿವೆ!'

ಘನವನ್ನೆಯಿದ ನಮ್ಮ ವೈಸರಾಯರು, ರೈಲ್ವೆಯವರ ಈ ದರಗಳ ಏರಿಕೆಯ ಕಡೆಗೆ ಸ್ವಲ್ಪ ಕೃಪಾದೃಷ್ಟಿಯನ್ನು ಬೀರಬೇಕು. ಪ್ರಭುಗಳಿಗೇನೋ ಇಂಡಿಯದ ಕೃಷಿ ಒಳ್ಳಿದಾಗಬೇಕು, ಅದರಿಂದ ಬಡವರ ಉನ್ನತಿಯಾಗಬೇಕು ಎಂಬ ನಿಜೋದ್ದೇಶವಿದೆ ನಿಜ. ಆದರೆ ರೈಲ್ವೆ ಮಹಾರಾಯರ ಈ ಟೊಣಪೆಯಿಂದ, ನಮ್ಮ ಕೃಷಿ ಮತ್ತೂ ಕೈಗಾರಿಕೆಗಳೆರಡರ ಟೊಂಕವೂ ಮುರಿದುಹೋಗಬಹುದೆಂದೇ ತೋರುತ್ತದೆ. ಆದ್ದರಿಂದ ನಮ್ಮ ಪ್ರಭುಗಳು, ಈ ಕಡೆಗೆ ಲಕ್ಷ್ಯ ಕೊಟ್ಟು, ಬೇಕಾದ ಏರ್ಪಾಡುಗಳನ್ನು ಮಾಡಿಸದೆ ಇರಲಾರರೆಂದು ಹಾರೈಸೋಣ! ಮನಸ್ಸಿದ್ದರೆ, ರೈಲ್ವೆಯು ನಷ್ಟ, ದರಗಳ ಏರಿಕೆಯಿಂದಲೇ ತುಂಬಬೇಕೆಂದಿಲ್ಲ. ದೊಡ್ಡ ಸಂಬಳ ಸ್ವಲ್ಪ ಗಿಡ್ಡ ಮಾಡಬಹುದು; ವೋಟರ್ ಬಸ್, ಟ್ರಕ್ಕುಗಳ ದರಗಳಂತೆಯೇ ಇವರೂ ಫ್ರೈಟ್ ದರಗಳನ್ನು ಇಳಿಸಬಹುದು; ಹಾಗೂ ಮೂರನೆಯ ತರಗತಿಯ ಪ್ರಯಾಣಿಕರ ದರವನ್ನು ತಗ್ಗಿಸಿ, ಅವರ ಅನುಕೂಲತೆಗಳನ್ನೂ ಹೆಚ್ಚಿಸಬಹುದು—ಇಷ್ಟೆಲ್ಲ ಮಾಡಿದರೆ, ರೈಲ್ವೆಯವರಿಗೆ ಕೈಯಿಂದ ಬೀಳುವ ಕಾರಣವಾದರೂ ಎಲ್ಲಿಂದ ಬಂದೀತು? ಎಲ್ಲಾ ಬಿಟ್ಟು, ದೊಡ್ಡ ದೊಡ್ಡ ಸಂಬಳಕ್ಕೆ ದುಡ್ಡು ಸಾಲದೆಂದು, ಪ್ರಯಾಣಿಕರೂ, ಸಾಮುಗ್ರಿಗಳೂ ಅವನ್ನು ತುಂಬಿಸಿಕೊಡಲೆಂದು, ಅವರ ತಲೆಯ ಮೇಲೆ ಹೇರಿದರೆ, ಅದು ನ್ಯಾಯವಾದೀತೇ?

ಮಂಗಳೂರು

ಇಲ್ಲಿಯ ತೀಯಾ ಶಕ್ತಿ ಸಂಘದಲ್ಲಿ ತಾ. ೧೩ರಲ್ಲಿ, ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಗಳ ಶಿಷ್ಯ ಸಾಧು ಶಿವಪ್ರಸಾದ ಸ್ವಾಮಿಯವರು, ನಾರಾಯಣ ಗುರುಸ್ವಾಮಿಗಳ ಭಾವಚಿತ್ರ ಅನಾವರಣ ಪ್ರದರ್ಶನೋತ್ಸವವನ್ನು ನೆರವೇರಿಸಿದರು. ಸ್ಕೌಟ ದಳದವರು ಗುರುಕೀರ್ತನೆ ಹಾಡಿದನಂತರ, ಸಾಧು ಶಿವಪ್ರಸಾದ ಸ್ವಾಮಿಗಳ, 'ಶಕ್ತಿದರ್ಶನ' ಎಂಬ ವಿಷಯದಲ್ಲಿ ಸುಲಲಿತವಾಗಿ ಭಾಷಣ ಕೊಟ್ಟ ಅನಂತರ ಸಭೆಯು ಮುಕ್ತಾಯವಾಯ್ತು.

ಇಲ್ಲಿನ ಎಸ್. ಆರ್. ಎಸ್. ಹೋಮಿನ ಯೂನಿಯನಿನ ಆಶ್ರಯದಲ್ಲಿ ಕಳೆದ ಆದಿತ್ಯವಾರ ಸಂಜೆ ಗಂಟೆ ೫-೧೫ಕ್ಕೆ ಶ್ರೀಮತಿ ಕಮಲಾದೇವಿಯವರು, 'ಇಂಟರ್‌ನ್ಯಾಶನಲ್ ಫ್ರೇಮಿನಲ್ಲಿ ಹಿಂದೀ ಯುವಕರು' ಎಂಬ ಉಪಾತ್ತ ಭಾಷಣ ಕೊಡುವ''ವಿಪರ್ಾಡಿದ್ದಿತು. ಮಿ. ಎಂ. ಕೆ ನಂಬಿಯಾರ್, ಎಲ್. ಎಲ್. ಎಮ್. (ಲಂಡನ್) ಬಾರ್-ಎಟ್-ಲಾ ಇವರು ಅಂದಿನ ಅಧ್ಯಕ್ಷರು.

(೧೩ನೇ ಪುಟಕ್ಕೆ ಮುಂದುವರಿಸಿಯದೆ.)

ದಿವಂಗತ ಮಿಯಾನ್ ಸರ್ ಫಜ್ಲೆ ಹುಸೇನ್‌ರವರು.

ಕೇವಲ ಸ್ವಲ್ಪ ಕಾಲ ಮಾತ್ರವೇ ಅಸ್ವಸ್ಥದಲ್ಲಿದ್ದು, ಅನಂತರ ದಿನಂಗತರಾದ ಈ ಮಹನೀಯರ ಮರಣವಾರ್ತೆಯು, ಇಡೀ ಭಾರತಭೂಮಿಯನ್ನೇ ಶೋಕಸನುದ್ರದಲ್ಲಿ ಮುಳುಗಿಸಿದೆ. ಅನೇಕ ಮುಂದಿ ಸ್ಫುಪ್ರಸಿದ್ಧ ಪುರುಷರಂತೆ, ಇವರೂ, ರಾಜಕೀಯ ರಂಗದಲ್ಲಿ ಪ್ರವೇಶಿಸುವ ಮೊದಲು, ತಮ್ಮ ವಕೀಲೀ ವೃತ್ತಿಯಲ್ಲಿ ಪ್ರಖ್ಯಾತಿ ಪಡೆದವರು. ಇವರು ಶಿಕ್ಷಣಕಾರ್ಯದಲ್ಲಿ ತುಂಬ ಅಭಿಮಾನಿಗಳೂ, ಅನುಭವಿಗಳೂ ಆಗಿದ್ದ ಕಾರಣ, ಅವರು ಮೊಂಟೆಗೂ ಚೆಮ್ಸ್‌ಫೋರ್ಡ್ ಸುಧಾರಣೆಗಳ ಶಕದಲ್ಲಿ, ಪಂಜಾಬಿನಲ್ಲಿ ಮಂತ್ರಿಗಳಾದಾಗ, ಅವರಿಗೆ ವಿದ್ಯಾಶಾಖೆಯೇ ದೊರಕಿದುದು 'ರೋಗಿ ಬಯಸಿದುದೂ ಹಾಲು; ವೈದ್ಯ ಹೇಳಿದುದೂ ಹಾಲು' ಎಂಬಂತಾಯಿತು.

ಈ ಮಹನೀಯರು ಅನೇಕ ವರ್ಷಗಳ ಕಾಲ, ಪಂಜಾಬ್ ಸರಕಾರದಲ್ಲಿಯೂ ಇಂಡಿಯಾ ಸರಕಾರದಲ್ಲಿಯೂ ಹಲವು ಘನ ಹುದ್ದೆಗಳನ್ನು ಬಹಳ ದಕ್ಷತೆಯಿಂದ ನಿರ್ವಹಿಸಿರುತ್ತಾರೆ. ಜನಾಂಗಸಂಘಕ್ಕೆ ಪ್ರತಿನಿಧಿಯಾಗಿ ತೆರಳಿದ್ದಾರೆ; ಇಂಡೋ ಸೌತ್ ಆಫ್ರಿಕನ್ ಕಾನ್ಫರೆನ್ಸಿನ ಇಂಡಿಯನ್ ಡೆಲಿಗೇಶನಿನ ಮುಖಂಡರಾಗಿ ಅದನ್ನು ಮುನ್ನಡೆಯಿಸಿರುತ್ತಾರೆ.

ಮುಸ್ಲಿಮರಲ್ಲಿ ಮುಖಂಡರೆನ್ನುವವರು ವಿರಳರಾಗಿದ್ದಾಗ, ಆ ಸಮಾಜದ ಸಾಮಾಜಿಕ, ಆರ್ಥಿಕ, ರಾಜಕೀಯಾದಿ ಯಾವತ್ತು ಭಾಗಗಳ ಸುಧಾರಣೆಗಾಗಿ, ಸುಮಾರು ೧೫ ವರ್ಷಗಳ ವರೆಗೆ, ನಿರಂತರವಾಗಿ, ಸಾಹಸದಿಂದ ಕಾದಾಡಿದ ಮಹನೀಯರಿವರೇ. ಅವರು ಹಿಂದೂ-ಮಹಮ್ಮದೀಯರ ತಂಡದ 'ಯುನಿಯನಿಸ್ಟ್ ಪಾರ್ಟಿ'ಯೆಂಬ ಸಂಸ್ಥೆಯನ್ನು ಪಂಜಾಬಿನಲ್ಲಿ ಸ್ಥಾಪಿಸಿ, ಈ ಉಭಯ ಸಮಾಜಗಳಲ್ಲಿ ತಮಗಿರುವ ಹಿತಸಾಧನೆ, ದೇಶದ ಮೇಲಿರುವ ನಿರ್ವಂಚನೆಯ ಅಂತಃಕರಣಗಳ ವಿಷಯದಲ್ಲಿ ಸಾಕ್ಷ್ಯಕೊಟ್ಟಿರುತ್ತಾರೆ.

ಯೋಗ್ಯರಾದ ಪಂಜಾಬಿನ ಮುಸ್ಲಿಂ ಮುಖಂಡರೊಬ್ಬರು ಹೋದರು—ಅಲ್ಲ—ದೇಶಾಭಿಮಾನಿಗಳಾದ, ಸಕಲ ಭಾರತೀಯರಿಗೂ ಪ್ರಿಯರಾದ ಭಾರತದ ವೀರ ಕುಮಾರರೊಬ್ಬರು ಕಣ್ಮರೆಯಾದರು! ಪುಣ್ಯಪುರುಷರಾದ ಇವರ ಕೀರ್ತಿಗಾನವನ್ನು ಭಾರತವು ಮುಕ್ತಕಂಠದಿಂದ ಈಗ ಮಾಡುತ್ತಿದೆ. ಮಾಡಲಿ! ಚಿರಕಾಲವೂ ಆ ಗಾನವು ತಿರುತಿರುಗಿ ಭಾರತದ ದಶದಿಕ್ಕುಗಳಲ್ಲಿಯೂ ಮಾರ್ಮೊಳಗಲಿ!

ಹಿಂದೂದೇಶ

ಬರ್ಮದ ಪಂಟ್ನಾವಿನ ಒಂದು ಬೌದ್ಧ ಸನ್ಯಾಸಿಗಳ ಮಠದ ಪ್ರಾರ್ಥನಾ ಮಂದಿರದಲ್ಲಿ, ೭ ಮಂದಿ, ಡಕಾಯಿತಿ ನಡೆಸಲು ಸಿದ್ಧರಾಗಿರುವುದನ್ನು ಕಂಡು ಹಿಡಿದು, ಪೋಲೀಸರು ಅವರನ್ನು ಕೈದುಮಾಡಿದ್ದಾರೆ.

ರಂಗಪುರದ ಮೈಲಿನ ಡಕಾಯಿತಿ ಸಂಬಂಧ ಕಲ್ಕತ್ತೆಯ ಒಬ್ಬ ಸ್ಕೂಲ್ ಮಾಸ್ಟರನ್ನೂ, ಅಲ್ಲಿನ ಒಂದು ನಿತ್ಯಪತ್ರಿಕೆಯ ಕಾರ್ಯಾಲಯದ ಒಬ್ಬ ಯುವಕನನ್ನೂ ಕೈದುಮಾಡಿದ್ದಾರೆ.

ಕಾಶಿಯ ಬಳಿಯ ಸರನಾಥ ಬೌದ್ಧ ಕ್ಷೇತ್ರದಲ್ಲಿ ಚೀನದ ಅಮೂಲ್ಯ ಗ್ರಂಥಗಳದೊಂದು ಪುಸ್ತಕಾಲಯವು ಸ್ಥಾಪಿಸಲ್ಪಡುವುದು. ಸಂಸ್ಕೃವಂಶದ ಚೀನಾ ತ್ರಿಪಿಟಕಗಳ ಸುಮಾರು ೬೦೦ ಗ್ರಂಥಗಳಾಗಲೇ ಈ ಪುಸ್ತಕಾಲಯಕ್ಕೆ ಉಚಿತವಾಗಿ ದೊರಕಿವೆ. ಇವುಗಳಲ್ಲಿ ಬುದ್ಧನ ಜೀವನದ ಹಲವು ಚಿತ್ರಗಳಿವೆ.

ಬೊಂಬಯಿ ಮುನಿಸಿಪಾಲಿಟಿಯವರು, ತಮ್ಮ ಘೂಟುಗಳಲ್ಲಿ ಬಟ್ಟೆಯೊಗೆಯುವ ಡೋಬಿಗಳ ಮೇಲೆ ಹೊಸ ದರದ ತೆರಿಗೆಯನ್ನು ಹೇರಲಿರುವುದರ ನಿಷೇಧಾರ್ಥವಾಗಿ ಸುಮಾರು ೨ ಸಾವಿರ ಮಂದಿ ಡೋಬಿಗಳು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು.

ಕೊಲೊಂಬೊದಲ್ಲಿ ಪೋಲಿಸ್ ಸಬ್ ಇನಸ್ಪೆಕ್ಟರ್ ಮಿ. ಆರ್. ಈ. ಪೋಸ್ಟರ್ ಎಂಬವರಿಗೆ, ಅವರ ಸಂಶಯಕ್ಕೆ ಪಾತ್ರನಾದ ಒಬ್ಬ ದುಷ್ಟನು ಗುಂಡುಹೊಡೆದು ಗಾಯಪಡಿಸಿರುವನು. ಪೋಸ್ಟರರು ಆಸ್ಪತ್ರೆಯಲ್ಲಿ ವಿಷಮ ಸ್ಥಿತಿಯಲ್ಲಿರುವರು. ಅಪರಾಧಿ ತಪ್ಪಿಸಿಕೊಂಡಿರುವನು.

ಲಕ್ನೋ ಪ್ರಾಂತದ ಅತಿವೃಷ್ಟಿಯಿಂದ ಇನ್ನೂ ಹೆಚ್ಚಿನ ನಷ್ಟವಾಗಿದೆ. ಹೆಚ್ಚಿಗೆ ಸತ್ತವರೆಂದರೆ ಇನ್ನು ೫ ಮಂದಿ; ಗಾಯಗೊಂಡವರು ೨೦ ಮಂದಿ. ಸುತ್ತಲಿನ ಅನೇಕ ಹಳ್ಳಿಗಳು ಜಲಮಯವಾಗಿವೆ. ಸಾವಿರಾರು ಮಂದಿ ಅನಾಥರು. ಸುಮಾರು ೧೫೦ ಮನೆಗಳು ಬಿದ್ದಿವೆ.

ಈಗ ನಿರುದ್ಯೋಗಿಗಳಾಗಿರುವ ಲಾ, ಆರ್ಟ್ಸ್, ವಿಜ್ಞಾನ, ಇಂಜಿನಿಯರಿಂಗ್, ವೈದ್ಯಶಾಸ್ತ್ರ ಮೊದಲಾದವುಗಳ ಗ್ರಾಜುವೇಟರು ತಮ್ಮ ಹೆಸರು ವಿಳಾಸಗಳನ್ನು ಇದೇ ಸೆಪ್ಟೆಂಬರ್ ತಾ. ೩೦ರೊಳಗೆ ತಲುಪುವಂತೆ ಕಳುಹಿಸಬೇಕೆಂದು ನಮ್ಮ ಸಂಸ್ಥಾನದ ಲೇಬರ್ ಕವಿಶನರು ಪ್ರಕಟಪಡಿಸಿರುತ್ತಾರೆ.

ಸೇಲಂ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡನ್ನು ಎರಡು ಭಾಗಗಳನ್ನಾಗಿ ಏರ್ಪಡಿಸಿ, ಒಂದನ್ನು ಉತ್ತರ ಸೇಲಂ ಡಿಸ್ಟ್ರಿಕ್ಟ್ ಬೋರ್ಡ್ ಎಂದೂ, ಇನ್ನೊಂದನ್ನು ದಕ್ಷಿಣ ಸೇಲಂ ಡಿಸ್ಟ್ರಿಕ್ಟ್ ಬೋರ್ಡ್ ಎಂದೂ ಕರೆಯುವ ಹಂಚಿಕೆಯಾಗಿದೆ. ಈ ಯೋಜನೆಯು ಇದೇ ಆಗೋಸ್ತಿನಲ್ಲಿ ಜಾರಿಗೆ ಬರಲಿದೆ.

ಕಂಚಿಯಲ್ಲಿ ಮುನಿಸ್ವಾಮಿ ಮೇಸ್ತ್ರಿ ಎಂಬಾತನು ಒಬ್ಬ ಭಿಕ್ಷುಕನ ಬಟ್ಟೆಬರೆ ಅಕ್ಕಿ ಮೊದಲಾವ ಸುಮಾರು ರೂ. ೧—೭—೦ ಬೆಲೆ ಬಾಳುವ ಒಡವೆಗಳನ್ನು ಕದ್ದನೆಂದು ಆತನಿಗೆ ೨ ವರ್ಷಗಳ ಕಠಿನ ದಂಡನೆ. ಈ ಅಪರಾಧಿಗೆ ಮೊದಲು ೨ ಸಲ ಜ್ಞಾನನಮಂಟಪದ ದರ್ಶನವಾಗಿದ್ದಿತು.

ಶ್ರೀ ರಾಮಕೃಷ್ಣ ಪರಮಹಂಸರ ಶತಾಬ್ದಿಮಹೋತ್ಸವದ ಕಮಿಟಿಯವರು ಎರಡು ಪ್ರಬಂಧಗಳ ಸ್ಪರ್ಧೆಯನ್ನೇರ್ಪಡಿಸಿ, ರೂ. ೨೦೦ ಮತ್ತೂ ೧೦೦ರ ಬಹುಮಾನಗಳನ್ನು ಇಟ್ಟಿರುವರು.

ಜೋಧ್ಪುರ ದರ್ಬಾರಿನವರು ಸಿವಿಲ್ ಲಿಬರ್ಟಿ ಯೂನಿಯನನ್ನು ಬಹಿಷ್ಕರಿಸಿದ ವಾರ್ತೆಯನ್ನು ಪಂಡಿತ ಜವಹರ್‌ಲಾಲರು ಕೇಳಿದಾಗ ದರ್ಬಾರನ್ನು ಅಭಿನಂದಿಸಿರುವರು.

ತನ್ನ ನಿರ್ಬಂಧವಾಸದ ಕ್ಷೇತ್ರದ ಹೊರಗಿದ್ದ ಒಂದು ಸಿನೆಮಾ ಮಂದಿರಕ್ಕೆ ಹೋದ ಸಂಬಂಧ ಪಾಬ್ನಾದ ಡೆಟಿನ್ಯೂ ತಾರಕನಾಥ ದಾಸ್ ಎಂಬವನಿಗೆ ೨ ತಿಂಗಳ ಕಠಿನ ಸಜೆ.

ಮಿಡ್ನಾಪುರದ ಮೌಲ್ವಿ ಅಬ್ದುಲ್ ಅಜೀಜ್‌ಖಾನ್ ಎಂಬ ಪುಣ್ಯಾತ್ಮರು ಕುಗವುರದಲ್ಲಿ ಒಂದು ಹಿಂದೂ ಆಶ್ರಮಕ್ಕಾಗಿ ಒಂದಿಷ್ಟು ಸ್ಥಳವನ್ನು ದಾನಮಾಡಿ, ಅಲ್ಲಿ ಹರನಾಥ ಮೊದಲಾದ ಹಿಂದೂ ದೇವತೆಗಳ ಪ್ರತಿಷ್ಠೆಯಾಗಲೆಂದು ಹಿಂದೂಗಳಿಗೆ ತಿಳಿಸಿದ್ದಾರೆ.

ದಿವಂಗತ ಸರ್- ಫಜ್ಲಿ- ಹುಸೇನ್‌ರವರಿಗೆ, ಭಾರತದ ಎಲ್ಲ ಕಡೆಗಳಿಂದಲೂ ಸ್ತೋತ್ರಮಾಲೆಗಳ ಸುರಿಮಳೆಯಾಗುತ್ತದೆ.

ಈಗ ೬೮ ವರ್ಷ ಪ್ರಾಯವಾಗಿದ್ದು ಕಳೆದ ೫೬ ವರ್ಷಗಳಿಂದ ಒಂದು ಹಿಡಿ ಅನ್ನವನ್ನೂ ಮುಟ್ಟದಿರುವ ಬಂಕುರದ ಗಿರಿಬಾಲೆ ಎಂಬಾಕೆಯು ಈ ವಯಸ್ಸಿನಲ್ಲಿಯೂ ಶಕ್ತಿಗುಂದದೆ, ರೂಪವತಿಯಾಗಿರುವಳೆಂದು ಆಕೆಯ ಜೀವನಚರಿತ್ರೆಯನ್ನು ಲಂಡನ್ ಪತ್ರಿಕೆಯೊಂದು ಪ್ರಕಟಗೊಳಿಸಿದೆ.



1934ರ ಓಲ್ ಇಂಡಿಯಾ ಮೆಡಿಕಲ್ ಕಾನ್ಫರೆನ್ಸ್ ಎಗ್ಸಿಬಿಶನಿನಲ್ಲಿ 'ಸರ್ಟಿಫಿಕೇಟ್ ಆಫ್ ಮೆರಿಟ್' ಹಾಗೂ, 1935ರ ಕೈಗಾರಿಕೆಯ ಪ್ರದರ್ಶನದಲ್ಲಿ ಬಂಗಾರದ ಮೆಡಲೂ ದೊರಕಿವೆ.

ಮಕ್ಕಳಿಗೂ ಪ್ರಾಯಸ್ಥರಿಗೂ

ಒಳಗೆ ಶುಚಿಯಾಗಿರಿಸುವ ಅತ್ಯಂತ ಸುರಕ್ಷಿತವಾದ, ಪ್ರಾತರಿಯಾದ ಔಷಧಿಗಳಲ್ಲಿ ಒಂದು, ಕ್ರಮವಾಗಿ ಒಂದೊಂದು ಡೋಜ್ ಹರಳೆಣ್ಣೆ ಸೇವಿಸುವುದೇ. ಮತ್ತೆ ಇಂಡಿಯದಲ್ಲೆಲ್ಲ ಸ್ವಸ್ತಿಕಾ ಔಷಧಿಮಿಶ್ರಣದ ಹರಳೆಣ್ಣೆಯಷ್ಟು ಉತ್ತಮವಾದ, ಶುದ್ಧವಾದ ಎಣ್ಣೆಯು ಬೇರೊಂದಿಲ್ಲ. ಅನೇಕ ಅತ್ಯಂತ ದೊಡ್ಡ ಆಸ್ಪತ್ರೆಗಳಲ್ಲಿಯೂ ಸರಕಾರೀ ಸಂಸ್ಥೆಗಳಲ್ಲಿಯೂ ಇದನ್ನು ಉಪಯೋಗಿಸುತ್ತಾರೆ. ಇದಕ್ಕೆ ವಾಸನೆ ಇಲ್ಲ; ರುಚಿ ಇಲ್ಲ. ಇದರ ಕೆಲಸ ಮೃದು. ಸೇವಿಸಿದಾ 100% ಶುದ್ಧ. ಒಳಗೆ ಶುಚಿಯಾಗಿರಿಸಲು, ಮಕ್ಕಳಿಗೂ-ಪ್ರಾಯಸ್ಥರಿಗೂ ಇದಕ್ಕಿಂತ ಉತ್ತಮ ವಿಧಾನವು ಇನ್ನೊಂದಿಲ್ಲ. ತೃಪ್ತಿ ಆಗದಿದ್ದರೆ ಹಣ ಹಿಂದೆ.

ಶ್ರೀಮತಿ ಅಮೃತ ಕುವರಿಯವರೂ ಇನ್ನೈದು ಮಂದಿ ಹೆಂಗಸರೂ, ಅರ್ಧನಗ್ನರಾದ ಕ್ಷಾಮಪೀಡಿತ ಮಹಿಳೆಯರಿಗಾಗಿ ೧೫ ಸಾವಿರ ಸೀರೆಗಳನ್ನು ಸಂಗ್ರಹಿಸಲು ಬಂಗಾಳದ ಮುಖ್ಯ ಪಟ್ಟಣಗಳಲ್ಲಿ ಸಂಚರಿಸಲು ಹೊರಟಿರುವರು.

ಡಾಕ್ಟರ್ ಅಂಬೇಡ್ಕರವರ ಕಿವಿಯೂದಲಿಕ್ಕೆ ಕೈರೋದಿಂದ ಒಂದು ಡೆಪ್ಯುಟೇಶನ್ ಸದ್ಯದಲ್ಲೇ ಇಂಡಿಯಕ್ಕೆ ಬರುವುದು. ಇಸ್ಲಾಂ ಧರ್ಮೋಪದೇಶ ಮಾಡಿ ಆ ಮತಕ್ಕೆ ಸೇರುವಂತೆ ಪ್ರೋತ್ಸಾಹಿಸುವುದೇ ಅವರ ಉದ್ದೇಶ.

ಪಂಡಿತ ಮಾಳವ್ಯರೂ, ಪಂಡಿತ ಜವಹರಲಾಲ್ ನೆಹರೂ ಯವರೂ ಅಲ್ಮಹಾಬಾದಿನಲ್ಲಿ ಸ್ಥಂಧಿಸಿ ಮಾತಾಡಿದರು. ಬರುವ ಚುನಾವಣೆಯಲ್ಲಿ, ಪಂಡಿತರ ನ್ಯಾಶನಲಿಸ್ಟ್ ಪಂಗಡವೂ, ಕಾಂಗ್ರೆಸೂ ಪರಸ್ಪರ ಸಹಕರಿಸಿ ಕೆಲಸಮಾಡುವ ಕುರಿತು ಈ ಸಂಭಾಷಣೆ ನಡೆಯಿತೆಂದು ತಿಳಿದುಬರುತ್ತಿದೆ.

ಸಮಗ್ರ ಭಾರತದ ರೈಲ್ವೇ ಜನರ ಫೆಡರೇಶನಿನ ಕೌನ್ಸಿಲಿನವರು ಸಿಮ್ಲದಲ್ಲಿ ಸಭೆ ಸೇರಿ, ರೈಲ್ವೆ ಬೋರ್ಡಿನ ಕೆಲವೊಂದು ಏರ್ಪಾಡುಗಳ ಕುರಿತು, ಆ ಏರ್ಪಾಡುಗಳಿಂದ ಉಂಟಾದ ಪರಿಸ್ಥಿತಿಯ ಕುರಿತು ಸಮಾಲೋಚಿಸಿದರು. ಬೋರ್ಡು ೪ ಸಾವಿರ ಮಂದಿ ಉದ್ಯೋಗಿಗಳನ್ನು ಕಡಿಮೆ ಮಾಡುವಂತೆಯೂ, ಸರಿಯಾದ ವಿಚಾರಣೆ ನಡೆಸದೆ, ಉದ್ಯೋಗಿಗಳ ಸಂಬಳದ ಸ್ಕೇಲನ್ನು ತಗ್ಗಿಸುವಂತೆಯೂ ನಿರ್ಣಯಿಸಿರುವುದೇ ಇಂದಿನ ಈ ವಿಷಮ ಸ್ಥಿತಿಗೆ ಕಾರಣವಾಗಿದೆ. ಈ ಸಂಬಂಧ ಈ ಕೌನ್ಸಿಲು ಸರಕಾರವನ್ನು ಪ್ರಾರ್ಥಿಸಲು ನಿರ್ಧರಿಸಿದೆಯಲ್ಲದೆ, ಉದ್ದಿಷ್ಟ ಕಾರ್ಯವು ಕೈಗೂಡವಿದ್ದಲ್ಲಿ ಈ ಜನರು ಕಾರ್ಯತ್ಯಾಗಕ್ಕೂ ಸಿದ್ಧರಾಗುವಂತೆ ತೋರುತ್ತದೆ.

ಕಲ್ಕತ್ತೆಯ ಬ್ರಿಟಿಷ್-ಇಂಡಿಯನ್ ಸಂಘದ ಕಾರ್ಯಾಲಯದಲ್ಲಿ ಸುಮಾರು ೧ ಸಾವಿರ ರೂಪಾಯಿಗಳ ಕಳುವು. ಇಬ್ಬರ ಕೈದಾಗಿದೆ.

೨೦ ವರ್ಷದ ಒಬ್ಬ ಬರ್ಮಾ ಹುಡುಗಿಯನ್ನು ಪೋಲೀಸರು ರಂಗೂನಿನಲ್ಲಿ ಸ್ಟೀಮರಿನಲ್ಲಿ ಕೈದುಮಾಡಿದ್ದಾರೆ. ಈಕೆ ಹಿಂದೂ ಹುಡುಗಿಯಂತೆ, ಸೀರೆ ಉಟ್ಟುಕೊಂಡು ವೇಷ ಮರೆಸಿದ್ದಳು. ಇವಳನ್ನು ಒಂದು ಕಲ್ಕತ್ತೆಯ ಕಳುವಿನ ಸಂಬಂಧ ಹುಡುಕುತ್ತಿದ್ದರು. ಇವಳ ವೈನೇಲೆ ಕೆಲವು ಬಂಗಾರದ ಒಡವೆಗಳೂ ಸಿಕ್ಕಿವೆ.

ಆಫ್ರಿಕದ ಘನ ಉದ್ಯೋಗಿಗಳಾದ ನಮ್ಮ ಸರ್. ರಾಜಾ ಆಲಿಯವರು ಈಗ ಸ್ವಲ್ಪ ಗುಣ ಹೊಂದಿದ್ದಾರೆ. ೩--೪ ದಿನಗಳಲ್ಲಿ ಉದ್ಯೋಗವನ್ನು ನಿರ್ವಹಿಸಬಹುದು.

ಮಿಸೆಸ್ ದತ್ತರವರ ಸಹಿತ ಯುರೋಪಿಗೆ ಪ್ರಯಾಣ ಬೆಳೆಸುವ ಹಿಂದೀಯ ವಿದ್ಯಾರ್ಥಿನಿಯರನ್ನು ಲಂಡನಿನಲ್ಲಿ ಸರ್ ಫೆರೋಜ್ ಖಾನ್ ನೂನ್‌ರವರು ಸ್ವಾಗತೀಕರಿಸಿ ಸಮಯೋಚಿತ ವಚನಗಳಿಂದ ಅವರನ್ನು ಪ್ರೋತ್ಸಾಹಿಸಿದರು.

ಕಲ್ಕತ್ತಾ ಇಲೆಕ್ಟ್ರಿಕ್ ಸಪ್ಲೈ ಕಾರ್ಪರೇಶನಿನವರ ವಿದ್ಯುಚ್ಛಕ್ತಿಯ ಪ್ರಮಾಣದಲ್ಲಿ ಕಳ್ಳತನ ನಡೆಸಿ ಕಂಪೆನಿಗೆ ವಂಚನೆ ಮಾಡಿದ ೮ ಮಂದಿ ಅಪರಾಧಿಗಳಿಗೆ ಕಲ್ಕತ್ತೆಯ ನ್ಯಾಯಾಧೀಶರು ಕೆಳ ಕೋರ್ಟಿನ ದಂಡನೆಗಳನ್ನೇ ಸ್ಥಿರಗೊಳಿಸಿದರು. ಇತರ ಮೂವರನ್ನು ಮಾತ್ರ ಬಿಟ್ಟುಬಿಟ್ಟರು.

ಕಟಕ್ ನಗರವೇ ಒರಿಸಾದ ರಾಜಧಾನಿಯಾಗಬೇಕೆಂಬ ಹಕ್ಕು ಸ್ಥಾಪಿಸಲು, ಅಲ್ಲೊಂದು ಸಾರ್ವಜನಿಕ ಸಭೆ ಸೇರಿ, ಆ ನಿರ್ಣಯವನ್ನು ಅಧಿಕಾರಿಗಳಿಗೆ ತಿಳಿಸಲಾಯಿತು.

ಕಲ್ಕತ್ತೆಯ ಸ್ಮಾಲ್ ಕಾಸ್ ಕೋರ್ಟಿನ ಪ್ಲೀಡರರಾದ ಪೂರಿ ದುರ್ಗಾ ಪ್ರಸಾದ ಘೋಷ್ ಎಂಬ ಪ್ಲೀಡರರು, ಒಬ್ಬ ಕಕ್ಷೀಗಾರನ ರೂ. ೧೪೦೦ನ್ನು ಕಾನೂನಿಗೆ ವಿರುದ್ಧವಾಗಿ ಉಪಯೋಗಿಸಿಕೊಂಡರೆಂದು ಅವರಿಗೆ ೪ ವರ್ಷಗಳ ಕಠಿನ ದಂಡನೆ.

ಹಿಮಾಲಯ ಪರ್ವತಾರೋಹಣದ ಒಂದು ವಿಶೇಷೀಯರ ಸಂಗಡವು ಈಗಾಗಲೇ ತನ್ನ ಕಾರ್ಯವನ್ನು ಆರಂಭಿಸಿದೆ.

ಖುಲ್ನಾ ಪ್ರಾಂತದಲ್ಲಿ ೫೦ ಮಂದಿ ಕುಳಿತಿದ್ದ ಒಂದು ದೋಣಿ ಒಂದು ಹೊಳೆಯಲ್ಲಿ ಮಗುಚಿ ೫ ಮಕ್ಕಳೂ, ಇಬ್ಬರು ಇತರರೂ ಮುಳುಗಿ ಹೋದರು. ವಿಕ್ಕವನ್ನು ಬದುಕಿಸಲಾಯಿತು.

(೧೨ನೇ ಪುಟದಿಂದ)

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಮುಂದಿನ ಮಿಾಟಿಂಗು ಇಲ್ಲಿನ ಡಿll ಬೋll ಆಫೀಸಿನಲ್ಲಿ ಇದೇ ಜುಲ್ಯಾ ತಾ. ೨೫ನೇ ಶನಿವಾರ ಪ್ರಾತಃ ಗಂಟೆ ೧೧ರಿಂದ ೧ ಮತ್ತೂ ಅಪರಾಹ್ನ ಗಂಟೆ ೨ರಿಂದ ೪-೩೦ರ ವರೆಗೆ ಜರುಗುವುದು.

೧೯೩೬ನೇ ಇಸವಿ ಅಕ್ಟೋಬರ ತಾ. ೧ನೇ ತಾರೀಕಿಗೆ ಪ್ರಾರಂಭವಾಗಿ ೧೯೩೬ನೇ ಇಸವಿ ಸಪ್ಟಂಬರ ತಾ. ೩೦ಕ್ಕೆ ಅಂತ್ಯವಾಗುವ ಗುತ್ತಿಯ ಬಗ್ಗೆ, ದಕ್ಷಿಣ ಕನ್ನಡ ಜಿಲ್ಲಾ ಶೇಂದಿ ಅಂಗಡಿಗಳು, ಈ ಕೆಳಗೆ ಕಾಣಿಸಿದಂತೆ, ಸಂಬಂಧಪಟ್ಟ ರೆವಿ ಡಿll ಆಫೀಸರರಿಂದ ಬಹಿರಂಗವಾಗಿ ಏಲಂ ಮಾಡಲ್ಪಡುವುವು:—(೧) ಮಂಗಳೂರು ತಾಲೂಕು-ತಾಲೂಕು ಕಚೇರಿಯಲ್ಲಿ ಆಗೋಸ್ತು ತಾ. ೫ನೇ ಬುಧವಾರ; (೨) ಪುತ್ತೂರು (ಬೆಳ್ತಂಗಡಿ ಸೆಂಟರ್)-ಬೆಳ್ತಂಗಡಿ ತಹಶೀಲ್ದಾರರ ಕಚೇರಿಯಲ್ಲಿ ತಾ. ೬—೮—೩೬ನೇ ಗುರುವಾರ; (೩) ಕುಂದಾಪುರ-ಕುಂದಾಪುರ ತಾಲೂಕು ಕಚೇರಿಯಲ್ಲಿ ತಾ.೭—೮—೩೬ನೇ ಶುಕ್ರವಾರ; (೪) ಪುತ್ತೂರು (ಪುತ್ತೂರು ಸೆಂಟರ್) ಪುತ್ತೂರು ತಾ. ಕಚೇರಿಯಲ್ಲಿ ೮—೮—೩೬ನೇ ಶನಿವಾರ; (೫) ಉಡುಪಿ—ಉಡುಪಿ ತಾ. ಕಚೇರಿಯಲ್ಲಿ ತಾ. ೧೦—೮—೩೬ನೇ ಸೋಮವಾರ. (೬) ಕಾಸರಗೋಡು (ಕಾಸರಗೋಡು ಸೆಂಟರ್)-ಕಾಸರಗೋಡು ತಾ. ಕಚೇರಿಯಲ್ಲಿ ತಾ. ೧೧—೮—೩೬ನೇ ಮಂಗಳವಾರ; (೭) ಕಾರ್ಕಳ-ಕಾರ್ಕಳ ತಾ. ಕಚೇರಿಯಲ್ಲಿ ತಾ. ೧೨—೮—೩೬ನೇ ಬುಧವಾರ; (೮) ಕಾಸರಗೋಡು (ಹೊಸದುರ್ಗ ಸೆಂಟರ್)-ಹೊಸದುರ್ಗ ಡಿಪ್ಯುಟಿ ತಹಶೀಲ್ದಾರರ ಕಚೇರಿಯಲ್ಲಿ ೧೩—೮—೩೬ನೇ ಗುರುವಾರ,

ಮಿ. ಟಿ. ಎವರ್. ಮೆಥ್ಯೂ, ಐ. ಎಫ್. ಎಸ್.ರವರು ಮಂಗಳೂರು ಸೌತ್ ಡಿವಿಜನಿನ ಡಿಸ್ಟ್ರಿಕ್ಟ್ ಫೊರೆಸ್ಟ್ ಆಫೀಸರರಾಗಿ ವರ್ಗಾಯಿಸಲ್ಪಟ್ಟಿರುವರು.

ಎಸ್. ಕೆ. ಡಿ. ಏ. ಎ.ಯ ಎಗ್ಜಿಕ್ಯೂಟಿನ್ ಮಿಾಟಿಂಗು, ಇದೇ ಕಳೆದ ಜುಲ್ಯಾ ತಾ. ೮ರಲ್ಲಿ ಮುನಿಸಿಪಾಲಿಟಿಯಲ್ಲಿ ಜರುಗಿ (೧) ಇಂಟರ್ ಸ್ಕೂಲ್, ಇಂಟರ್‌ಕಾಲೇಜಿಯೇಟ್ ಮತ್ತೂ ಆಲ್ಬುಕರ್ಕ್ ಕ್ರಿಕೆಟ್ ಟೂರ್ನಮೆಂಟುಗಳು ಇದೇ ಅಕ್ಟೋಬರ ತಾ. ೨೫ರೊಳಗೆ ಅಂತ್ಯವಾಗುವುವೆಂದೂ, (೨) ಸಬ್ ಜೂನಿಯರ್ ಕ್ರಿಕೆಟ್ ಟೂರ್ನಮೆಂಟ್ ಇದೇ ಸೆಪ್ಟೆಂಬರ್ ತಾ. ೧೦ರೊಳಗೆ ಅಂತ್ಯವಾಗುವುದೆಂತಲೂ, (೩) ಜೂನಿಯರ್ ಮತ್ತೂ ಸೀನಿಯರ್ ಕ್ರಿಕೆಟ್ ಟೂರ್ನಮೆಂಟ್ ಇದೇ ಸೆಪ್ಟೆಂಬರ ತಾ. ೨೧ಕ್ಕೆ ಆರಂಭವೆಂತಲೂ, (೪) ಇಂಟರ್‌ಕಾಲೇಜಿಯೇಟ್ ಟೂರ್ನಮೆಂಟ್ ಇದೇ ಅಕ್ಟೋಬರ ಮೊದಲನೆಯ ವಾರದಲ್ಲಿ ಆರಂಭವೆಂತಲೂ, (೫) ಆಲ್ಬುಕರ್ಕ್ ಟೂರ್ನಮೆಂಟು ಇದೇ ಸೆಪ್ಟೆಂಬರ ಮೊದಲನೆ ವಾರದಲ್ಲಿ ಆರಂಭವೆಂತಲೂ ನಿರ್ಧರಿಸಲಾಯಿತು. ಎಲ್ಲ ಪ್ರದೇಶದ ಆಜಿರ್‌ಗಳೂ ಇದೇ ಆಗೋಸ್ತು ತಾ. ೧೭, ಸಂಜೆ ಗಂಟೆ ೫ರೊಳಗೆ ಈ ಸಂಘದ ಗೌll ಕಾರ್ಯದರ್ಶಿಗೆ ತಲುಪಬೇಕಾಗಿದೆ.

INSURE WITH
CONFIDENCE
IN
INDIA
EQUITABLE
THE BEST
Life Office of its Age.
(Estd: 1908).
INDIA EQUITABLE INSURANCE CO.
LTD. CALCUTTA.

ತಾಲೂಕು ವರ್ತಮಾನ.

ಕುಂದಾಪುರ:—ದಿವಂಗತ ಸಾರ್ವಭೌಮರ ಸ್ಮಾರಕನಿಧಿಗಾಗಿ ಇದೇ ಕಳೆದ ತಾ. ೨೩ರಲ್ಲು ಮಾನ್ಯ ಸಬ್ ಕಲೆಕ್ಟರವರಾದ ಮು. ರಾ. ಪರಿಗ್ರಸ್, ಐ. ಸಿ. ಯಸ್. ಅವರ್ಗಳ ಅಧ್ಯಕ್ಷತೆಯಲ್ಲಿ ಕಮಿಟಿಯೊಂದು ಏರ್ಪಟ್ಟು, ಅದು ನಿಧಿ ಸಂಗ್ರಹದ ಕೆಲಸವನ್ನು ಮೆಹನತ್ತಿನಿಂದ ಮಾಡುತ್ತಲಿದೆ.

ಕಳೆದ ವಾರ ಬಿರುಗಾಳಿಯು ಅನಾಹುತದಿಂದ ಅನೇಕ ಮರಗಳು ಬಿದ್ದುಹೋಗಿವೆ; ಕೆಲವು ಮನೆ ಮಾಡುಗಳ ಹಂಚುಗಳು ಹಾರಿಹೋಗಿವೆ. ಗಂಗೊಳ್ಳಿ ಹೊಳೆಯಲ್ಲಿ ಅನೇಕ ದೋಣಿಗಳೂ ಲಾಂಚೂ ಅಳಿವೆಯು ಅಪಾಯಕ್ಕೆ ಗುರಿಯಾಗಿದ್ದರೂ ಪ್ರಾಣಹಾನಿಯೇನೂ ಸಂಭವಿಸಲಿಲ್ಲ.

ಸ್ಥಳೀಯ ಕರ್ಣಾಟಕ ಸಾಹಿತ್ಯ ಸಂಘದ ೧೨ನೇ ಸಭೆಯು ಸ್ಥಳೀಯ ಹಿಂದೀ ಪಾಠಶಾಲೆಯಲ್ಲಿ ಇಲ್ಲಿಯ ಆಯುರ್ವೇದ ಪಂಡಿತರಾದ ಶ್ರೀಯುತ ಬಿ. ಪಾಂಡುರಂಗ ಭಟ್ಟ್ರು, ಭಿಷಗ್ರತ್ನ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಹ್ಯಾಸ್ಕೂಲಿನ ಕನ್ನಡ ಪಂಡಿತರಾದ ಶ್ರೀ. ವಿದ್ವಾನ್ ಪಿ. ಕುಪ್ಪಣ್ಣಾಚಾರ್ಯರು ನಮ್ಮ ಜಿಲ್ಲೆಯ ಪ್ರಸಿದ್ಧ ಕವಿಗಳಾದ ನಂದಳಿಕೆ ಲಕ್ಷ್ಮೀನಾರಾಣಪ್ಪನವರಿಂದ ರಚಿತವಾದ ಅದ್ಭುತ ರಾಮಾಯಣದ ಕೆಲವು ಭಾಗವನ್ನು ಶ್ರಾವ್ಯವಾಗಿ ಓದಿ ಹೇಳಿದರು. ಸಾಹುಕಾರ್ ಶ್ರೀಯುತ ಎಚ್. ಕೋಟಿಯಣ್ಣ ಶೆಟ್ರು 'ಪಾಪ ಪುಣ್ಯ'ವೆಂಬ ವಿಷಯದಲ್ಲಿ ಅರ್ಥಗರ್ಭಿತವಾದ ಭಾಷಣ ಮಾಡಿದರು. ಸಭಿಕರಲ್ಲಿ ಮು. ರಾ. ಕೆ. ನರಸಿಂಹ ಕಾಮತ್ ವಕೀಲ್, ಎಚ್. ರಾಮಪ್ಪಯ್ಯ ಎಮ್. ಎ. ಬಿ ಎಲ್. ಕೆ. ನಾರಾಯಣ ಶಾನುಭಾಗರು, ಬಿ. ಎ. ವಕೀಲ್, ಪಿ. ಕೆ. ಆಚಾರ್ಯ, ವಿದ್ವಾನ್, ಮೊದಲಾದ ಮಹನೀಯರು ಪ್ರಕೃತ ವಿಷಯವನ್ನು ವಿಮರ್ಶಿಸಿ ಭಾಷಣ ಮಾಡಿದರು. ಅಧ್ಯಕ್ಷರು, ನಾವು ಆದಷ್ಟು ಪುಣ್ಯ ಕೆಲಸಗಳನ್ನು ಮಾಡಬೇಕೆಂದೂ ಪಾಪಕೆಲಸಗಳಿಂದ ದೂರ ವಿರಬೇಕೆಂದೂ, ವಿವರಿಸಿದರು.

ಉಡುಪಿ:—ಕಳೆದ ಶುಕ್ರವಾರ ಇಲ್ಲಿಯ ನಮ್ಮ ಮುನ್ಸಿಫ್ ಕೋರ್ಟಿನಲ್ಲಿ ವಿಶೇಷವೊಂದು ನಡೆದು ಹೋಗಿದೆ!—ಕೋರ್ಟು ಹೇಡಬು ಮಾಡಿದರೆಂಬ ಆರೋಪದ ಮೇಲೆ ಇಲ್ಲಿಯ ಬಿ. ಎ. ಬಿ. ಎಲ್. ವಕೀಲರೊಬ್ಬರಿಗೆ ಸಾಯಾಹ್ನ ೬ ಗಂಟೆಯಿಂದ ರಾತ್ರಿ ೧೦ ಗಂಟೆಯ ವರೆಗೂ ತನ್ನಿ ನಡಿಸಿ, ನಮ್ಮ ಮಾನ್ಯ ಮುನ್ಸೀಫರು ರೂ. ೫ ಜುರುಮಾನೆ ಮಾಡಿದರು. ಒಡನೆ ಹುಕುಮಿನ ನಕಲಿಗೂ ಅಪಾದಿತರ ಕಡೆಯ ಶ್ರೀಯುತ ವಿಠಲ ಕಾಮತರು ಅರ್ಜಿ ಡಾಕ್ಲು ಮಾಡಿದರು; ಇದರ ಪರಿಣಾಮವು ಎಲ್ಲಿಯ ವರೆಗೂ ಹೋಗುವುದೋ ಎಂಬುದನ್ನು ಮುಂದೆ ನೋಡಲಿದೆ—ಎಂದೊಂದು ಬಾತ್ಮಿ.

ಕಾಸರಗೋಡು:—ಕಳೆದ ವಾರದಲ್ಲಿ ಪೋಲೀಸ ಸುಪರಿಂಟೆಂಡೆಂಟರು ಇಲ್ಲಿಗೆ ವಿಚ್ಛೈಸಿದ್ದರು. ಸ್ಥಳೀಯ ತಾಲೂಕು ಕಚೇರಿಯಲ್ಲಿ ಕಳೆದ ಗುರುವಾರ ಸಾರ್ವಜನಿಕ ಸಭೆಯು ಸೇರಿ, ಅವರು ಪ್ರತಿಯೊಂದು ಹಳ್ಳಿಯಲ್ಲಿ ಊರ ಮಹನೀಯರ ಸಂಘಗಳನ್ನೇರ್ಪಡಿಸಿ ಕೊಲೆ ಸುಲಿಗೆ ಮುಂತಾದ ಗುನ್ಹೆಗಳಲ್ಲಿ ಜನತೆಗೆ ಪತ್ತೆ ಮಾಡುವ ಅನುಕೂಲತೆಗಳನ್ನು ಒದಗಿಸಿ ಕೊಡುವ ವಿಷಯದಲ್ಲಿ ಭಾಷಣ ಮಾಡಿದರು. ಖಾನ್ ಬಹದೂರ್ ಮಹಮ್ಮದ್ ಶಮ್ನಾಡ್, ತಹಶೀಲ್ದಾರರು ಮುಂತಾದ ಹಲವು ಮಹನೀಯರು ನೆರೆದಿದ್ದರು.

ಇಲ್ಲಿಯ ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀಯುತ ಕೆ. ಶ್ರೀನಿವಾಸ ಕಿಣಿಯವರಿಗೆ ಕಾರ್ಕಳ ಬೋರ್ಡು ಹೈಸ್ಕೂಲಿಗೂ ಅಲ್ಲಿಯ ಮುಖ್ಯೋಪಾಧ್ಯಾಯರಿಗೆ ಇಲ್ಲಿಗೂ ವರ್ಗವಾಗಿರುತ್ತದೆ.

ಒಬ್ಬ ಹೊಟೆಲ್ ಪ್ರಮುಖಪುರುಷರ ಕೊಲೆಯ ಬೆದರಿಕೆ.

ಮೈಸೂರಿನ ಮಹಾಜನರಲ್ಲಿ ಅಕಸ್ಮಾತಾಗಿ ಒಂದು ಬಗೆಯ ಉದ್ವೇಗ ಉಂಟಾಯಿತು—ಕಾರಣ, ಮೈಸೂರಿನ ಮತ್ತೂ ಊಟಿಯ ಮೊಡರ್ನ್ ಹಿಂದೂ ಹೊಟೆಲ್‌ಗಳ ಹಾಗೂ ಮದ್ರಾಸಿನ ಮೊಡರ್ನ್ ಕೇಫೆಯ ಪ್ರೊಪ್ರೈಟರರಾದ ಶ್ರೀಮಾನ್ ಕೆ. ಸೀತಾರಾಮರಾಯರು, ಕ್ರಿಮಿನಲ್ ಪ್ರೊಸೀಜರ್ ಕೋಡ್ ಸೆಕ್ಷನ್ ೧೦೭ ಪ್ರಕಾರ, ಅವರ ಸಹೋದರ ಶ್ರೀ. ಕೆ. ಗುರುರಾಜಾಚಾರ್, ಪ್ರೊಪ್ರೈಟರ್, ಉಡುಪಿ ಆನಂದ ಭವನ, ಮೈಸೂರು, ಇವರನ್ನು ಒಳ್ಳೆಯ ನಡತೆಯ ಮುಚ್ಚಳಿಕೆಗೊಳಪಡಿಸಬೇಕೆಂದು, ಒಂದು ಅರ್ಜಿಯನ್ನು ಮೈಸೂರಿನ ಸಿಟಿ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹಾಜರು ಮಾಡಿದುದೇ. ಮೇಲಿನ ವಿಷಯಕ್ಕೆ ಸಂಬಂಧಿಸಿದ ಶ್ರೀ. ಕೆ. ಗುರುರಾಜಾಚಾರ್ಯರಿಂದ ಬರೆಯಲಾದ ಕಾಗದಪತ್ರಗಳು ಪೋಲಿಸ್ ಅಧಿಕಾರಿಗಳಿಂದ ಸ್ವಾಧೀನಪಡಿಸಿಕೊಳ್ಳಲಾಗಿವೆಯಂತೆ.

ಸೀದಾ ಗೃಹಸ್ಥರೂ, ತೀಕ್ಷ್ಣಬುದ್ಧಿಯುಳ್ಳವರೂ, ಜನಪ್ರೀತರಾದ ವ್ಯವಹಾರಶೀಲರೂ, ಆವರ ವೃತ್ತಿಯಲ್ಲಿ ಭಾರತದಲ್ಲೆಲ್ಲ ಪ್ರಖ್ಯಾತರೂ ಆಗಿರುವ ಶ್ರೀ. ಸೀತಾರಾಮರಾಯರಂಥ, ಆ ಉತ್ಕೃಷ್ಟ ತರಗತಿಗೆ ಸೇರಿದ ಒಬ್ಬ ಗೃಹಸ್ಥರು ಈ ರೀತಿಯ ತೊಂದರೆಗೆ ಬಲಿಬೀಳುವ ಪ್ರಸಂಗವೊದಗಿದುದು ನಿಜವಾಗಿಯೂ ಅತ್ಯಂತ ವಿಸ್ಮಯಜನಕವಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಆದಿದ್ರಾವಿಡ ಅಧ್ಯಾಪಕರ ಸಮ್ಮೇಳನದ ಸೂಚನೆಗಳು.

(ಮುಂದರಿಸಿದುದು)

ಸರಕಾರದಲ್ಲಿ ಬೇಡಿಕೆಗಳು.

(೪) ಆದಿದ್ರಾವಿಡ ಮಕ್ಕಳಿಗೆಂದೇ ಇರುವ ಸಾಲೆಗಳಲ್ಲಲ್ಲದೆ, ಇತರ ಶಾಲೆಗಳಲ್ಲಿ ಆದಿದ್ರಾವಿಡ ಅಧ್ಯಾಪಕರಿಗೆ ಆ ಉದ್ಯೋಗ ದೊರೆಯುವುದು ಬಹು ಕಷ್ಟವಾಗಿರುವ ಕಾರಣ, ಯೋಗ್ಯರಾದ (qualified) ಆದಿದ್ರಾವಿಡ ಯುವಕರು ತಮಗೆ ಅಧ್ಯಾಪಕರ ಉದ್ಯೋಗವು ಕೊಡಬೇಕೆಂದು ಲೇಬರಿಗೆ ಅರ್ಜಿ ಮಾಡಿದಲ್ಲಿ, ಆಯಾ ಜಿಲ್ಲೆಗಳಲ್ಲಿರುವ ಲೇಬರ್ ಶಾಲೆಗಳ ಉಪಾಧ್ಯಾಯರ ಉದ್ಯೋಗದ ಸಂಖ್ಯೆಯೂ, ಅವುಗಳಲ್ಲಿ ಉದ್ಯೋಗ ನೋಡುವ ಆದಿದ್ರಾವಿಡ ಅಧ್ಯಾಪಕರ ಸಂಖ್ಯೆಯೂ ಸೇರಿದ ನೂರರಷ್ಟಾಗುವ ವರೆಗೆ, ಹಾಗೆ ಅರ್ಜಿ ಮಾಡಿದ ಆದಿದ್ರಾವಿಡ ಅರ್ಜಿದಾರರಿಗೆ ಅಧ್ಯಾಪಕರ ಉದ್ಯೋಗವು ಕೊಡಲ್ಪಡಬೇಕಾಗಿ ಸರಕಾರವು ಆನುಗ್ರಹಿಸಬೇಕಾಗಿ ಈ ಸಭೆಯು ಬೇಡುವುದು. (೫) ಗ್ರಾಮಗ್ರಾಮಗಳಲ್ಲಿರುವ ಆದಿದ್ರಾವಿಡರ ಆರ್ಥಿಕ, ವಿದ್ಯಾ ಸಂಬಂಧವಾದ ಮತ್ತು ಕೊಲನಿಗಳ ಅನನುಕೂಲತೆ ಮತ್ತು ಕುಂದು ಕೊರತೆಗಳನ್ನು ವಿಚಾರಿಸಿ ತಿಳಿದು, ಅವನ್ನು ಸರಿಪಡಿಸುವರೆ ತಕ್ಕ ಏರ್ಪಾಡುಗಳನ್ನು ಮಾಡುವಂತೆ ಸರಕಾರಕ್ಕೆ ಆಗಿಂದಾಗ್ಗೆ ರಿಪೋರ್ಟು ಮಾಡಲಿಕ್ಕೂ, ಹಳ್ಳಿಗಳಲ್ಲಿರುವ ಆದಿದ್ರಾವಿಡ ಶಾಲೆಗಳಿಗೆ ಅಗತ್ಯವಿರುವ ಸಲಹೆಗಳನ್ನು ಕೊಡಲಿಕ್ಕೂ ಯೋಗ್ಯರಾದ ಆದಿದ್ರಾವಿಡ ಉದ್ಯೋಗಸ್ಥರನ್ನು ಜಿಲ್ಲೆಯಲ್ಲಿ ಒಬ್ಬಿಬ್ಬರನ್ನಾದರೂ, ಲೇಬರ್ ಇಲಾಖೆಯಲ್ಲಿ ನೇಮಕ ಮಾಡಬೇಕಾಗಿ ಈ ಸಭೆಯು ಸರಕಾರವನ್ನು ಬೇಡುವುದು. (೬) ಆದಿದ್ರಾವಿಡರಾದ ನಮ್ಮ ಜಾತಿಯಲ್ಲಿ ಜಾತಕವಿಡುವ ಪದ್ಧತಿಯಿಲ್ಲದಿರುವ, ಮತ್ತು ವಿದ್ಯಾಭ್ಯಾಸವನ್ನು ಸ್ವಲ್ಪ ಪ್ರಾಯ ವಿರಿದ ಮೇಲೆ ಮಕ್ಕಳು ಆರಂಭಿಸುವ ಕಾರಣ, ಲೇಬರ್ ಯಾ ಸರಕಾರದ ವಿದ್ಯಾ ಇಲಾಖೆಯಲ್ಲಿ ಉಪಾಧ್ಯಾಯರ ಉದ್ಯೋಗಕ್ಕೆ ನೇಮಕಹೊಂದುವ ಆದಿದ್ರಾವಿಡರ ಪ್ರಾಯಪ್ರತಿಬಂಧಕವನ್ನು (Age bar) ೫ ವರ್ಷಗಳ ತನಕ ೩೫ ವರ್ಷಗಳ ಮೇಲೆ ಎಂದು ನಿರ್ಣಯಿಸಬೇಕೆಂದು ಈ ಸಭೆಯು ಸರಕಾರವನ್ನು ಬೇಡಿಕೊಳ್ಳುವುದು. (೭) ಆದಿದ್ರಾವಿಡರ ಆರ್ಥಿಕ ಪರಿಸ್ಥಿತಿಯು ಬಹಳ ಅತೃಪ್ತಿಕರವಾಗಿರುವುದರಿಂದ ಉಪಾಧ್ಯಾಯವೃತ್ತಿಯಲ್ಲಿ ತರಬೇತುಹೊಂದುವ ಆದಿದ್ರಾವಿಡ ಯುವಕರಿಗೆ ತರಬೇತುಕಾಲದಲ್ಲಿ ಸಿಗುವ ಸ್ಟೈಪೆಂಡನ್ನು, ಮೊದಲಿದ್ದಂತೆ ತಿಂಗಳಿಗೆ ೧೦॥ ರೂಪಾಯಿಗೆ ಏರಿಸಬೇಕಾಗಿ ಈ ಸಭೆಯು ಸರಕಾರವನ್ನು ಪ್ರಾರ್ಥಿಸುವುದು. (೮) ಜಿಲ್ಲಾ ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟಿಂಗ್ ಆಫೀಸರರ ರಿಮಾರ್ಕ್ಸ್‌ನ ಯಾ ರೆಕಮೆಂಡೇಶನಿನ ಮೇರೆಗೆ ಮಾತ್ರ, ಲೇಬರ್ ಶಾಲೆಯ ಉಪಾಧ್ಯಾಯರುಗಳು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾಯಿಸಲ್ಪಡುವಂತೆ ಸರಕಾರವು ವ್ಯವಸ್ಥೆಗೊಳಿಸಬೇಕಾಗಿ ಈ ಸಭೆಯು ಕೇಳಿಕೊಳ್ಳುವುದು. (೯) ಬೇರೆ ಬೇರೆ ಹುದ್ದೆಗಳಿಗೆ ಯೋಗ್ಯರಾದ ಆದಿದ್ರಾವಿಡ ಉಮೇದ್ವಾರರನ್ನು ಆಯಾ ಹುದ್ದೆಗಳಿಗೆ ಸೇರಿದ ಎಂರಂತೆ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿಯೂ ಮುನಿಸಿಪಾಲಿಟಿಗಳಲ್ಲಿಯೂ ವಿನಿಯೋಗಿಸಬೇಕಾಗಿ ಸರಕಾರವನ್ನು ಸಭೆಯು ಬೇಡುವುದು. (೧೦) ಮತಾಂತರದ ಪ್ರಶ್ನೆ. (೧೧) ಜಿಲ್ಲಾ ಆದಿದ್ರಾವಿಡ ಅಧ್ಯಾಪಕರ ಸಂಘವೊಂದು ಸ್ಥಾಪಿಸುವುದು ಒಳ್ಳೆಯದು.

ನೋಟೀಸು

ಜಯಲಕ್ಷ್ಮೀ ಬೇಂಕ್ ಲಿಮಿಟೆಡ್, ಪುತ್ತೂರು.

ಈ ಕೆಳಗೆ ಕಾಣಿಸಿದ ಹೆಸರಿನವರು ಸದ್ರಿ ಬೇಂಕಿನಿಂದ ನಗ ಈಡಿನ ಮೇಲೆ ಸಾಲಪಡಕೊಂಡ ನಂತ್ರ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟಿಸುಗಳು ವಾಪಸು ಬಂದಿರುವುದರಿಂದ ಸದ್ರಿಯವರು ಈಡಿಟ್ಟ ನಗಗಳು ತಾ. 25—7—'36ರಲ್ಲು ಶನಿವಾರ ದಿನಸ ಯಾ ನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣವಾಗುವುದು ಎಂಬದನ್ನು ಈ ಮೂಲಕ ತಿಳಿಸಿರುತ್ತದೆ.

ಸಾಲದ ನಂಬ್ರ	ಸಾಲ ಪಡಕೊಂಡವನ ಹೆಸರು	ಸಾಲದ ಮೊಬಲಗು
1741	ಅಟಿಕುಕ್ಕೆ ಪುರುಷೋತ್ತಮ ಭಟ್ಟ, ವೆಂಕಟೇಶ	ರೂ. ಅ. ಪೈ.
33-34	ಭಟ್ಟ ಮಗ, ವರ್ಗದಾರ, ಬಾಯೂರು ಗ್ರಾಮ.	5—0—0
2848	ಬಾಕ್ರೋಡಿ ಅಬ್ದುಲ್ಲ ಬ್ಯಾರಿ, ಹೆಮ್ಮದೆ ಬ್ಯಾರಿ	
33-34	ಗಳ ಮಗ, ಬೇಸಾಯ, ತೆಕ್ಕಾರು ಗ್ರಾಮ.	22—0—0
841	ವಿಟ್ಲ ಮಾಂ ಬ್ಯಾರಿ, ಅಸಬ್ಬಪಶ್ಶಿ ಬ್ಯಾರಿ	
34-35	ಮಗ, ವ್ಯಾಪಾರಿ, ವಿಟ್ಲ ಕಸಬಾ ಗ್ರಾಮ.	30—0—0
1580	ನರಿಮೊಗ್ರು ಶೇಕೆ ಬಾರಿ, ಪಕ್ರೋಜಿ ಬ್ಯಾರಿಗಳ	
34-35	ಮಗ, ಬೇಸಾಯ, ನರಿಮೊಗ್ರು ಗ್ರಾಮ.	28—0—0
2358	ಕುಂಜಾಡಿ ಕೊರಗಪ್ಪ ರೈ, ತಿಮ್ಮಪ್ಪ ರೈಗಳ	
34-35	ಅಳಿಯ, ಬೇಸಾಯ, ಪಾಲ್ತಾಡು ಗ್ರಾಮ.	10—0—0
3035	ಪೀರ್ಯ ನಾರಾಯಣ ಪಲ್ಲತ್ತಾಯ, ವೆಂಕಟ್ರಮಣ ಪಲ್ಲತ್ತಾಯರ ಮಗ, ವರ್ಗದಾರ,	
34-35	ಇಳಂತಿಲ ಗ್ರಾಮ.	28—0—0
1646	ಬಿಲಿಯೂರು ಬಾಳಿಕೆ ಶೇಷಪ್ಪ ರೈ, ಕೊರಗ	
35-36	ಯಾನೆ ವೆಂಕಪ್ಪ ರೈಗಳ ಅಳಿಯ, ವರ್ಗದಾರ, ಬಿಲಿಯೂರು ಗ್ರಾಮ.	109—0—0
1828		
35-36	ಡಿ ಡಿ ಡಿ	30—0—0
1673	ಅಡ್ಯಾರ ರಾಮಯ್ಯ ಪೂಜಾರಿ, ಪಕಿರ ಪೂಜಾರಿ	
35-36	ಅಳಿಯ, ಕೂಲಿ, ಜಾಲ್ಸೂರು ಗ್ರಾಮ.	35—0—0
3769	ಆಮೇಯಿ ಸುಬ್ಬಯ್ಯ ಪೂಜಾರಿ, ಕೊರಗ	
35-36	ಪೂಜಾರಿ ಅಳಿಯ, ಬೇಸಾಯ, ಕಡೇಶ್ವಾಲ್ಯ ಗ್ರಾಮ.	12—0—0
	ಜುಮಲಾ	309—0—0

Jaya Laxmi Bank, Ltd.,
Puttur, South Kanara.
8—7—1936.

B. Sanjiva Rao,
ಏಜಂಟ್.

The Pangal Nayak Bank, Ltd.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಅಡವಿನ ಮೇಲೆ ಈ ಬೇಂಕಿನಿಂದ ಪಡೆದ ಸಾಲದ ಬಡ್ಡಿ ವಗೈರೆಯನ್ನು ಕೊಡದೆ ಇದ್ದುದರಿಂದ ಆ ಕುರಿತು ರಿಜಿಸ್ತ್ರಿ ನೋಟೀಸು ಕೊಟ್ಟಲ್ಲಿ ಸದರಿ ಆಸಾಮಿಗಳ ಪೈಕಿ ಕೆಲವರು ಊರಲ್ಲಿ ಇಲ್ಲವೆಂತ ವಾಪಾಸು ಬಂದದ್ದರಿಂದಲೂ, ಕೆಲವರು ನೋಟೀಸು ತಲ್ಪಿದರೂ ಬಡ್ಡಿ ಇತ್ಯಾದಿಗಳನ್ನು ಕೊಡದೆ ಇದ್ದುದರಿಂದಲೂ, ಮತ್ತು ಕೆಲವರು ಮೃತರಾಗಿದ್ದಾರಾಗಿ ತಿಳಿದುಬಂದಿರುವುದರಿಂದಲೂ, ಸದರಿ ಸಾಲಗಳಲ್ಲಿ ಜವಾಬ್ದಾರಿ ಇರುವ ಚಿನ್ನಾಭರಣಗಳನ್ನು ಇದೇ ಜುಲ್ಯಾ ತಿಂಗಳ 18ನೇ ತಾರೀಕಿನ ಶನಿವಾರ ಗಂಟೆ 3ಕ್ಕೆ ಅಥವಾ ಬೇಂಕಿಗೆ ಯುಕ್ತ ತೋರುವ ಬೇರೆ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಏಲಂನಿಂದ ಹುಟ್ಟಿ ಬಂದ ಏವೇಜಿನಿಂದ ಸಾಲದ ಅಸ್ಸು, ಬಡ್ಡಿ, ನೋಟೀಸು ಖರ್ಚು ವಗೈರೆ ವಜಾ ಮಾಡಿ ಉಳಿಯುವ ಹಣವನ್ನು ಆಯಾ ಆಸಾಮಿಗಳ ಅನಾಮತು ಖಾತೆಗೆ ನಿಬಡ್ಡಿಯಿಂದ ಜಮಾ ಇಡಲ್ಪಡುವುದು. ಏಲಂನಿಂದ ಹುಟ್ಟಿ ಬಂದ ಏವೇಜು, ಸಾಲವನ್ನು ಫಾರಿಗತು ಮಾಡುವರೆ ಕಡಿಮೆ ಬಿದ್ದ ಪಕ್ಷದಲ್ಲಿ ಸದರಿ ಕಡಿಮೆ ಬಿದ್ದ ಹಣಕ್ಕೆ ಆಯಾ ಆಸಾಮಿಗಳ ಮೇಲೆ ವ್ಯಾಜ್ಯ ದಾಖಲುಮಾಡಲ್ಪಡುವುದು ಎಂತ ತಿಳಿಸೋಣವಾಗುವುದು.

ಲೋನು ನಂ.	ತಾರೀಕು	ಹೆಸರು ಮತ್ತು ವಿಳಾಸ	ಅಸ್ಸು ರೂಪ್ಯಾ
1181/33	12—6—'33	ಹಮ್ಮದೆ ಬ್ಯಾರಿ, ಶೇಕ್ ಬ್ಯಾರಿಗಳ ಮಗ, ರೈತ, ಮುಗುಲ್ಯ, ಅರಳ ಗ್ರಾಮ, ಬಂಟವಾಳ ಪೋಸ್ಟು.	40/-
341/34	19—2—'34	ಕುಂಞಿಹಸನಬ್ಬ ಬ್ಯಾರಿ, ಶೇಕೆ ಬ್ಯಾರಿಗಳ ಮಗ, ಅಕ್ಕಿ ವ್ಯಾಪಾರಿ, ಅರಳ ಗ್ರಾಮ, ಬಂಟವಾಳ ಪೋಸ್ಟು.	175/-
169/35	25—1—'35	ಸಂಕಪ್ಪ ಶೆಟ್ಟಿ, ಶೇಷಪ್ಪ ಶೆಟ್ಟಿ ಅಳಿಯ, ಕಾಫೀ ಹೋಟೆಲು, ಮಹಾರ್ನವಮಿ ಕಟ್ಟೆ, ಪೋಸ್ಟು ಮಂಗಳೂರು.	30/-
610/35	27—3—'35	ಎ. ಮೋನಪ್ಪ, ತನಿಯಪ್ಪರ ಅಳಿಯ, ದರ್ಜಿ, ಕಂದಕ, ಮಂಗಳೂರು.	22/-
1134/35	6—6—'35	ಬಿ. ಕೊಗ್ಗಪ್ಪ, ಪರಮೇಶ್ವರರ ಮಗ, ಕಾರ್ಪೆಂಟರ್, ಜಪ್ಪು, ಪೋಸ್ಟು ಕಂಕನಾಡಿ.	25/-
1024/35	22—5—'35	ದೇವಪ್ಪ ರೈ, ಕೊರಗ ಶೆಟ್ಟಿಯರ ಅಳಿಯ, ಹರೇಕಳ ಕಸ್ಬಾ ಗ್ರಾಮ, ಉಳ್ಳಾಳ ಪೋಸ್ಟು.	300/-
1097/35	4—6—'35	,, ,, ,,	270/-
1427/35	13—7—'35	ಸಂತಾಪ್ ಮುಂಜುನಾಥ ಶೇಟ್, ನಾರಾಯಣ ಶೇಟ್‌ರ ಮಗ, ಸಂತಾಪ್, ಮಾರ್ಕೆಟ್ ರಸ್ತೆ, ಮಂಗಳೂರು.	200/-
402/35	26—2—'35	,, ,, ,,	210/-
823/35	,,	,, ,, ,,	135/-
2061/34	19—9—'34	ವಾಸುದೇವ ಐತಾಳ, ನಾರಾಯಣ ಐತಾಳರ ಮಗ, ಅರ್ಚಕ, ಮಂಗಳಾದೇವಿ ದೇವಸ್ಥಾನ, ಮಂಗಳೂರು.	180/-

Office of the Bank,
Mangalore, 13—7—1936.

P. Narasimha Nayak,
Offg. Agent.

DIAMONDS! DIAMONDS!
BEST BRILLIANCY!

K. R. K. SHET.

Near Mission High School, MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್ಸ್ಟ್ಯಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಕನ್ನಡಿಗರೇ!

ಬೊಂಬಯಿಯಲ್ಲಿ ಬಂದಿಳಿದಾಗ ಎಲ್ಲುಳಿದು ಕೊಳ್ಳಬೇಕೆಂದು ತಿಳಿದಿರುವಿರಾ?

ವೆಲ್ಕಂ ಹೊಟೆಲ್

(ಸ್ಥಾಪನೆ:—1912.)

(MADRAS BRAHMINS' LODGE.)

(ಜನರಲ್ ಪೋಸ್ಟಾಫೀಸಿನ ಬಳಿ)

ಫ್ರಿಯರ್ ರೋಡ್, ಫೋರ್ಟ್, ಬೊಂಬೈ.

ತಾರಿನ ಪತ್ರೆ:—"ಕಾಣೆವಾರ್" ಟೆಲೆಫೋನ್:—21386.

ಇದು ನಮ್ಮ 'ಸಿಲ್ವರ್ ಜುಬಿಲಿ' ವರ್ಷ! ಅಂದ ಬಳಿಕ ಹೆಚ್ಚಿನ ಪ್ರಶಂಸೆಗೆಡೆಯಿಲ್ಲ. ಸುಗ್ರಾಸ ಭೋಜನ, ಉತ್ಕೃಷ್ಟ ತಿಂಡಿ-ತೀರ್ಥಗಳು, ವಾಸಕ್ಕೆ ಸ್ವಚ್ಛವಾದ ಕೋಣೆಗಳು, ಬಲು ಶುಲಭ ದರ, ಹಣಕ್ಕೂ ಮಿಕ್ಕಿದ ಗುಣ—ಇವುಗಳು ಬೇಕೆಂದಿದ್ದರೆ ಈ ಸ್ಥಳವನ್ನೆಂದಿಗೂ ಮರೆಯಬೇಡಿರಿ.

ಪ್ರತ್ಯಕ್ಷಫಲ ಪಂಚ ಸಿದ್ಧಿ

ಇದು ರಾಯಚೂರು ಭೀಮಾವಧೂತರು

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಆಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಶಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಿ ಮಾಡಿಕೊಂಡು ಬರೆದಿರುವರು.

೧-ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ ಮಂತ್ರ ಪ್ರಯೋಗದಿಂದಲೂ ಎಲ್ಲಾ ದೇವಾನುದೇವತೆಗಳ ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨-ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು, ವ್ಯಾಪಾರ ವೃದ್ಧಿ, ದಾರಿದ್ರ್ಯ ನಿವಾರಣ, ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩-ನೇದು ಜ್ಯೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜ್ಯೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪-ನೇದು ಔಷಧ ಪ್ರಕರಣದಲ್ಲಿ ಯಾವಯಾವ ಗಿಡಮೂಲಿಕೆಗಳಿಂದ ಯಾವಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಆವರ ವಿವಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ, ಗ್ರಹಪೀಡಾ ನಿವಾರಣ, ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನೂ ಅನೇಕ ವಿಧವಾದ ಅಪೂರ್ವ, ಆಶ್ಚರ್ಯ, ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ, ದ್ರವ್ಯಗಳೂ ವೈದ್ಯರೂ, ಜ್ಯೋತಿಷ್ಯರೂ, ಮಾಂತ್ರಿಕರೂ, ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥಾ ಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರಾ ಕಡಿಮೆ ಮಾಡಿ ಇರುವೆವು. ಬೆಲೆ ಎರಡು ರೂಪಾಯಿ, ಟಪಾಲು ಹಾಸಲು ಸೇರಿ. ಸಮ್ಮ ವಿಳಾಸ:—

ಕೆ. ಸುಬ್ರಮಣ್ಯ ಪ್ರಭು,
ಶ್ರೀ ವೆಂಕಟೇಶ್ವರ ಬುಕ್ ಡಿಪೋ, ಬಳ್ಳಾರಿ.

ಸ್ವಂತವಾದ ತನ್ನದ್ದೊಂದು ಮಗುವಿಗಾಗಿ ಆಕೆ ಹಲುಬುತ್ತಾಳೆ.

ಆಕೆಗಿದು ಎಷ್ಟು ಸಂತೋಷಕರವಾದ ನೋಟ! ಆಡುವ ಮಕ್ಕಳ ಈ ಚಿಕ್ಕ ಗುಂಪು!

ಇವುಗಳ ನಡುವೆ ತನ್ನ ಸ್ವಂತ ಮಗುವನ್ನು ಆಕೆ ಕಾಣುತ್ತಿದ್ದಾಳೆಯೇ? ಇಲ್ಲ, ದುರ ದೃಷ್ಟವಶದಿಂದ ಇಲ್ಲ, ಏಕೆಂದರೆ ಆಕೆಗೊಂದು ಮಗುವಿನ ಸೌಭಾಗ್ಯವಿನ್ನೂ ಇಲ್ಲ. ಆಕೆಯ ಬಂಜೆತನದ ಸ್ಥಿತಿಯು ಬಹುಕಾಲದಿಂದ ಅಸಡ್ಡೆ ಮಾಡಿರುವ ಯಾವುದೋ ಗರ್ಭಾಶಯದ ದೋಷದಿಂದಲೇ ಉಂಟಾಗಿರಬೇಕು. ಹೇಗೂ, ಆಕೆ ನಿಜವಾಗಿಯೂ **'ಲೋಧ್ರ'**ದಲ್ಲಿ ವಿಶ್ವಾಸವಿರಿಸಬಲ್ಲವಳಾದುದರಿಂದ, ನಿರಾಶಳಾಗಬೇಕಾದುದಿಲ್ಲ. **'ಲೋಧ್ರ'**ವು ಆಕೆಯ ಆರೋಗ್ಯವನ್ನು ಕಾಪಾಡಿ, ಸಂತಾನಸೌಭಾಗ್ಯವನ್ನಾಕೆಗೆ ನೀಡಬಲ್ಲುದು.

4'7./. ಎಲ್ಲ ಕೆಮಿಸ್ಟರಲ್ಲಿಯೂ ದೊರಕುತ್ತದೆ.

ಕೇರಳ ಗಂಧದ ಸಾಬೂನು

ಉತ್ಕೃಷ್ಟವಾದ ಸಾಧನಗಳಿಂದ ಯೋಗ್ಯರಾದ ಹಿಂದೀ ರಸಾಯನ ಶಾಸ್ತ್ರ ಪಂಡಿತರಿಂದ ಸಿದ್ಧವಾಗುತ್ತವೆ.

ಜೀಫ್ ರೆಪ್ರೆಸೆಂಟೇಟಿವ್:—ಆರ್. ಸಿ. ದಲಾಲ್, ಕಲ್ಲಿಕೋಟೆ.

ದಿ 'ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಮುಖ್ಯ ಕಚೇರಿ:—ಮದ್ರಾಸು. ಪೋಸ್ಟು ಬಾಕ್ಸ್ ನಂಬ್ರ 182.

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.

'ರಿಜಿಸ್ಟ್ರಾರ್ ಓಫ್ ಕೊ-ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತ್ತುಗಳು ಅತ್ಯಾಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ. ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಏಜಂಟರು ಬೇಕು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಜಂಟರಾಗಲಿಚ್ಛಿಸುವವರು ಈ ವಿಳಾಸಕ್ಕೆ ಬರೆಯಬೇಕು:—ಕೆ. ಶಂಕನಾರಾಯಣ ಕಿಣಿ, ಡಿಸ್ಟ್ರಿಕ್ ಆರ್ಗನೈಜರ್, ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್ಶುರೆನ್ಸ ಸೊಸೈಟಿ, ಲಿಮಿಟೆಡ್, ಮೂರುತಿ ವೀಥಿಕಾ, ಉಡುಪಿ, (ದ. ಕ).

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಕನ್ವೀನರ್, ಕೂರ್ಗ್ ಲೋಕಲ್ ಬೋರ್ಡು ಓಫ್ ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ, C/o ಕೂರ್ಗ್ ಕೋ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್, ಮಡಿಕೇರಿ, ಕೊಡಗು.

(3) ಸ್ಯೆ. ಶ್ರೀನಿವಾಸಯ್ಯ, ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ-ಒಪರೇಟಿವ್ ಯೂನಿಯನ್ ಓಫ್ ಮೈಸೂರು ಸಿಟಿ, ಮೈಸೂರು.

ಕಳೆದ ವಾರ

ದುಡ್ಡಿದ್ದವರು ಹಣವನ್ನು ವಿನಿಯೋಗಿಸುವಲ್ಲಿ,

ಹಲವು ರೀತಿಗಳುಂಟು. ಅದರಲ್ಲಿ ತಮ್ಮ ಮಕ್ಕಳನ್ನು ವಿಲಾಯಿತಿಗೆ ಉಚ್ಚ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿ ದುಡ್ಡು ಖರ್ಚು ಮಾಡುವುದೂ ಒಂದು ರೀತಿಯ ವಿನಿಯೋಗವೇ. ಅನೇಕ ವೇಳೆ ಬಡ್ಡಿಯೂ ದೊರಕದ ಈ ವಿನಿಯೋಗವು ವರ್ಷ ಹೋದ ಹಾಗೆ ಹೆಚ್ಚುತ್ತಿದೆ. 'ಇದು ಹೀಗಾಗಬಾರದು; ಇಷ್ಟು ಮಂದಿ ಹಿಂದೂ ವಿದ್ಯಾರ್ಥಿಗಳು ಪರದೇಶಗಳಿಗೆ ಕಲಿಯಲಿಕ್ಕೆ ಬರಬಾರದು' ಎಂದು ಲಂಡನಿನ ಹ್ಯಾ ಕವಿಖಶನರರ ವಿದ್ಯಾಂಗದ ಶಾಖೆಯು ಎಚ್ಚರಿಸಿದ್ದರೂ, ೧೯೩೫ನೇ ಇಸ್ವಿ ಸೆಪ್ಟೆಂಬರ ತಾ. ೩೦ ವರೆಗೆ ಸ್ಟಿಂದೇ ವರ್ಷದಲ್ಲಿ ಅತ್ತ ತೆರಳಿದ ನಮ್ಮ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೨ ಸಾವಿರ. ಇವರಲ್ಲಿ ವೈದ್ಯಶಾಸ್ತ್ರದವರು ೩೭೨ ಮಂದಿ; ಕಲಾ ೩೨೪ ಮಂದಿ; ಇಂಜಿನಿಯರಿಂಗ್, ಟೆಕ್ನಾಲಜಿ ೨೫೭ ಮಂದಿ, ಅರ್ಥಶಾಸ್ತ್ರ, ಶುದ್ಧ ವಿಜ್ಞಾನ ೧೧೦ ಮಂದಿ, ಕೃಷಿ ೪೯ ಮಂದಿ. ಇವರಿಷ್ಟು ಮಂದಿಗೂ ಅಲ್ಲಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶಕ್ಕೆ ಈಗ ಹೆಚ್ಚು ಪ್ರಯಾಸವಿಲ್ಲವೆಂಬುದು ನಿಜ. ಆದರೆ ಆ ಪ್ರವೇಶಕ್ಕೂ ಒಂದು ಮಿತಿಯನ್ನು ಕಲ್ಪಿಸಲಾಗಿದೆ. ಹಳೇ ಗ್ರಾಜುವೇಟರ ಸಂಬಂಧಿಕರಿಗೆ ಸ್ಥಾನಗಳನ್ನು ಕಾದಿರಿಸಬೇಕಾಗಿದೆ. ಅಲ್ಲದೆ, ಇಂಡಿಯನ್ ಸಿವಿಲ್ ಸರ್ವೀಸಿನ ಸ್ಪರ್ಧಾ ಪರೀಕ್ಷೆಗಳಿಗೆ ಲಂಡನಿನಲ್ಲಿ ವಿದ್ಯಾರ್ಥಿಗಳು ಸಿದ್ಧರಾಗುವ ಪದ್ಧತಿಯನ್ನೂ, ಲಂಡನ್ ವಿಶ್ವವಿದ್ಯಾಲಯದ ಅಧಿಕಾರಿಗಳು ನಿರುತ್ಸಾಹಗೊಳಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ, ಇಷ್ಟು ಮಂದಿ ವಿದ್ಯಾರ್ಥಿಗಳು, ಪರದೇಶದ ಶಿಕ್ಷಣ ಯಾತ್ರೆಗೆ ಹೊರಡುವುದು ಅಪಾಯಕರವಾಗಿದ್ದರೂ, ವಿಲಾಯಿತಿ ಯುನಿವರ್ಸಿಟಿಗಳ ಡಿಗ್ರಿಗಳಿಂದ ಸರಕಾರಿ ಉದ್ಯೋಗವು ದೊರೆಯುವುದು ಸುಲಭವೆಂಬ ಹುಚ್ಚು ನಮ್ಮ ವಿದ್ಯಾರ್ಥಿಗಳನ್ನು ಬಲವಾಗಿ ಹಿಡಿದುಕೊಂಡಿದೆ. ಆದರೆ ವಿದೇಶೀ ಡಿಗ್ರಿಗಳ ಇಷ್ಟು ಮಂದಿಗೆ, ಸರಕಾರವು ಎಲ್ಲಿಂದ ತಕ್ಕ ಉದ್ಯೋಗಗಳನ್ನು ಒದಗಿಸಿಕೊಡಬಹುದು? ವಿದ್ಯಾಲಾಭಕ್ಕೆ ಹೋಗಿ ಇದ್ದ ನೇವಿದ್ಯಕ್ಕೂ ಹಾನಿ ಬರುವ ಈ ಭ್ರಾಂತಿಗೆ ಏನೆನ್ನಬೇಕು?

* * * * *

ಪಾಲಸ್ತೈನಿನ ಪರಿಸ್ಥಿತಿಯು ಇನ್ನೂ

ಉತ್ತಮಗೊಂಡಿಲ್ಲ. ಬದಲಾಗಿ ಸಕಾಲದಲ್ಲಿ ತಕ್ಕ ಉಪಾಯಗಳನ್ನು ಕೈಕೊಳ್ಳದಿದ್ದರೆ, ಈ ಚಳವಳಿವು ಅರಬ್ ದೇಶಗಳೆಲ್ಲೆಲ್ಲ ಹಬ್ಬಿ, ಪರಿಸ್ಥಿತಿಯು ಇನ್ನೂ ಕೆಡಬಹುದೋ ಎಂಬ ಬೆದರಿಕೆ ಇದೆ. ಬ್ರಿಟನಿನ ಸಾರ್ವಭೌಮ ಸರಕಾರವು ಈ ಬಗೆಗೆ ಒಂದು ವಿಚಾರಣಾ ಸಮಿತಿಯನ್ನು ನೇಮಿಸಲು ನಿರ್ಧರಿಸಿರುವುದೇನೋ ನಿಜ; ಆದರೆ ಈಗಿನ ಗಲಭೆಗಳಿಂದ ಆ ವಿಚಾರಣೆ ನಡೆಸುವುದು ವಿಳಂಬವಾಗಿರುವುದು ಶೋಚನೀಯವಾದ ಸಂಗತಿ. ಹಾಗಾದರೆ, ಅರಬರು, ತಮಗೆ ನ್ಯಾಯ ಬೇಕೆನ್ನುವವರು, ಈ ವಿಚಾರಣೆಯ ಸಮಿತಿಯ ನಿರ್ಮಾಣದಿಂದಲೂ ತೃಪ್ತರಾಗಿಲ್ಲವೇಕೆ? ಎಂಬುದು ಅಲ್ಲಿನ ಅರಬರ ಮುಖ್ಯಾಧಿಕಾರಿಗಳ ಮನವಿಯಲ್ಲಿ ವಿವರಿಸಲಾಗಿದೆ. ಮುಖ್ಯ, ಎಲ್ಲ ವಿಷಯಗಳಲ್ಲಿಯೂ ಮೇಲಾಟ ನಡಿಸಿ, ದೇಶದ ಯಾವತ್ತು ವ್ಯಾಪಾರಸಾಪಾರಗಳನ್ನು ಆಕ್ರಮಿಸಿ, ಅರಬರ ಮನಸ್ತಾಪ ಕಟ್ಟಿಕೊಂಡ ಯೆಹೋದ್ಯರ ತಡೆ ಇಲ್ಲದ ಪ್ರವೃತ್ತಿಗೆ, ತಾತ್ಕಾಲಿಕ ನಿರ್ಬಂಧವನ್ನಾದರೂ ಕಲ್ಪಿಸಿದ ರೊಳ್ಳಿದೆಂದು ಆ ಮನವಿಯು ಅರಿಕೆ ಮಾಡಿಕೊಂಡಿದೆ. ಆ ಮನವಿಗೆ ಮನ್ನಣೆ ದೊರಕಲಾರದೇ? ಅಥವಾ 'ಪ್ರಿಸ್ವೇಜೇ' ಮುಖ್ಯವೆಂದು ಅಧಿಕಾರಿಗಳಿಂದ ಆ ಹಟವೇ ಕೊನೆತನಕವೂ ಸಾಧಿಸಲ್ಪಟ್ಟೀತೇ?

* * * * *

ಪ್ರಕೃತಿಯ ಪ್ರಕೋಪದ ಪರಿಣಾಮವನ್ನು

ನಾವು, ನೆರೆಯ ರೂಪದಲ್ಲಿ, ಕಳೆದ ವರ್ಷ ಮಾತ್ರವೇ ನೋಡಿದುದಲ್ಲ. ಈ ವರ್ಷ, ಬೆಂಕಿ, ಸಿಡಿಲುಗಳ ಆಘಾತದಿಂದಲೂ ಅಲ್ಲದೆ ಮಹಾಪ್ರವಾಹದಿಂದಲೂ ನಮ್ಮ ಭಾರತದ ಪ್ರಜೆಗಳು ತುಂಬ ಕಷ್ಟಪಡುತ್ತಿದ್ದಾರೆ. ಲಕ್ನೋವಿನಿಂದ, ಇಂದು, ಅತಿವೃಷ್ಟಿಯ ಭೀಕರ ವಾರ್ತೆಯು ಬಂದಿದೆ. 'ಮೂರು ಮಂದಿ ಸತ್ತರು; ಒಬ್ಬಳು ಹೆಂಗಸು; ೪ ಮಂದಿಗೆ ಗಾಯಗಳಾಗಿವೆ' 'ಹಲವು ಮನೆಗಳು ಬಿದ್ದುವು; ನೂರಾರು ಮಂದಿ ಮೊಣಕಾಲುದ್ದದ ಪ್ರವಾಹದ ನೀರಿನಲ್ಲಿ ನಿಂತು, ಎಷ್ಟೋ ಹೊತ್ತು, ಕಾಲಕ್ಷೇಪ ಮಾಡಬೇಕಾಯಿತು' 'ಎರಡು ದಿನಗಳಿಂದ ಸೂರ್ಯರಶ್ಮಿಯೇ ಇಲ್ಲ' 'ಹುಸೇನ್‌ಗಂಜಿನಲ್ಲಿ ಒಂದು ಮನೆ ಬಿದ್ದು ಒಬ್ಬ ಹುಡುಗ ಸತ್ತ; ಮತ್ತೊಬ್ಬನಿಗೆ ಪೂರಾ ಗಾಯ' 'ಬಾಶಿರತ್‌ಗಂಜಿನಲ್ಲಿ ಅನೇಕ ಮನೆಗಳು ಬಿದ್ದುವು; ಒಬ್ಬ ಹೆಂಗಸೂ, ಗಂಡಸೂ ಸತ್ತರು; ಇತರ ಹಲವರಿಗೆ 'ಜಖಂ' ಆಗಿ ಆಸ್ಪತ್ರೆಯಲ್ಲಿ' 'ಅನೇಕ ಮನೆಗಳು ಬೀಳಲಿಕ್ಕೆ ತಯಾರಾಗಿವೆ' 'ಗೋಮತಿ ನದಿಯಲ್ಲಿ ಅನೇಕ ಗುಡಿಸಲುಗಳ ಮಾಡು ತೇಲಿ ಬಂದಿವೆ. ಹಲವು ಗ್ರಾಮಗಳು ಬಳಿದುಕೊಂಡು ಹೋಗಿರಬೇಕು' 'ಲಕ್ನೋ-ಕಾನ್ಪುರ ರಸ್ತೆಯಲ್ಲಿ ಒಂದು ಕಡೆ ಜರಿದು, ವಾಹನಗಳ ಓಡಾಟಕ್ಕೆ ತೊಂದರೆಯಾಗಿದೆ' ಎಂದು ಲಕ್ನೋವಿನ ವಾರ್ತೆಯಾದರೆ, ಇದೇ ಅತಿವೃಷ್ಟಿಯಿಂದ, ಲಾಹೋರಿನ ಒಂದು ಮಸೀದಿಗೆ ಸಂಬಂಧಿಸಿದ ಒಂದು ಎರಡು ಅಂತಸ್ತಿನ ಮಂದಿರವು ಜರಿದು ಬಿದ್ದು, ಅದರಲ್ಲಿ ನಡೆಯುತ್ತಿದ್ದ ಒಂದು ಶಾಲೆಯ ಮಕ್ಕಳಲ್ಲಿ ೧೪ ಮಂದಿಯೂ, ಉಪಾಧ್ಯಾಯರಲ್ಲಿ ಒಬ್ಬರೂ ಮೃತರಾದರೆಂದೂ, ೧೮ ಮಂದಿ ಮಕ್ಕಳನ್ನು ಈಚೆಗೆಳೆದು ಬದುಕಿಸಲಾಯಿತೆಂದೂ ಲಾಹೋರಿನ ಸುದ್ದಿ. ಇದೇನು, ಭೂದೇವಿಯು ತನ್ನ ಭಾರವನ್ನು ಕಡಿಮೆ ಮಾಡಿಕೊಳ್ಳುವ ಲಕ್ಷಣವೆಂದು ಹೇಳಿಕೊಳ್ಳಬಹುದೇ?

* * * * *

ಜನಾಂಗಸಂಘದಲ್ಲಿ ಚಿಕ್ಕ ರಾಷ್ಟ್ರಗಳ ನಂಬಿಕೆ

ಕಡಿಮೆಯಾಗಿದೆ. ಡೆನ್ಮಾರ್ಕ್, ಸ್ವೀಡನ್, ಫಿನ್‌ಲ್ಯಾಂಡ್, ನಾರ್ವೇ, ಹಾಲೆಂಡ್ ಮೊದಲಾದ ಹಲವು ಚಿಕ್ಕ ರಾಷ್ಟ್ರಗಳು, 'ಸ್ಯಾಂಕ್ಶನು'ಗಳನ್ನು ಇನ್ನಷ್ಟು ಬಿಗಿ ಮಾಡಬೇಕೆಂದಿದ್ದುವು. ಆದರೆ ಫಲವಾಗಲಿಲ್ಲ. ಅರ್ಜಂಟೈನ, ಈ ದೊಡ್ಡವರನ್ನು ಕಟ್ಟಿಕೊಂಡು ಫಲವಿಲ್ಲವೆಂದು ಸೂಚಿಸಿ, ಈ ಸಂಘವು, ಚಿಕ್ಕ ರಾಷ್ಟ್ರಗಳನ್ನು ಕಟ್ಟಿಕೊಳ್ಳುವ 'ಉದ್ದೇಶವು, ಸಂಘಕ್ಕೆ ಗೌರವ ದೊರಕಬೇಕೆಂಬುದೇ ಅಲ್ಲದೆ ಬೇರೆ ಏನೂ ಅಲ್ಲವೆಂದು ಹಂಗಿಸಿ ಭಂಗಿಸಿ ಮಾತಾಡಿತು. ಅದೂ ಫಲವಾಗಲಿಲ್ಲ. ಇನ್ನು, ಈ ಬಿಳಿ ರಾಷ್ಟ್ರಗಳು, ತಮ್ಮ ಇಚ್ಛೆ ಇದ್ದಂತೆ ಮಾಡಲು, ಯಾವ ದೊಣ್ಣೇನಾಯಕನ ಅಪ್ಪಣೆಯೂ ಬೇಕಾಗಿಲ್ಲ. ಹಾಗೇ ಕರೇ ರಾಷ್ಟ್ರಗಳ ಮಟ್ಟಿಗೆ, ನೇಗಸರಿಗೆ ಸಿಕ್ಕಿದ ಬಹುಮಾನದ ಗಂಟು ಕಣ್ಣುಮುಂದಿರುವಾಗ, ಆ ರಾಷ್ಟ್ರಗಳು, ಈ ಸಂಘವನ್ನು, ತಮ್ಮ ಪಾಲಿಗೆ, ಒಂದು ಮೃತದೇಹವೆಂದೇ ತಿಳಿಯುವಲ್ಲಿ ಆಶ್ಚರ್ಯವೇನಾದರೂ ಇದ್ದೀತೇ?

* * * * *

ಸ್ವತಂತ್ರೋದ್ಯೋಗವನ್ನೇನೂ ಮಾಡಲಾರದ ನಮ್ಮ ಅಲಂಕಾರದ ವಿದ್ಯಾರ್ಥಿಗಳು

ಸರಕಾರದ ಗುಮಾಸ್ತಗಿರಿಗಳೇ, ಹುದ್ದೆಗಳೇ ತಮ್ಮ ಜೀವನಾಧಾರವೆಂದು ನಂಬಿ, ಒಂದಕ್ಕೆ ಹತ್ತು ಖರ್ಚು ಮಾಡಿ, ಯುನಿವರ್ಸಿಟಿ ಶಿಕ್ಷಣ ಪಡೆದು, ಕೂನೆಗೆ ಕಾಸಿಗೆ ಗತಿ ಇಲ್ಲದೆ, ಸರಕಾರಿ ಪೇದೆಯ ಕೆಲಸ ಸಿಕ್ಕಿದರೂ ಸಾಕೆಂದು ಹಂಬಲಿಸುತ್ತ, ಖಾಲಿಬಿದ್ದ ಒಂದು ಸಾಮಾನ್ಯ ಕೆಲಸಕ್ಕೆ ಇಂತಹವರಿಂದ ನೂರಾರು ಅರ್ಜಿಗಳು ಅಲ್ಲಲ್ಲಿ ಬಂದು ಬೀಳುವುದು ವಾಡಿಕೆಯಾಗಿರುವಾಗ, ೮೦ರಿಂದ ೨೦೦ರ ವರೆಗೇರುವ ಆ ಎಸೆಂಬ್ಲಿಯ ಒಂದು ಖಾಲಿ ಸ್ಥಾನಕ್ಕಾಗಲೇ ೫,೫೦೦ ಅರ್ಜಿಗಳು ಬಂದಿರುವುದೇನು ಆಶ್ಚರ್ಯವೆ? ಇದರಿಂದ ಎಸೆಂಬ್ಲಿಯವರಿಗೆ, ಈ ಅರ್ಜಿಗಳ ಸುಲಾವಣೆ, ವಿಲೆಗಳಿಗೆ ಬಹಳ ಶ್ರಮಸಾಧ್ಯವಾಗಬಹುದಾದರೂ, ಸರಕಾರದ ಅಥವಾ ಅರ್ಧಸರಕಾರದ ಉದ್ಯೋಗಗಳಿಗೆ ವರ್ಷಕ್ಕೆ ಇಂತಹ ಎಷ್ಟು ಅರ್ಜಿಗಳು ಬರುತ್ತಿವೆ ಎಂದು ಗುಣಿಸಿ ಎಣಿಸಲೂ, ಅನಂತರ ಬೇಕಾದರೆ ಕಡಿಮೆ ಸಂಬಳದ ಸ್ಕೇಲನ್ನು ಜಾರಿಗೆ ತಂದುಕೊಳ್ಳಲೂ ತುಂಬ ಅನುಕೂಲಿಸಬಹುದು. ಮೊದಲು, ನಮ್ಮಲ್ಲಿ, ವಿದ್ಯಾವಂತರ ಸಂಖ್ಯೆ ಕಡಿಮೆ ಇದ್ದು, ಯುನಿವರ್ಸಿಟಿ 'ಡಿಗ್ರಿ'ಗಳಷರ ಅಭಾವವಿದ್ದಾಗ, ಯೂರೋಪಿಯರೊಪ್ಪದ ಅಂತಹ ಉದ್ಯೋಗಗಳಿಗೆ 'ಆಸಾಮಿ'ಗಳನ್ನು ಒದಗಿಸಿಕೊಳ್ಳಲು, ನಮ್ಮ ಯುನಿವರ್ಸಿಟಿ ಶಿಕ್ಷಣ ಪದ್ಧತಿಯನ್ನು ಹಾಗೆ ಸ್ಥಾಪಿಸಿದುದೇನೋ ಸರಿಯೇ. ಆದರೆ, ಈಗ 'ಡಿಗ್ರಿ'ಗಳು ಹೆಚ್ಚಾಗಿವೆ; ಸರಕಾರಿ ಉದ್ಯೋಗಗಳು ಕಡಿಮೆಯಾಗಿವೆ ಎನ್ನುವಾಗ, ಅದಕ್ಕೆ ತಕ್ಕಂತೆ 'ಡಿಗ್ರಿ' ಶಿಕ್ಷಣದ ನೀತಿಯೂ ಬದಲಾದರಾಗದೇ? ಬಿಗಿಯಾದರಾಗದೇ? 'ಡಿಗ್ರಿ' ಪರೀಕ್ಷೆಗಳೆಂಬುವೂ, ಸರಕಾರೀ ನವುಕರಿಯ ಪ್ರಾಪ್ತಿ ಎಂಬುದೂ ಒಂದು 'ಸೋಡ್ತಿ'ಯ ಬಹುಮಾನಕ್ಕಿಂತಲೂ ಕಠಿನವಾಗಿರುವಾಗ, ಈ 'ಡಿಗ್ರಿ' ಪರೀಕ್ಷೆಗಳಿಗೆ ಪ್ರವೇಶವನ್ನು ಇಷ್ಟು ಸುಲಭವಾಗಿ ಮಾಡಿಟ್ಟಿರುವುದಾದರೂ ಏಕೆ? ಕಸಬು ಕೈಗಾರಿಕೆಗಳ ಶಾಲೆಗಳನ್ನು ಏರ್ಪಡಿಸಿ, ಕೈಗಾರಿಕೆಗಳಿಗೊಂದಿಷ್ಟು ಸಹಾಯವನ್ನು ಹೆಚ್ಚಿಸಿದಲ್ಲಿ, ಇಲ್ಲಿನ ಕೈಗಾರಿಕೆಯ ಏಳಿಗೆಯೂ, ನಿರುದ್ಯೋಗಿಗಳಿಗೆ ಉದ್ಯೋಗವೂ ಏಕಕಾಲದಲ್ಲಿ ದೊರಕಿ, ಸರಕಾರಿ ಉದ್ಯೋಗಗಳಿರುವ ಈ ಮೇಲಾಟವು ತಪ್ಪದೇ?

* * * * *

ಜನಾಂಗಸಭೆಯಲ್ಲಿ ಅಬಿಸೀನಿಯದ ಭವಿಷ್ಯವೇನೋ

ನಿರ್ಧಾರವಾಯಿತು. ಆದರೆ ಆ ಚಕ್ರವರ್ತಿಗಳು, ತಮ್ಮ ಅರಿಕೆಯನ್ನು ಅಲ್ಲಿ ಮಾಡಿಕೊಳ್ಳುತ್ತಿದ್ದ ಹಾಗೆ, ಅಲ್ಲಿ ನೆರೆದಿದ್ದ ಆ ೫೨ ರಾಷ್ಟ್ರಗಳ ಮನೋಭಾವವು ಎಂತದಾಗಿರಬಹುದೆಂದು ಯಾರು ಬಲ್ಲರು? ಅವು ನಾಚಿಕೆಯಿಂದ ತಲೆ ಬಾಗಿದವೇ? ಅದೇನೇ ಆದರೂ, ಬಿಳಿಯ ಜನಾಂಗಕ್ಕೆ ಸೇರದ ರಾಷ್ಟ್ರಗಳು, ಚಕ್ರವರ್ತಿಗಳ ಆ ಉದ್ವೇಗಪೂರ್ವಕವಾದ, ಆ ನ್ಯಾಯಸಮ್ಮತವಾದ ನುಡಿಗಳನ್ನು, ಪುನಃ ಪುನಃ ಓದಿ ನೆನಪಿನಲ್ಲಿಟ್ಟುಕೊಳ್ಳುವುದು ನಿಜ. ಅವರ ನುಡಿಗಳು, ಪಾಶ್ಚಾತ್ಯ ಜನಾಂಗಗಳ ನಾಗರಿಕತೆಯ ಅವಸಾನದ ಆರಂಭವೇ ಇದೆಂದು ಸ್ಪಷ್ಟೋಕ್ತಿಗಳಿಂದ ಸೂಚಿಸುತ್ತಿವೆ. ಅವರ ನುಡಿಗಳು ಕೇವಲ ಮನುಷ್ಯಧ್ವನಿಯಲ್ಲ — ಮುನಿಗಳು ಹೆಸರಿಟ್ಟ ಆ 'ಸತ್ಯ' ವ್ರತದ ಮಹಾ ಮಂತ್ರಗಳೆಂದೇ ಕರೇ ರಾಷ್ಟ್ರಗಳು ತಿಳಿಯುವಂತಾಗಿವೆ. ಹೈಲ್ ಸೆಲಾಸಿಯವರ ಸ್ಫೂರ್ತಿದಾಯಕವಾದ ಈ ಮಾತುಗಳು, ಬಣ್ಣಡ ಜನಾಂಗಗಳಲ್ಲಿ ರೋಮಾಂಚವನ್ನು ಉಂಟುಮಾಡಿ, ಒಂದು ಹೊಸ ಸಂದೇಶವನ್ನು ಸಾರಿ, ಬಿಳೇ ಜನಾಂಗಗಳ ನ್ಯಾಯಬುದ್ಧಿ, ಪ್ರಮಾಣಿಕತೆ, ಕನಿಕರವೇ ಮೊದಲಾದ ಸದ್ಗುಣಗಳಲ್ಲಿ ಕರೇ ರಾಷ್ಟ್ರಗಳು ವಿಶ್ವಾಸವನ್ನಿಡಬಾರದೆಂದು ಬೋಧಿಸುತ್ತಿವೆ! ಪಾಶ್ಚಾತ್ಯ ಪ್ರಪಂಚದ ಇಂತಹ ಅಕಾರ್ಯಗಳನ್ನು ನೋಡಿ, ಭಗವಂತನಾದರೂ ಸುಪ್ರೀತನಾದಾನೇ? ಅಥವಾ ತಪ್ಪಿಗೆ ಶಿಕ್ಷೆ ಇದೆ ಎಂಬುದನ್ನು, ಬೇರೆ ಯಾವ ರೂಪದಿಂದಲಾದರೂ, ಸಿದ್ಧಾಂತಗೊಳಿಸುವನೇ?

'ರಾಮುದಾಸ' ಪದ್ಮಕಾಯ ಗುಟಿಕಾ

(STERN-VIGOUR)

ಈ ಔಷಧದಲ್ಲಿ ಬಂಗಾರ, ಕಸ್ತೂರಿ, ಕೇಸರ ಮುಂತಾದ ಅಮೂಲ್ಯ ಜೀನಸುಗಳಿದ್ದು ಇದು ಮುಖ್ಯವಾಗಿ ಧಾತುವನ್ನು ಗಟ್ಟಿಮಾಡಿ ಸ್ವಪ್ನೇಂದ್ರಿಯ ಮುಂತಾದ ಧಾತು ವಿಕಾರಗಳನ್ನು ಗುಣವಡಿಸಿ, ಧಾತುಸ್ತಂಬನ ಶಕ್ತಿಯನ್ನು ಹೆಚ್ಚಿಸಿ ರತಿಕ್ರೀಡೆಯಲ್ಲಿ ಹೆಚ್ಚಿನ ಆಹ್ಲಾದವನ್ನು ಕೊಡುವುದು. ಅಲ್ಲದೆ ಅತ್ಯಾಚಾರದಿಂದ ಉಂಟಾದ ನಪುಂಸಕತ್ವವನ್ನು ಸಹಾ ಹೋಗಲಾಡಿಸುವದು.

ಕ್ರಯ 12 ಗುಳಿಗೆಗಳ ಬಾಟ್ಲಿ 1ಕ್ಕೆ 1—4—0.
50ಕ್ಕೆ 4—8—0.

ಇದಲ್ಲದೆ ನಮ್ಮ ಇತರ ಅನುಭವಸಿದ್ಧ ಔಷಧಗಳ ಮಾಹಿತಿ-ಪತ್ರಕಗಳನ್ನು ನಮ್ಮ ಏಜಂಟರಿಂದ ಪಡಕೊಂಡು ಅನುಭವಹೊಂದಿರಿ.

ದ. ಕ. ಜಿಲ್ಲೆಯ ಎಲ್ಲಾ ಪ್ರಮುಖ ಊರುಗಳಲ್ಲಿ ನಮ್ಮ ಏಜಂಟರಿರುವರು.

ತಯಾರಿಸುವವರು:—
ರಾಮುದಾಸ ಕೆಮಿಕಲ್ ವರ್ಕ್ಸ್, ಹುಬ್ಬಳ್ಳಿ.
ಜಿಲ್ಲಾ ಏಜಂಟರು:—
ಮಲ್ಲಾಪುರ ಕಂಪೆನಿ, ಲಿಮಿಟೆಡ್, ಹೊಸಗದ್ದೆಕೇರಿ, ಮಂಗಳೂರು.

The MAN behind the RUPEE

is a power to be reckoned with in every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK
LIMITED.

ಶಿಕ್ಷಣ ವಿಚಾರ

ಎಲಿಮೆಂಟರಿ ಶಾಲೆಗಳಲ್ಲಿ ಪಠ್ಯ ಪುಸ್ತಕಗಳು

ಸರಕಾರದ ಹುಕುಂ.

೧. ಪ್ರಾಥಮಿಕ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಕೊಶ್ಟುಮಾಡುವಾಗ, ಪಾಠಪಟ್ಟಿಯಂತೆ ಕಲಿಸಬೇಕಾಗಿರುವ ಎಲ್ಲ ವಿಷಯಗಳಿಗೂ ಪಠ್ಯಪುಸ್ತಕಗಳನ್ನು, ಅತಿ ಕೆಳ ತರಗತಿಗಳಲ್ಲೂ ನೇಮಿಸುತ್ತಾರೆಂದು ಡೈರೆಕ್ಟರರವರು ಸರಕಾರಕ್ಕೆ ತಿಳಿಸಿರುತ್ತಾರೆ. ಪಠ್ಯಪುಸ್ತಕಗಳ ಸಂಖ್ಯೆಯು ಅತಿರೇಕವಾಗುತ್ತ ಬರುವಂತೆ, ಶಿಕ್ಷಣವು ನಿಕೃಷ್ಟವಾಗುತ್ತ ಬರುತ್ತಿದೆ ಹೊರತು ಇತರ ದೋಷಗಳನ್ನೂ ಉಂಟುಮಾಡುತ್ತಿದೆ ಎಂದು ಡೈರೆಕ್ಟರರು ಅಭಿಪ್ರಾಯಪಡುತ್ತಾರೆ. ಭಾಷಾಪಾಠಕ್ಕಲ್ಲದೆ ಇತರ ಯಾವ ಪಠ್ಯವಿಷಯಕ್ಕಾದರೂ ಕೆಳಗಣ ಮೂರು ತರಗತಿಗಳಲ್ಲಿ ಪುಸ್ತಕಗಳನ್ನಿಡುವುದನ್ನು ಅಣಗಿಸಬೇಕೆಂದೂ ಡೈರೆಕ್ಟರರವರ ಅಭಿಪ್ರಾಯವಿದೆ. ಪಠ್ಯಪುಸ್ತಕವನ್ನಿಡುವಾಗ, ಅದಕ್ಕೆ ಮೊದಲೇ ವಿದ್ಯಾರ್ಥಿಗೆ ಓದುವ ಜ್ಞಾನ (ಸಾಧನಾಭ್ಯಾಸ) ಇದೆ ಎಂದೇ ತಿಳಿಯಬೇಕಷ್ಟೆ. ಒಂದನೆ ಎರಡನೆ ದರ್ಜೆಗಳ ಬಾಲಕರಿಗೆ ಈ ಜ್ಞಾನವು ಸಂಪೂರ್ಣವಾಗಿ ಶೂನ್ಯವಾಗಿದೆ. ಭಾಷಾಪಾಠಕ್ಕಲ್ಲದೆ ಇತರ ಯಾವ ಪಾಠಕ್ಕೂ ಒಂದನೆ ಎರಡನೆ ದರ್ಜೆಗಳಲ್ಲಿ ಪಠ್ಯಪುಸ್ತಕಗಳನ್ನಿಡಬಾರದೆಂದೂ, ಮೂರನೆ ದರ್ಜೆಯಲ್ಲಿ ಒಂದು ಗಣಿತ ಪುಸ್ತಕವನ್ನು ಇವುಗಳಿಗಿಂತ ಹೆಚ್ಚಿಗೆ ಇಡಬಹುದೆಂದೂ ಡೈರೆಕ್ಟರರು ಅಭಿಪ್ರಾಯ ತಿಳಿಸಿದ್ದಾರೆ.

೨. ಡೈರೆಕ್ಟರರು ಮೇಲೆ ತಿಳಿಸಿದ ಅಭಿಪ್ರಾಯವನ್ನು ಸರಕಾರವು ಒಪ್ಪಿಕೊಂಡು, ಎಲ್ಲ ಲೋಕಲ್ ಬೋರ್ಡುಗಳಿಗೂ ಮ್ಯುನಿಸಿಪಾಲಿಟಿಗಳಿಗೂ, ಎಲಿಮೆಂಟರಿ ಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನು ವಿಧಾಯಿಸುವಲ್ಲಿ,—ಒಂದನೆ ಎರಡನೆ ದರ್ಜೆಗಳಲ್ಲಿ ಭಾಷಾಪಾಠಗಳಿಗಾಗಿ ಒಂದು ಪುಸ್ತಕವನ್ನಷ್ಟೆ ಇಡಬೇಕಾಗಿಯೂ, ಮೂರನೆ ನಾಲ್ಕನೆ ಐದನೆ ದರ್ಜೆಗಳಲ್ಲಿ ಇಡಬೇಕಾಗಿರುವ ಪಠ್ಯಪುಸ್ತಕಗಳ ವಿಚಾರದಲ್ಲಿ, (ಮೂರನೆ ದರ್ಜೆಯ ಗಣಿತ ಪುಸ್ತಕದ ವಿಚಾರ ಸಹ) ಇನಸ್ಪೆಕ್ಟಿಂಗ್ ಆಫೀಸರರ ಅಭಿಪ್ರಾಯಪಟ್ಟೇ ಅಂತಹ ಪುಸ್ತಕಗಳನ್ನು ವಿಧಾಯಿಸಬೇಕಾಗಿಯೂ, ಅಪ್ಪಣೆ ಕೊಟ್ಟಿದೆ. (ತಾ. ೮-೭-೩೬)

[೩. ವಿದ್ಯಾರ್ಥಿಯರ ತಾಯಿತಂದೆಯರೂ ರಕ್ಷಕರೂ ಉಪಾಧ್ಯಾಯರೂ ಈ ವಿಷಯವನ್ನು ಗಮನಕ್ಕೆ ತಂದುಕೊಳ್ಳುವ ಹಾಗೆ ಸರಕಾರವು ಅಪ್ಪಣೆಯನ್ನು ಬಹಿರಂಗವಾಗಿ ಪ್ರಕಟಿಸಿದೆ. ಕನ್ನಡ ಭಾಷಾಪಾಠದ ಪುಸ್ತಕವನ್ನು ಓದುವುದಕ್ಕೇ ಹೆಚ್ಚಿನ ಸಮಯವೂ ಪ್ರಯತ್ನವೂ ಈ ಕೆಳ ದರ್ಜೆಗಳಲ್ಲಿ ಅಗತ್ಯವಾಗಿ ಬೇಕಾಗಿದ್ದು, ಯಾವುದೊಂದು ವಿಷಯವನ್ನು ಓದಿದರೆ ತಿಳಿದುಕೊಳ್ಳುವುದಕ್ಕೂ ಮೂಲತಃ ಓದುವುದಕ್ಕೂ ಬಾರದ ವಿದ್ಯಾರ್ಥಿಗಳ ಮೇಲೆ ಪ್ರತಿಯೊಂದು ಪಠ್ಯವಿಷಯಕ್ಕೂ ಒಂದೊಂದು ಭಾಷಾ ಪುಸ್ತಕವನ್ನು ಅನಾವಶ್ಯಕವಾಗಿ ವಿಧಿಸುವುದೇಕೋ ತಿಳಿಯದೆಂದು ಡೈರೆಕ್ಟರರೇ ಆಕ್ಷೇಪಿಸಿ ಸರಕಾರವೂ ಅದನ್ನು ಒಪ್ಪಿರುವಾಗ, ಬಾಯಿದೆರೆಯಾಗಿ ಕಲಿಸಿ ಪ್ರತ್ಯಕ್ಷ ಬೋಧನೆಯಿಂದ ಮನದಟ್ಟು ಮಾಡುವ ಶಿಕ್ಷಣಕ್ರಮವಿರುವಾಗ, ಜ್ಞಾನವು ಪುಸ್ತಕಗಳ ಹೊರೆ ಹೊತ್ತುಕೊಂಡೇ ಮೆದುಳಲ್ಲಿ ಬೆಳೆವುದೆಂಬ ದುಷ್ಟ ಭಾವನೆಯು ದೂರಗೊಳ್ಳುವುದು ಇನ್ನಾದರೂ ವಿಹಿತವಲ್ಲವೆ ಎಂದು ಶಿಕ್ಷಣ ಸಂಬಂಧ ಪ್ರಚಾರಮಾಡುವ ಪತ್ರಿಕೆಗಳ ಪ್ರಶ್ನೆಯಿದೆ. ಇನಸ್ಪೆಕ್ಟಿಂಗ್ ಆಫೀಸರರೂ ಡೈರೆಕ್ಟರ ಸಾಹೇಬರ ಅಭಿಪ್ರಾಯದ ಇಂಗಿತವನ್ನು ತಿಳಿಯದಿರಲಾರರು. ಅವರ ಸೂಚನೆಗಳನ್ನು ಪುಸ್ತಕಗಳನ್ನಿಡುವಾಗ ಅದಕ್ಕಾಗಿಯೆ ಪಡೆಯಬೇಕೆಂದು ಸೂಚಿಸಲಾಗಿದೆ.]

ಸುಶಿಕ್ಷಿತ ನಿರುದ್ಯೋಗಿಗಳು.

ಮದ್ರಾಸು, ಆಂಧ್ರ, ಅಣ್ಣಾಮಲೆ ಯುನಿವರ್ಸಿಟಿಗಳ ಪದವೀಧರರಲ್ಲಿ ನಿರುದ್ಯೋಗತೆ ಎಷ್ಟು ಹರಡಿದೆ ಎಂಬುದನ್ನು (ಮದ್ರಾಸು ಆಧಿಪತ್ಯದಲ್ಲಿರುವವರ ಮಟ್ಟಿಗೆ) ಸರಕಾರವು ತಿಳಿದುಕೊಳ್ಳಬೇಕೆಂದು ನಿರ್ಧರಿಸಿರುವ ಪ್ರಯುಕ್ತವೂ; ಯುನಿವರ್ಸಿಟಿ ಅಧಿಕಾರಿಗಳು ನಿರುದ್ಯೋಗಿ ಪದವೀಧರರಿಗೆ ಯಾವುದೊಂದು ಉದ್ಯೋಗವನ್ನು ಒದಗಿಸಿ ಕೊಡುವ ಸಲಕರಣೆಗಳನ್ನು ಸೂಚಿಸುವ ಪ್ರಯತ್ನ ಮಾಡುವ ಒಂದು ಸಮಿತಿಯನ್ನು ಸ್ಥಾಪನೆ ಮಾಡುವ ಇಚ್ಛೆ ತೋರಿಸಿರುವ ಪ್ರಯುಕ್ತವೂ; ಈಗ ಉದ್ಯೋಗದಲ್ಲಿರದ ಸರ್ವ ಪದವೀ (ಡಿಗ್ರಿ)ಧರರು, ಚೆಪಾಕಿನಲ್ಲಿರುವ ಲೇಬರ್ ಕಮಿಶನರರಿಗೆ ೧೯೩೬ನೇ ಇಸವಿ ಒಕ್ಟೋಬರ ತಾ. ೫ರೊಳಗೆ ಈ ಮಾಹಿತಿಯನ್ನು ಬರೆದುಕೊಳ್ಳಬೇಕೆಂದು ಸೂಚಿಸಲಾಗಿದೆ:—

(೧). ಡಿಗ್ರಿ; (೨) ಡಿಗ್ರಿ ಪಡೆದ ತಾರೀಕು; (೩) ಸಂಪೂರ್ಣ ವಿಳಾಸ; (೪) ಹಿಂದೆ ಎಂದಾದರೂ ಉದ್ಯೋಗದಲ್ಲಿದ್ದರೆ ಆ ವಿಷಯ; (೫) ಎಂತಹ ಉದ್ಯೋಗ ದೊರೆತರೆ ಆಗಬಹುದೋ ಅದರ ಸ್ವಭಾವ.

ಪ್ರೈಮರಿ ವಿದ್ಯಾಭ್ಯಾಸ ಪ್ರಚಾರ.

'ಲೋಕಲ್ ಬೋಡಿ'ಗಳಿಗೆ ಸಹಾಯ.

೧೯೧೩ನೇ ಇಸವಿಯಲ್ಲಿ ಇಂಡಿಯಾ ಸರಕಾರವು, ಪ್ರಾಥಮಿಕ ಶಿಕ್ಷಣ ವಿಚಾರದಲ್ಲಿ, ಬೋರ್ಡು ಶಾಲೆಗಳ ಮೂಲಕವಾಗಿಯೇ ಪ್ರಾಥಮಿಕ ಶಿಕ್ಷಣವನ್ನು ಪ್ರಚಾರಗೊಳಿಸಬೇಕು; ಹಣವಿಲ್ಲದೆ ಇರುವಲ್ಲಿ ಮಾತ್ರ ಬೋರ್ಡುಗಳ ಮೂಲಕ ಬೇಡ ಎಂಬ ಅಭಿಪ್ರಾಯವನ್ನು ಪ್ರಕಟಿಸಿದರು. ಹುಡುಗರ ಮತ್ತು ಹುಡುಗಿಯರ ಶಾಲೆಗಳನ್ನು ಸ್ಥಾಪಿಸುವೆರೆ (ತೆರೆಯುವರೆ) ಬೋರ್ಡುಗಳಿಗೆ ತುಂಬ ಹಣವನ್ನು ಅಂದಿನಿಂದ ಕೊಡಲಾಗಿದೆ. ಇವುಗಳಲ್ಲಿನ ಶಿಕ್ಷಕರನ್ನು ಹೆಚ್ಚಿಸುವುದಕ್ಕೂ, ಶಿಕ್ಷಕರ ಸಂಬಳ ಹೆಚ್ಚಿಸುವುದಕ್ಕೂ ಹಣಸಹಾಯ ಕೊಡಲಾಗಿದೆ. ಇನ್ನೂ ಪ್ರಾಥಮಿಕ ಶಿಕ್ಷಣವು ಹರಡಲೆಂದು ೧೯೨೦ರಲ್ಲಿ ಮದ್ರಾಸು ಎಲಿಮೆಂಟರಿ ಎಡ್ಯುಕೇಶನ್ ಎಕ್ಟ್ ಎಂಬ ಹೊಸ ಕಾನೂನನ್ನು ಮಾಡಲಾಗಿದೆ. ಇದರಲ್ಲಿ ವಿಧಿಸಿರುವಂತೆ, ಲೋಕಲ್ ಬೋರ್ಡುಗಳು ಪ್ರಾಥಮಿಕ ಶಿಕ್ಷಣಕ್ಕಾಗಿ ಹೊಸ ತೆರಿಗೆಯನ್ನು ವಿಧಿಸಬಹುದಾಗಿಯೂ, ಯಾವುದೊಂದು ಬೋರ್ಡು ಈ ವಿಧಿಯಂತೆ ಎತ್ತುವ ತೆರಿಗೆಯ ಮೊತ್ತದಷ್ಟನ್ನು ಪ್ರಾಂತಿಕ ಸರಕಾರವು ದಾನವಾಗಿ ಅದಕ್ಕೆ ಗ್ರೇಂಟು ಕೊಡುವುದಾಗಿಯೂ ನಿಶ್ಚಿತವಾಗಿದೆ. ಎಲ್ಲಾ ಜಿಲ್ಲಾ ಬೋರ್ಡುಗಳೂ, ೨೨ರಲ್ಲಿ ೪೫ ಮ್ಯುನಿಸಿಪಾಲಿಟಿಗಳೂ ಈ ತೆರಿಗೆಯನ್ನು ವಿಧಿಸಿ ಕೂಡಿಸುತ್ತಿವೆ. ಇವೆಲ್ಲವು ಕೂಡಿಸುವ ಈ ತೆರಿಗೆ ರೂ. ೨೧.೯೯ ಲಕ್ಷ; ಸರಕಾರವು ತನ್ನ ಭಂಡಾರದಿಂದ ರೂ. ೨೧.೯೯ ಲಕ್ಷವನ್ನು ಇದಕ್ಕೆ ಕೂಡಿಸುತ್ತಿದೆ. ಇದಲ್ಲದೆ, ಸರಕಾರದ ಮಂಜೂರಾತಿಯಿಂದ ತೆರೆದ ಹೆಚ್ಚಿನ ಬೋರ್ಡು ಶಾಲೆಗಳನ್ನು ಊರ್ಜಿತವಿರಿಸಲು ಸರಕಾರವು ಬೋರ್ಡುಗಳಿಗೆ ೬೩.೪೫ ಲಕ್ಷ ರೂ.ಗಳನ್ನು ಪ್ರತಿವರ್ಷವೂ ತೆರುತ್ತಿದೆ. ಅಂತೂ ವಾರ್ಷಿಕವಾಗಿ ಲೋಕಲ್ ಬೋರ್ಡುಗಳಿಗೆ ಸರಕಾರವು ಪ್ರಾಥಮಿಕ ಶಿಕ್ಷಣ ಪ್ರಚಾರಕ್ಕಾಗಿ ದಾನಮಾಡುವ ಹಣದ ಮೊಬಲಗು ೮೫,೫೪,೦೦೦ ರೂಪಾಯಿಯಾಗುತ್ತಿದೆ. ಇದು ಎಲ್ಲ ಲೋಕಲ್ ಬೋರ್ಡುಗಳು ಪ್ರಾಥಮಿಕ ಶಿಕ್ಷಣ ಪ್ರಚಾರಕ್ಕಾಗಿ ವ್ಯಯಿಸುವ ಮೊಬಲಗಿನಲ್ಲಿ ಸೇಕಡ ೭೦ರಷ್ಟಾಗಿದೆ.

೨. ೧೯೨೫ರಿಂದ ೧೯೩೧ರ ವರೆಗಣ ವಾರ್ಷಿಕ ಲೆಕ್ಕಗಳನ್ನು ನೋಡಿದ್ದಲ್ಲಿ, ಪ್ರಾಥಮಿಕ ಶಿಕ್ಷಣಕ್ಕಾಗಿ ವ್ಯಯವು ನೂರಿಂದ ನೂರ ಅರುವತ್ತನಾಲ್ಕಕ್ಕೆ ಏರಿರುವುದು. ವ್ಯಯವು ಸೇಕಡ ೬೪ ಹೆಚ್ಚಿರುವಾಗ್ಗೆ, ಅಕ್ಷರತೆಯು ಹತ್ತು ವರ್ಷಗಳಲ್ಲಿ (೧೯೧೧-೧೯೨೧) ಸೇಕಡ ೨ರಂತೆ ಮಾತ್ರ ಹೆಚ್ಚಿತು! ೧೯೩೧ರಲ್ಲಿ ಅಕ್ಷರಸ್ಥರು ಗಂಡಸರಲ್ಲಿ ೧೧॥, ಹೆಂಗುಸರಲ್ಲಿ ೧। (ಸೇಕಡಾ)! ಪ್ರಾಥಮಿಕ ಶಾಲೆಗಳ ಕಡೆಗೆ ಜನತೆಯು ಹೆಚ್ಚಾಗಿ ಮನಕೊಟ್ಟರೆ, ಅಕ್ಷರತೆಯು ಬೇಗನೆ ಹೆಚ್ಚಬಹುದಾಗಿದೆ.

೩. ಎಲಿಮೆಂಟರಿ ಎಡ್ಯುಕೇಶನ್ ಎಕ್ಟಿನಂತೆ, ಕಡ್ಡಾಯವಾದ ಪ್ರಾಥಮಿಕ ಶಿಕ್ಷಣವನ್ನು ಲೋಕಲ್ ಬೋಡಿಗಳು ಪ್ರಚಾರಗೊಳಿಸಬಹುದು. ಇದುವರೆಗೆ ೨೭ ಮ್ಯುನಿಸಿಪಲ್ ಕೌನ್ಸಿಲುಗಳು ಮಾತ್ರ ಕಡ್ಡಾಯಶಿಕ್ಷಣವನ್ನು ಕೈಗೊಂಡಿವೆ. ಐದು ಜಿಲ್ಲಾ ಬೋರ್ಡುಗಳು, ತಮ್ಮ ವಿಸ್ತೀರ್ಣದಲ್ಲಿ ಕೆಲವಂಶದಲ್ಲಿ ಮಾತ್ರವೇ ಕಡ್ಡಾಯಶಿಕ್ಷಣ ವಿಧಿಸಿವೆ.

೪. ಲೋಕಲ್ ಬೋರ್ಡುಗಳು ಶಾಲಾ ಕಟ್ಟಡಗಳನ್ನು ಕಟ್ಟಿಸುವುವಾದರೆ, ಅವುಗಳಿಗೆ ತಗಲುವ ಖರ್ಚಿನ ಅರಿವಾಸಿಯಷ್ಟನ್ನು ಸರಕಾರವು ಗ್ರೇಂಟಾಗಿ ತೆರುತ್ತಿದೆ.

(೬-೭-೩೬)

ಮಧ್ಯಪ್ರಾಂತದಲ್ಲಿ

ಸರಕಾರೀ ಹೈಸ್ಕೂಲ್‌ಗಳನ್ನು ಖಾಸಗಿ ಆಡಳಿತೆಗಳಿಗೆ ಒಪ್ಪಿಸಿ, ಅವರು ಯಾವ ಧ್ಯೇಯಗಳಿಂದ ಅವನ್ನು ನಡೆಸಿ ಬರುವುವೋ ಹಾಗೆಯೇ ಆ ಹೈಸ್ಕೂಲುಗಳು ಊರ್ಜಿತವಿರುವ ಹಾಗೆ ನೋಡಲು, ಸರಕಾರವು ಹೊಸ ತಿದ್ದುಪಡಿಯ ಕಾನೂನು ಮಾಡಿಯದೆ. ಇದರಿಂದ ಉಳಿಯುವ ಹಣವನ್ನು ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರಕ್ಕಾಗಿ ವ್ಯಯಿಸಬೇಕೆಂದು ಸರಕಾರದ ಇಚ್ಛೆಯಿದೆ.

ಒಂದೊಂದು ಸರಕಾರೀ ಹೈಸ್ಕೂಲಿಂದ ಎರಡು ಮೂರು ಖಾಸಗಿ ಹೈಸ್ಕೂಲುಗಳು ನಡೆಯಬಹುದೇ ಮಾತ್ರವಲ್ಲದೆ, ಖಾಸಗಿ ಶಾಲೆಗಳಲ್ಲಿನ ಶಿಕ್ಷಣವೂ ಶಿಕ್ಷಕರ ಸ್ಥಿತಿಯೂ ಉತ್ತಮವಾಗುವುದೆಂಬುದು ಖಂಡಿತವಾಗಿದೆ.

ಪರೀಕ್ಷೆಗಳ ಸಂಖ್ಯೆಗಳನ್ನು ಇಳಿಸಬೇಕೆಂದೂ ಮಧ್ಯಪ್ರಾಂತದ ಸರಕಾರವು ನಿರ್ಧರಿಸಿಯದೆ. ನಮ್ಮಲ್ಲಿ, ಒಂದು ಬಗೆಯ ಮಿಡ್ಲ್ ಸ್ಕೂಲ್ ಪರೀಕ್ಷೆಯನ್ನು ಪುನಃ ಜ್ಯಾರಿಗೆ ತರಬೇಕಾಗಿ ಸೂಚನೆಗಳಾಗಿವೆ ಎಂದೂ, ಇದೇ ತಿಂಗಳೊಳಗೆ ಈ ವಿಷಯಕ್ಕವಾದ ಸರಕಾರೀ ಪ್ರಕಟನೆಯು ಹೊರಡಬಹುದೆಂದೂ ವಾರ್ತೆಯಿದೆ. ಪರೀಕ್ಷೆಗಳು ಹೆಚ್ಚಿದಷ್ಟು ಬಿಗಿಯಾಗಿ ಶಿಕ್ಷಣವು ನಿರ್ಬಂಧಪಡುವುದು; ತಿದ್ದುಪಾಡುಗಳಿಗೆ ಎಡೆ ದೊರೆಯದು; ಪುಸ್ತಕಜ್ಞಾನವೂ ಬಾಯಿಪಾಠದ ಪ್ರಾಬಲ್ಯವೂ ಹೆಚ್ಚಾಗುವುವು.

ಈ ಮಧ್ಯೆ, ವಿಚಕ್ಷಣ ಪುರುಷರು ಇಂಗ್ಲೆಂಡಿನಿಂದ ಇಲ್ಲಿಗೆ ಬಂದು ಪ್ರಾಂತಿಕ ಶಿಕ್ಷಣ ಇಲಾಖೆಗಳನ್ನು ತಿದ್ದಿತರುವುದರಲ್ಲಿ ಅಗತ್ಯ ಕಾಣುವ ಸೂಚನೆಗಳನ್ನು ಕೊಡಲಿರುವರು.

(೬-೭-೩೬)

ಕರ್ನೂಲು ಜಿಲ್ಲಾ ಲೈಬ್ರೇರಿ ಸರ್ವಿಸ್.

ಕರ್ನೂಲು ಜಿಲ್ಲಾ ಬೋರ್ಡಿನವರು 'ಗ್ರಾಮುಗಳಲ್ಲಿ ಪುಸ್ತಕಾಲಯಗಳ ಪ್ರಚಾರ' ವಿಷಯವಾಗಿ ಕೆಲವು ನಿಬಂಧನೆಗಳನ್ನು ಮಾಡಿರುವರು. ಗ್ರಾಮಾಭ್ಯುದಯಸಾಧನೆಗಳಲ್ಲಿ ಇದೂ ಒಂದು.

ಅತ್ಯಾಧುನಿಕ ಮಾದರಿಯಲ್ಲಿ ಬರೆದಿರುವ ವಿಜ್ಞಾನ ವ ಇತರ ನೂತನ ವಿಷಯಗಳನ್ನು ಒಳಕೊಂಡಿರುವ ಗ್ರಂಥಗಳನ್ನು ಗ್ರಾಮುಗಳಲ್ಲಿರುವ ಶಿಕ್ಷಿತರಿಗೆ ಓದಿಸಿಗುವಂತೆ ಮಾಡಬೇಕೆಂಬ ಆತುರವು ಈ ಪ್ರಚಾರಕಾರ್ಯದ ಕಾರಣವಾಗಿದೆ.

ಮೊದಲು, ಹತ್ತು ಗ್ರಾಮ್ಯಕೇಂದ್ರಗಳಲ್ಲಿ ಈ ಪ್ರಚಾರವನ್ನು ಪ್ರಾರಂಭಿಸಲಾಗುವುದು. ಜಿಲ್ಲಾ ರಾಜಧಾನಿಯಿಂದ ಇಪ್ಪತ್ತು ಮೈಲಿನೊಳಗೆ ಈ ಕೇಂದ್ರಗಳು ಇರತಕ್ಕುದು. ಅಲ್ಲಿಗೆ, ಅಥವಾ ಅವುಗಳ ಸಮೀಪಕ್ಕೆ ಬಸ್ ಸರ್ವಿಸು ಇರತಕ್ಕುದು.

ಎರಡು ತಿಂಗಳಿಗೊಂದು ಸಲ ಈ ಕೇಂದ್ರಗಳಿಗೆ ಪುಸ್ತಕಗಳನ್ನು ಕಳುಹಿಸಿಕೊಡಲಾಗುವುದು. ಪ್ರತಿ ಸಲ ನೂರು ಪುಸ್ತಕಗಳ ಕಟ್ಟು. ಪ್ರತಿಯೊಂದು ಕೇಂದ್ರದಲ್ಲಿ ಪುಸ್ತಕಗಳ ಜತನ ನೋಡಲು ಒಬ್ಬೊಬ್ಬ ಲೈಬ್ರೇರಿಯನನಿರುವನು. ಪುಸ್ತಕಗಳನ್ನು ಹಿಂದೆ ಕೊಡಲು ಅವನು ಜವಾಬುದಾರನು. ಗ್ರಾಮದಲ್ಲಿರುವ ಯಾವ ಶಿಕ್ಷಿತನಿಗಾದರೂ, ಯಾವುದೊಂದು ಭೇದಮಾಡದೆ, ಈ ಗ್ರಂಥಗಳನ್ನು ಧರ್ಮಾರ್ಥವಾಗಿ ಓದಕೊಡಬೇಕಾಗಿದೆ.

ಗ್ರಾಮ ಶಾಲಾ ಉಪಾಧ್ಯಾಯನು, ಗ್ರಾಮ ಪಂಚಾಯತದ ಪ್ರೆಸಿಡೆಂಟು, ಪಟೇಲ, ಅಥವಾ ಶ್ಯಾನುಭೋಗ—ಇವರೊಳಗೆ ಒಬ್ಬನನ್ನು ಅಥವಾ ಗ್ರಾಮದಲ್ಲಿ ಗೌರವಾರ್ಹನಾದ ದಕ್ಷನಾದೊಬ್ಬನನ್ನು ಆಯಾ ಕೇಂದ್ರದ ಲೈಬ್ರೇರಿಯನನಾಗಿ ನೇಮಿಸಲಾಗುವುದು.

ಅಶಿಕ್ಷಿತರೂ ಈ ಗ್ರಂಥಪ್ರಚಾರದಿಂದ ಉಪಯೋಗ ಹೊಂದುವ ಹಾಗೆ, ಹತ್ತು ಕೇಂದ್ರಗಳಲ್ಲೂ, ವಾಚನ ಮಾಡಲಾಗುವುದು. ಹಳ್ಳೀಶಾಲೆಯಲ್ಲಾಗಲಿ, ಗ್ರಾಮಚಾವಡಿಯಲ್ಲಾಗಲಿ ಈ ವಾಚನಗಳು ನಡೆಯುವುವು. ಗ್ರಾಮಸ್ಥರಿಗೆ ಬರಲು ಅನುಕೂಲವಾಗಿರುವ ಒಂದು ಸ್ಥಳವನ್ನು ಇದಕ್ಕಾಗಿ ಆರಿಸಿ, ಪತ್ರಿಕೆಗಳಿಂದಲೂ, ಈ ಗ್ರಂಥಗಳಿಂದಲೂ ಮುಖ್ಯಾಂಶಗಳನ್ನು ಲೈಬ್ರೇರಿಯನನಾಗಲಿ ಆತನ ಸಹಾಯಕರಾಗಲಿ ಓದಿ ಹೇಳುವರು. ಪತ್ರಿಕೆಗಳಿಂದ ಕತ್ತರಿಸಿ ತೆಗೆದ ಚಿತ್ರಗಳನ್ನು ಅಂಟಿಸಿದ ಪುಸ್ತಕಗಳನ್ನು ಗ್ರಾಮಸ್ಥರಿಗೆ ನೋಡಲು ಕೊಡಲಾಗುವುದು.

ಮಾಯಾಲಾಂದ್ರದ ಸಹಾಯದಿಂದ ಭಾಷಣಗಳನ್ನು ಕೊಡುವ ಹೊಸ ವಿಷಯಗಳಲ್ಲಿ ಅನುಭವವನ್ನು ಸಾರುವ ಉದ್ಯಮವೂ ಅಲ್ಲಿ ನಡೆವುದು. ಭಜನಾಕೂಟಗಳೂ, ನಾಟಕಾಭಿನಯಗಳೂ, ಗ್ರೆಮೋಫೋನ್ ಸಂಗೀತ ಕೂಟಗಳೂ ಅಲ್ಲಿ ಜರಗುವುವು. ಈ ಮೂಲಕವಾಗಿ ಅಶಿಕ್ಷಿತರಿಗೆ ಸಾಕಷ್ಟು ಸಂಸ್ಕೃತಿ ಕೊಡುವ ಶಿಕ್ಷಣವನ್ನು ಕೊಡಲಾಗುವುದೆಂದು ನಿರೀಕ್ಷಿಸಲಾಗಿದೆ.

ಇಡೀ ಜಿಲ್ಲೆಯಲ್ಲಿ ಪುಸ್ತಕಭಂಡಾರಗಳ ವಿಚಾರವಾಗಿ ಬೇಕಾದ ಕುತೂಹಲವನ್ನು ಹೀಗೆ ಉಂಟುಮಾಡಿ, ಹಬ್ಬ ಆಯನಗಳ ಕಾಲದಲ್ಲಿ ಈ ಭಾಷಣಾದಿಗಳನ್ನು ಮಾಡಿಸಿ, ಹಳ್ಳಿಗರಲ್ಲಿ ಅನೇಕರು ಈ ವಿಷಯ ಉತ್ಸಾಹ ತೋರಿಸುವಂತೆ ಸಾಧಿಸಲಾಗುವುದು. ಶಿಕ್ಷಣ, ಕೃಷಿ, ಆರೋಗ್ಯ ಸಹಕಾರ ಮೊದಲಾದ ಇಲಾಖೆಗಳ ಆಫೀಸರರು ಸಹಕರಿಸಿ ಜಿಲ್ಲಾ ಲೈಬ್ರೇರಿ ಎಸೋಸಿಯೇಶನ್ ಎಂಬ ಸಂಘವನ್ನು ಸ್ಥಾಪಿಸಿ, ಗ್ರಾಮುಗಳ ಅಭಿವೃದ್ಧಿಗೆ ಹೀಗೆ ಸಹಾಯಕರಾದಾರಾಗಿ ನಂಬಲಾಗಿದೆ.

ಕೇಂದ್ರಗಳಲ್ಲಿ ನಡೆವ ಕೆಲಸದ ಮೇಲ್ತನಿಖೆಯನ್ನು ಜಿಲ್ಲಾ ಪಂಚಾಯತ ಆಫೀಸರರು ನೋಡುವರಾಗಿ ಎಣಿಸಲಾಗಿದೆ.

ಬಲ್ಲವರು ಉತ್ಸಾಹದಿಂದ ನೂತನ ಪ್ರಯೋಜಕ ವಿಷಯಗಳನ್ನು ಕುರಿತಾಗಿ, ಉಪಯುಕ್ತವಾದ ಲೇಖಗಳನ್ನು ಬರೆದರೆ, ಅವನ್ನು ಈ ಸಂಘವು ಪ್ರಕಟಿಸುವುದು.

ರೂ. ೨,೯೦೦ನ್ನು ಈ ವರ್ಷದ ಮೂಲ ಖರ್ಚಿಗಾಗಿ ಸೆಂಕ್ಷನ್ ಮಾಡಲಾಗಿದೆ. (೩-೭-೧೯೩೬)

[ನಮ್ಮ ಜಿಲ್ಲಾ ಬೋರ್ಡು ಈ ವಿಷಯವನ್ನು ಪರ್ಯಾಲೋಚಿಸಿ, ಕೈಕೊಳ್ಳಬಾರದೆ?]

ಕರಾಚಿಯಲ್ಲಿ

ಮಾಯಾಲಾಂದ್ರಗಳ ಮತ್ತು ಚಿತ್ರಗಳ ಮೂಲಕ ಮಕ್ಕಳಿಗೆ ಹೆಚ್ಚಿಗೆ ಉಪಯುಕ್ತವಾದ ಶಿಕ್ಷಣ ಕೊಡಲಾಗುವ ಹಾಗೆ, ಕರಾಚಿ ಮ್ಯುನಿಸಿಪಾಲಿಟಿಯು ೧,೫೦೦ ರೂಪ್ಯಾಗಳನ್ನು ಈ ವರ್ಷಕ್ಕೆ ಸೆಂಕ್ಷನು ಮಾಡಿಯದೆ. ನಮ್ಮಲ್ಲಿ ಈ ಪ್ರಸ್ತಾವನೆಯೆತ್ತಲು ಅವಕಾಶವೇ ಇಲ್ಲ!

ಸ್ತನೋ ಸ್ತೇಧಃ

STHANO STHEDAH THE MALAYALA OUSHADHA CO., POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗ ಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವುದು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣ ಪರತ

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೊಸ್ಪಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ, ದಾರುಣವಾದ ಚಿಂತೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲುಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳಿ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರು ಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು. ದೇಹದೊಳಗೆ ಹೋಗುವ ಔಷಧಿಯು ಶರೀರವೃದ್ಧಿಯನ್ನೂ ಸ್ತನಗಳ ಪೌಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸ್ಥಿರಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತಧ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ. 3.
ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು.

ಮಲೆಯಾಳ ಔಷಧಾ ಕಂಪೆನಿ

MALAYALA OUSHADHA CO., Post CHALAPURAM.

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.

1. ಮುಟ್ಟುದೋಷ, 2. ಸಂತತಿ ಪ್ರತಿಬಂಧಕ, 3. ಧಾತುಪುಷ್ಟಿ, 4. ಲಿಂಗವೃದ್ಧಿ, 5. ಸ್ತ್ರೀರೋಗ, 6. ಕ್ಷಯ ಸಂಹಾರಿ, 7. ವಾತರೋಗ.

THE GENERAL INSURANCE BANK OF INDIA LIMITED.,

OPPOSITE TALUK POLICE STATION,

MANGALORE.

ESTD. 1933.

AS ON 30TH APRIL 1936.

BENEFIT AMOUNT PAID EXCEEDS RS. 20,150/—

RESERVE FUND EXCEEDS RS. 6,250/—

WE HAVE THREE SCHEMES FOR YOU.

LIFE **MARRIAGE** **BIRTH**

ADMISSION FEE RS. 5—8—0 ONLY. (By Instalments if required)

MONTHLY PREMIUM RUPEE ONE ONLY.

WANTED SPECIAL AGENTS & REPRESENTATIVES ON LIBERAL TERMS.

For Full Prospectus & Agency Terms please call at or write to:—

THE GENERAL INSURANCE BANK OF INDIA LIMITED,
MANGALORE, S. K.

Mangalore,
Dated 8th May '36. }

P. K. MENON,
Secretary.

ದಿ ರುಸ್ತಾಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಮುಂಬಾಯಿ.

ತಾಜಾ ಆಯುರ್ವೇದೀಯ ಔಷಧಗಳನ್ನು ಅತ್ಯಂತ ದೊಡ್ಡ ಪ್ರಮಾಣದಲ್ಲಿ ತಯಾರಿಸುವವರು.

ಆರೋಗ್ಯ, ಚೈತನ್ಯ ಮತ್ತು ಶಕ್ತಿಗಾಗಿ

ರುಸ್ತಾಂಡೂ ದ್ರಾಕ್ಷಾಸವ

ಉಪಯೋಗದ ಮೇಲೆಯೇ ಒತ್ತಾಯಪಡಿಸಿರಿ.

ರುಚಿಯನ್ನು ಹೆಚ್ಚಿಸುತ್ತದೆ. ಅಜೀರ್ಣ ಮತ್ತು ಆಯಾಸವನ್ನು ಹೋಗಲಾಡಿಸುತ್ತದೆ ಮತ್ತು ಇಡೀ ದೇಹಕ್ಕೆ ನವಚೈತನ್ಯವನ್ನು ಕೊಡುತ್ತದೆ. ದೀರ್ಘಕಾಲದ ಕಾಹಿಲೆಯನಂತರ ರುಸ್ತಾಂಡೂ ದ್ರಾಕ್ಷಾಸವ ಅತ್ಯುಪಯುಕ್ತವಾಗಿ ಬೇಕಾಗಿರುತ್ತದೆ. ಸಂಕ್ಷೇಪತಃ ನಮ್ಮ ದ್ರಾಕ್ಷಾಸವ ಮೆದುಳಿನ ಕೆಲಸಗಾರರಿಗೊಂದು ವರಪ್ರದಾನ.

INVEST YOUR SAVINGS IN A

East and West Policy.

OWN A EAST & WEST POLICY AND INCREASE YOUR SAVINGS! FOR THE EAST & WEST IS MAKING ASTOUNDING PROGRESS AND A EAST AND WEST POLICY IS, THEREFORE, A PROFITABLE INVESTMENT. IT ENCOURAGES THRIFT, ENSURES THE HIGHEST RETURNS AND OFFERS UTMOST SECURITY.

For Prospectus, Valuation Reports & Agency Terms apply to:—

MESSRS. PADUBIDRI BROS.,
Chief Agents,
MAHARASHTRA AND KARNATAKA,
East & West Insurance Co., Ltd.,
BOMBAY No. 8.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.
ಶೀಸೆ 1ಕ್ಕೆ 12 ಆಣೆ; ಟಿ. ಖ. 11 ಆಣೆ.

ಪ್ಲೀನೋಜಿ ಲಿವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ ಚೆಕ್ಕುಬಿಂದು ದಿವ್ಯೌಷಧವು.
ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.
ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟಿ. ಖ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, ಮೈಸೂರು ಸೀಮೆ.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಲಾಗುವುದು.

ಬಾಲವಿನೋದ

ಶಿಖಾರಿ.

ಬಿಡುವಿದ್ದಾಗ ಪುಸ್ತಕಶಿಖಾರಿ ಮಾಡುವುದು ನನಗೆ ಬಹಳ ಉಲ್ಲಾಸವನ್ನು ಕೊಡುವುದು. ಪುಸ್ತಕಗಳ ವಿಷಯ ಮಾತನಾಡುವಾಗ ನನಗೆ ಗಾಗರಣಿ ಹಿಡಿದಂತಾಗುವುದು. ಪುಸ್ತಕಗಳನ್ನು ಒಟ್ಟುಮಾಡುವುದೇ ನನಗೆ ಪ್ರಿಯವಾದ ಕೆಲಸ. ಪುಸ್ತಕಗಳೆ ನನ್ನ ಕಂಠಮಣಿ.

ನಮ್ಮೂರಿನ ಲಕ್ಷಾಧಿಪತಿಗಳಿಗೆಲ್ಲ ಈ ವಿಷಯವೆ ಮನಸ್ಸಿಗೆ ಹೊಳೆಯುವುದಿಲ್ಲವಲ್ಲ. ಮನೆಯ ಸೌಂದರ್ಯಕ್ಕಾಗಿ ನೂರಾರು ರೂಪಾಯಿಗಳನ್ನು ಪುಡಿಗೈವರು. ಚೀನಾ ಪಾತ್ರೆಗಳು, ರನ್ನಗಂಬಳಿಗಳು, ಪೂ ಪಾತ್ರೆಗಳು, ಇವೆಲ್ಲಾ ಗೃಹಾಲಂಕಾರಕ್ಕೆ ಅತ್ಯಗತ್ಯವಾದುವೆಂದು ಒಗೆದು, ಸುಮಾರು ಸಾವಿರ ರೂಪಾಯಿಯನ್ನಾದರೂ ವ್ಯಯಮಾಡುವರು. ಆದರೆ ಇಡೀ ಮನೆಯಲ್ಲಿ ಒಂದು ಪುಸ್ತಕವು ಕಾಣಬರುವುದಿಲ್ಲ. ವರ್ಷ ವರ್ಷಕ್ಕೂ ಮನೆಯ ಆಭರಣಕ್ಕಾಗಿ ಲಕ್ಷಗಟ್ಟಲೆ ರೂಪಾಯಿಯು ವ್ಯಯವಾಗುವುದಾದರೂ ನೂರು ರೂಪಾಯಿಯ ಪುಸ್ತಕಗಳ ಮಾರಾಟವಾಗಲಾರದು. ಬೊಂಬಾಯಿಯಲ್ಲಿ ದೊರಕುವ ವಸ್ತುಗಳು, ಪರದೇಶದಲ್ಲಿ ದೊರಕುವ ವಸ್ತುಗಳು, ಇವನ್ನೆಲ್ಲಾ ಅವರ ಮನೆಯಲ್ಲಿ ಕಾಣುವಿರಿ. ಆದರೆ ಗ್ರಂಥಗಳಿಗೆ ಅಲ್ಲಿ ಒಂದು ಸಣ್ಣ ಸ್ಥಳವಾದರೂ ಸಿಗದು.

ಸಿರಿವಂತರ ಮನೆಯಲಂಕಾರವನ್ನು ಬಣ್ಣಿಸುವ ಅಗತ್ಯ ವಿಲ್ಲ. ಆದರೂ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಮನೆಯ ಎದುರುಗಡೆ ದೊಡ್ಡ ಹೂತೋಟ. ಪರಿಮಳಭರಿತವಾದ ವಾತಾವರಣವು ಮನೆಯನ್ನು ಆವರಿಸಿ ಇದ್ದರೆ, ದೇಹಾರೋಗ್ಯಕ್ಕೆ ಹಂಸಪಾದ ಕೊಟ್ಟಂತಾಗುವುದು. ಆದರೆ ಹೂತೋಟವು ಹೀಗೆಯೆ ನಡೆಯುತ್ತದೆಯೆ? ಅದಕ್ಕೆ ಬೇಕುಬೇಕಾದ ಗೊಬ್ಬರವನ್ನೊ ಇನ್ನಿತರ ವಸ್ತುಗಳನ್ನೋ ಒದಗಿಸಬೇಕು. ಅದಕ್ಕೆ ತುಂಬಾ ಹಣದ ಪಾವತಿ. ಕಠಿಣ ಬಿಸಿಲಿನ ಪ್ರಾಂತ್ಯವಾದರೂ ಚಳಿಯಿರುವ ದೇಶಗಳಲ್ಲಿ ಬೆಳೆಯುವ ಮರಬಳ್ಳಿಗಳನ್ನು ನೆಡುವರು. ಆ ಬಳ್ಳಿಗಳು ಬದುಕಬೇಕಾದರೆ, ಸನ್ನಿಪಾತ ರೋಗ ಹಿಡಿದವನಿಗೆ ತೆಗೆದುಕೊಳ್ಳಬೇಕಾದ ಆರೈಕೆಗಿಂತಲೂ ಹೆಚ್ಚಾದ ಆರೈಕೆಯನ್ನು ತೆಗೆದುಕೊಳ್ಳಬೇಕು. ಅದರಿಂದ ದೊರೆವ ವೈಶಿಷ್ಟ್ಯವೇನೆಂದು ಬಲ್ಲವರಿಲ್ಲ. ಹಾಗೆಯೆ ಮನೆಯ ಒಳಗೆ. ಹೆಜ್ಜೆ ಹೆಜ್ಜೆಗೆ ಹೂ ಇಡಲು ಚೀನಾ ಪಾತ್ರೆಗಳು. ಗಾಳಿ ಬರಲು 'ಫೇನ್ಸ್'. ತುಂಬಾ ವಿದ್ಯುಚ್ಛಕ್ತಿಯ ದೀಪಗಳೂ, ಗ್ರಾಮೋಫೋನೂ, ರೇಡಿಯೊವೂ ಇವೆ. ಇಷ್ಟೆಲ್ಲ ಗೃಹಲಕ್ಷ್ಮಿಯ ಬೆಡಗಿನ ಪ್ರದರ್ಶನವೋ ಎಂಬಂತಿದೆ. ಆದರೆ ಇವೆಲ್ಲ ಏನನ್ನು ತೋರಿಸುವುವು? ಮನೆಯ ಯಜಮಾನನು ಬಹಳ ಸಿರಿವಂತನೆಂದು. ಅವನ ಬುದ್ಧಿಶಕ್ತಿಯನ್ನು ತೋರಿಸಲಿಕ್ಕಿಲ್ಲ. ಈ ಎಲ್ಲ ಆಭರಣವು ಒಂದು ಪುಸ್ತಕಾಲಯದಿಂದಾಗುವುದು. ಇದೆಲ್ಲ ಹರಟೆಯಲ್ಲ, ನಿಜ ಸಂಗತಿ.

ಬರೇ ಬೆಡಗಿನ ಆಡಂಬರಕ್ಕಾಗಿ ಹಾರ್ಮೊನಿಯಂ, ರೇಡಿಯೋ ಮುಂತಾದುವುಗಳನ್ನು ನೂರಾರು ರುಪಾಯಿಗಳಿಗೆ ಕೊಂಡುಕೊಳ್ಳುವರು. ಆದರೆ ಮೂರು ರೂಪಾಯಿಗಳ ಪುಸ್ತಕಗಳನ್ನು ಕೊಳ್ಳುವವರಿಲ್ಲ. ಊರಿನ ಪುಸ್ತಕವ್ಯಾಪಾರಿಗಳು ಶಾಲಾ ಪುಸ್ತಕಗಳ ಮಾರಾಟದಿಂದ ಜೀವಿಸಬೇಕು. ಅತ್ಯಲ್ಪ ಬೆಲೆಯಲ್ಲಿ ಮನೆಯನ್ನು ಬೆಳಗಿಸಲು ಸಾಧ್ಯವಿರುವಾಗ, ನೂರಾರು ರೂಪಾಯಿಗಳ ವೆಚ್ಚದಿಂದ ಅದನ್ನು ಸಾಧಿಸುವುದು ಏಕೆ? ಪುಸ್ತಕಗಳಿಲ್ಲದ ಮನೆಯು ಜ್ಞಾನಿಗಳ ಮನೆಯಲ್ಲ, ಅಸುವಿಲ್ಲದ ಡಿಂಬ. ರನ್ನಗಂಬಳಿಗಳು ತಮ್ಮ ಯಜಮಾನರ ಹತ್ತಿರ ನಿಧಿ ತುಂಬವಿದೆಯೆಂದು ತೋರಿಸುವುವು; ಪುಸ್ತಕಗಳು ತಮ್ಮ ಯಜಮಾನರ ಹತ್ತರ ವಿದುಳಿದೆ ಎಂದು ಸೂಚಿಸುವುವು. ಬರೆ ಒಂದು ರೂಪಾಯಿಯಿಂದ ಪುಸ್ತಕಭಂಡಾರದ ಅಸ್ತಿವಾರವನ್ನು ಹಾಕಬಹುದು. ಅದು ಕ್ರಮೇಣ ದೊಡ್ಡ ಆಲಯವಾಗುವುದರಲ್ಲಿ ಸಂಶಯವಿಲ್ಲ. ಅದರ ನೋಟದಿಂದ ಹಿಗ್ಗಬಹುದು, ಆ ನಿಧಿಯೇ ನಿಮ್ಮ ಹೆಗ್ಗಳಿಕೆ, ನಿಮ್ಮ ಮಗ-ಮೊಮ್ಮಗರಿಗೆ ಜ್ಞಾನೋದಯವಾಗಲು ಅದೇ ಸುಲಭ ಸಾಧನೆ.

ಲಿಪಿ-ಸಂಸ್ಕರಣ

(ಲೇಖಕರು:—ಶ್ರೀ. ಎಮ್. ನರಸಿಂಗ ರಾವ್, ಬಿ. ಎ., ಎಚ್. ಎಲ್., ನಿವೃತ್ತ ಡಿ. ಮತ್ತು ಸೆಶನ್ಸ್ ಜಡ್ಜ್, ಮಂಗಳೂರು.)

ಎಲ್ಲಾ ಬಿಟ್ಟು ಸಾಹಿತಿಗಳು ಲಿಪಿಸಂಸ್ಕರಣದ ಗದ್ದಲವೆ ಬ್ಬಿಸಿದ್ದಾರೆ. ಗುಣಗಳೇನೋ ಮನಃಸೃಷ್ಟಿಯಾಗಿ ಕೆಲವಿವೆ. ಅಕ್ಷರಸಂಖ್ಯೆ ಕಡಮೆಯಾಗಬೇಕಂತೆ. (i) ಹ್ರಸ್ವ ದೀರ್ಘಗಳಲ್ಲಿ, (ii) ಅಲ್ಪಪ್ರಾಣ-ಮಹಾಪ್ರಾಣಗಳಲ್ಲಿ, (iii) ಸ್ವರಗುಣಿತ-ವ್ಯಂಜನಗಳಲ್ಲಿ, ಹೊಸ ಸ್ವರಚಿಹ್ನೆಗಳೇ ಬೇಕಂತೆ. (iv) ದ್ವಿತ್ವ-ಸಂಯುಕ್ತಾಕ್ಷರಗಳಲ್ಲಿಯ ಒತ್ತು ವ್ಯಂಜನಾಕ್ಷರಗಳೋ ಅವುಗಳ ಭಾಗಗಳೋ ಆಗಿರಬೇಕಂತೆ. ಇದರಿಂದ ಶಿಶುಗಳ ಪ್ರಥಮಪಾಠಕ್ಕೂ ಮುದ್ರಣಕ್ಕೂ ಸೌಕರ್ಯವುಂಟಾಗುವುದಂತೆ. ಇಷ್ಟಾಗಿ, ಅಕ್ಷರಗಳ ಸೌಂದರ್ಯವು ಕೆಡಲಾಗದಂತೆ.

2. ಹೊಸ ರೀತಿಯಲ್ಲಿ ಆಕ್ಷೇಪಕರ ಅಕ್ಷರಗಳನ್ನು ಹೀಗೆ ಬರೆಯಬೇಕೆಂದೊಬ್ಬರು—

(i) ಆ ಈ ಊ ಋಾ ಏ ಓ (ಹಳೆಯುದು)
ಅೀ ಇೀ ಉೀ ಋೀ ಎೀ ಒೀ (ಹೊಸತು)

(ii) ಕ ಗ ಚ ಜ ಟ ತ (ಅಲ್ಪಪ್ರಾಣ)
ಕ ಗ ಚ ಜ ಟ ತ (ಮಹಾಪ್ರಾಣ)

(iii) (ಉದಾಹರಣಕ್ಕಾಗಿ)
ಕಾ ಕೂ ಕ (ಹಳೆಯದು)
ಕ್ಕೇ ಕೋ ಕೈ (ಹೊಸತು)

(iv) (a) ತ್ತ ನ್ನ ಮ್ಮ ಯ್ಯ ಲ್ಲ (ಹಳೆಯುದು)
ತ ನ ಮ ಯ ಲ (ಹೊಸತು)
ತ ನ ಮ ಯ ಲ
(ಉದಾಹರಣಕ್ಕಾಗಿ)

(b) ಕ್ತ ಕ್ಷ ಕ್ಕ ಕ್ಕ ಕ್ಲ ರ್ಕ (ಹಳೆಯದು)
ಕ ಕ ಕ ಕ ಕ ರ } (ಹೊಸತು)
ಕ ನ ಮ ಯ ಲ ಂ

3. ಪ್ರಥಮತಃ ಒಂದು ತೊಂದರೆಯುಂಟು. ಕ್ಷ ಎಂಬುದನ್ನು ಕ್ಷ ಎಂದು ಬರೆದರೆ ಕ್ಷ ಹೇಗೆ ಬರೆಯಲಿ? ಕ ಎಂದೇ? ಹೊಸ ಮ ಒತ್ತು (ಮ್) ಬಾಲ ಕೊಟ್ಟರೆ ಹಳೆಯ ಘ ಒತ್ತಂತಾಗುವುದು; ಆದರೆ ಹೊಸ ಘ ಒತ್ತು ಗ ಎಂದಾಗುವುದೆನ್ನಿ. ಹಾಗೆಯೇ ಹೊಸ ಯ ಒತ್ತಿಗೆ (ಯ್) ಬಾಲ ಕೊಟ್ಟರೆ ಹಳೆಯ ಝ ಒತ್ತಂತಾಗುವುದು; ಇಲ್ಲಾ ಹೊಸ ಝ ಒತ್ತು ಜ ಎಂದಾಗುವುದೆಂದು ಇಟ್ಟುಕೊಳ್ಳಿ. ಆದುದರಿಂದ ಮೇಲಿನ ಎಲ್ಲಾ ಲಿಪಿಸುಧಾರಣೆಗಳನ್ನು ಸುಧಾರಿಸಲೇಬೇಕೆಂದಾಯ್ತು, ಅಥವಾ ಬೆಕ್ಕಿನಂತೆ ಬಾಲ ಕಂಡುಹಿಡಿಯಲಿಕ್ಕೆ ಸುತ್ತಬೇಕಾಗಿ ಬಂದೀತು.

4. ಇನ್ನೊಂದು. ಹೊಸ ಲ ಒತ್ತು ಪೂರ್ಣ ಲಕಾರದಂತೆಯೇ ಇರಬೇಕಲ್ಲವೇ? ಹಾಗೆ ಬರೆದರೆ ಅದು ಮೇಲ್ಸಂಕ್ತಿಯ ಅಕ್ಷರಕ್ಕೆ ಒತ್ತೊ ಅಥವಾ ಅದರ ಕೆಳಗಿರುವ ಕೀಳ್ಸಂಕ್ತಿಯ ಅಕ್ಷರದಂತೆ ಒತ್ತಿರುವ (ಆದರೆ ಅಲ್ಲಿ ಪೂರ್ಣಾಕ್ಷರವಾಗಿ ಒತ್ತಿನಂತೆ ಕಾಣಬರುವ) ಅಕ್ಷರಕ್ಕೆ ಮೇಲಕ್ಷರವೊ ಎಂಬ ಸಂಶಯ ಬರಬಹುದು. ಅಂದರೆ ಹೀಗೆ. ಒಂದು ಸಂಕ್ತಿಯಲ್ಲಿ ಕ ಎಂಬ ಅಕ್ಷರವಿದೆ. ಕೆಳಪಂಕ್ತಿಯಲ್ಲಿ ಆ ಅಕ್ಷರಕ್ಕೆ ಕೆಳಗೆನೇ ಜ ಎಂಬ ಕ್ಷರ ಬಂದಿತು. ಆಗ ಮೇಲ್ಸಂಕ್ತಿಯ ಅಕ್ಷರವನ್ನು ಕ ಮಾತ್ರವೆಂದೂ ಕೆಳಪಂಕ್ತಿಯ ಅಕ್ಷರವನ್ನು ಜ್ಞ ಎಂದೂ ಓದಲು ಸಾಧ್ಯವಿದೆ. ಇದು ಹಸ್ತಲೇಖನಗಳಲ್ಲಿ ಕಷ್ಟವಾಗಿ ಬಂದೀತು.

5. ಟ ಒತ್ತಿಗೆ ಈ ಕಷ್ಟವೇ ಒತ್ತದೇ ಎಂಬ ಪ್ರಶ್ನೆ ಬಂದೀತು. ಈಗಿನ ಸಾಲೆಗಳಲ್ಲಿ ಟ ಒತ್ತನ್ನು ಆ ಪೂರ್ಣಾಕ್ಷರದಂತೆ ಬಹಳವಾಗಿ ಬರೆಯುವುದುಂಟೇನೋ ನಿಜ. ಆದರೆ ಐಗಳ ಸಾಲೆಯಲ್ಲಿ ಮುಂಚೆ ಹಾಗಿರಲಿಲ್ಲ. ಟ ಒತ್ತನ್ನು ಪ್ಟ ಎಂದು ಬರೆಯುತ್ತಿದ್ದರು; ಅಂದರೆ ಪೂರ್ಣಾಕ್ಷರವಾಗಿ ಅಲ್ಲ. ಈಗಲೂ ಈ ರೀತಿಯಾಗಿ ಬರೆಯುವವರು ಅನೇಕರಿರುವರು. ಮುದ್ರಣದ ಟೈಪುಗಳನ್ನು ಆ ರೀತಿಯೇ ಇಟ್ಟಿರುವರು. ಅಂತೂ ಒಂದು ದೋಷದ ಪರಿಹಾರ ಅಂತಹ ಇನ್ನೊಂದು ದೋಷದಿಂದಾದೀತೇ? ಇಬ್ಬರು ತುಂಟರು ಸೇರಿದರೆ ಆ ಮಾತ್ರದಿಂದ ಸಭ್ಯರಾದಾರೆ? ಸುಧಾರಣೆಗೆ ಹೊರಟೆವಲ್ಲ? ಇದು ಸುಧಾರಣೆಯೇ?

6. ಬೇರೊಂದು. ಈ ಮಾಪಾರ್ಟದಿಂದ ಅಕ್ಷರ ಸಂಖ್ಯೆಯು ಕಡಮೆಯಾಗದು. ಮಾಪಾರ್ಟದ ಸಂಜ್ಞೆಗಳು ಕಡಮೆಯಾಗಿ ಶ್ರಮವಿಲ್ಲದೆ ಅಕ್ಷರಜ್ಞಾನ ಹುಟ್ಟುವುದಂತೆ. ಮೂರಾರು ತಿಂಗಳಲ್ಲಿ ಶಿಶುಗಳು ಈಗಿನ ಲಿಪಿಗಳನ್ನು ಪೂರ್ಣ ತಿಳಿದುಕೊಳ್ಳುವರೆಂದರೆ ಶ್ರಮವೆಲ್ಲಿಯದು? ಹೀಗೆ ಕಲಿತ ಚಿಕ್ಕವರು ದೊಡ್ಡವರು ಈ ಸುಧಾರಣೆಯ ಲಿಪಿಗಳನ್ನು ಪುನಃ ಕಲಿಯಬೇಕು. ಇದರ ಶ್ರಮವನ್ನು ಯಾರು ಕೊಳ್ಳುವರು? ಅದರ ಪರಿಮಾಣವೆಷ್ಟು? ಇಷ್ಟಾಗಿ ಪರಿಣಾಮವೇನು? ಹಳೆಯ ಪದ್ಧತಿಯನ್ನೂ ಹೊಸ ಪದ್ಧತಿಯನ್ನೂ ಎರಡನ್ನೂ ಕಲಿಯಬೇಕು. ಇಷ್ಟರ ವರೆಗೆ ಬರೆದ ಅಚ್ಚಾದ ಪುಸ್ತಕಗಳನೇಕವಿವೆ. ಹೊಸ ಪದ್ಧತಿಯನ್ನೇ ಕಲಿಸಿಕೊಟ್ಟು ಅವುಗಳನ್ನೆಲ್ಲ ಮೂಲೆಗೆ ಹಾಕಲೇ? ಹೊಸ ಸಾಹಿತ್ಯವೊಂದೇ ಸಾಕೇ?

7. ಅಕ್ಷರಗಳ ಗುರುತು ಹೊಸ ಪದ್ಧತಿಯಲ್ಲಿ ಸುಲಭವೆಂಬುದನ್ನು ತರ್ಕಸೌಲಭ್ಯಕ್ಕಾಗಿ ಸಮ್ಮತಿಸೋಣ. ಬರೆಯುಶ್ರಮವನ್ನು ಇಳಿಸುವುದು ಒಂದು ಧ್ಯೇಯವಾಗಬಾರದೇ? ಹೆಚ್ಚುಕಡಮೆ ಒಂದೇ ರೂಪವಿದ್ದು ಸಂಬಂಧವಿಲ್ಲದ ಅಕ್ಷರಗಳನ್ನು ಅಥವಾ ಅದರಲ್ಲಿ ಒಂದುಳಿದು ವಿುಕ್ಕವನ್ನು ಭೇದ ತಿಳಿಯುವಂತೆ ಮಾರ್ಪಡಿಸುವುದು ಇನ್ನೊಂದಾಗಬಾರದೇ? (ಉದಾ—ಅ-ಆ, ಘ-ಘ, ಜೆ-ಜಿ, ಠ-ರ, ಪ-ವ-ಷ-ಮ, ಥ-ಧ ಇತ್ಯಾದಿ). ಟಿ-ಟಿಗಳ ಭೇದವು ಮುದ್ರಣದಲ್ಲಿ ಸೂಕ್ಷ್ಮವಾಗಿದೆ. ಹಿಂದೆ ಳನಿಯ ಪರಿಚ್ಛೇದದಲ್ಲಿ ಹೇಳಿದ ಹೊಸ ಲಕಾರದ ಒತ್ತಿನ ವಿಷಯವೇನು?

8. ಹೆಚ್ಚುಕಡಮೆ ಒಂದೇ ರೂಪವುಳ್ಳ ಅಕ್ಷರಗಳು ಮುದ್ರಣದಲ್ಲಿ ಗಲಿಬಿಲಿಯುಂಟಾಗಿಸುವ ಸಂಭವ ಬಹಳ, ಸಣ್ಣ ಅಕ್ಷರಗಳ ಮುದ್ರಣದಲ್ಲಿ ಭೇದಪಡಿಸಿ ಓದಲಿಕ್ಕೂ ಪ್ರಯಾಸ—ಮುಖ್ಯವಾಗಿ ಅ-ಆ, ಚೆ-ಜಿ, ಠ-ರ, ಥ-ಧ, ಪ-ಷ. ಹಸ್ತಲೇಖನಗಳಲ್ಲಿ ಆ ಎಂಬುದನ್ನು ಅಾ ಎಂದು ಬರೆಯುವುದೂ ಉಂಟು, ಇದು ಒಳಿತು, ಅಥವಾ ಆ ಎಂಬುದರ ಅಡ್ಡಗೆರೆಯನ್ನು ಮುದ್ರಣದಲ್ಲಿ ಸ್ವಲ್ಪ ವಕ್ರವಾಗಿ ಕೆಳಗಿಳಿಸಬಹುದು. ಬೇಕೆಂದರೆ, ಉಳಿದುವುಗಳನ್ನೂ ಬೇರೆ ಬೇರೆ ವಿಧವಾಗಿ ಭೇದಪಡಿಸಬಹುದು.

9. ಕಾಗುಣಿತಾಕ್ಷರಗಳನ್ನೂ ದೀರ್ಘಸ್ವರಸಂಜ್ಞೆಗಳನ್ನೂ ಮುಟ್ಟುವ ಆವಶ್ಯಕತೆ ತೋರುವುದಿಲ್ಲ. ಬಾಲವಿಲ್ಲದ ಮಹಾಪ್ರಾಣಗಳು ಇದ್ದಂತೆ ಇರಲೇ? ಮಹಾಪ್ರಾಣ ಘಕಾರ ಸ್ವಲ್ಪ ಘೋರವಿದೆ ಸರಿ; ಗಕಾರವನ್ನು ಸ್ವಲ್ಪ ಭೇದಪಡಿಸಿ ಬರೆಯಬಹುದು. ಬೇಕೆಂದರೆ, ಛ ಎಂಬುದು ಚ ಆಗಲಿ, ಝ-ಜ, ಠ-ಟ, ಥ-ತ. ಅರ್ಕಾ ಒತ್ತು ಬೇಡವಾದರೆ ಬೇಡ. ರ ಒತ್ತು ಅರ್ಧ ರಕಾರವಂತೆಯೇ ಇದ್ದುದು ಹಾಗೇ ಇರಲಿ-ಕೆಲವೊಂದು ಒತ್ತುಗಳನ್ನು ಮಾರ್ಪಡಿಸಿದರೆ ಬರೆಯಲಿಕ್ಕೆ ಶ್ರಮವಿಲ್ಲವೇ? ತಲೆಕಟ್ಟು ತೆಗೆದು ಒತ್ತುಗಳನ್ನಾಗಿ ಮಾಡಿಸುವ ಶ್ರಮ ಕಂಡೇ ಪೂರ್ವಜರು ಈ ಕೆಲವು ಒತ್ತುಗಳನ್ನು ಈಗಿನ ರೀತಿಯಾಗಿ ಬರೆಯಲು ನಿರ್ಧರಿಸಿರಬಹುದು.

10. ಲಿಪಿಸಂಸ್ಕರಣದ ಉತ್ಸೇಗ ಏಕೀಗ? ಅದು ಬೇರೆ ಯಾವ ಭಾಷೆಯಲ್ಲೂ ಉದಾತ್ತವಾಗಿ ನಡೆಯುವಂತೆ ತೋರುವುದಿಲ್ಲ. ಶತಮಾನಗಳ ಕಾಲ ಅಲ್ಲಲ್ಲಿ ಮಾತ್ರ ಜೀವಕಳೆಯಿದ್ದು ಒಣಗಲಿಕ್ಕಾದ ಕನ್ನಡದ ಬಳ್ಳಿಗೆ ತುಸ ನೀರು ಹೊಡೆದು ಬದುಕಿಸ ತೊಡಗಿದುದು ಈಗತಾನೆ. ಬುಡಕ್ಕೆನೆ ಕೈಹಾಕಿ ಈಗಲೆ ಬೇರು ಪರೀಕ್ಷಿಸುವ ಉದ್ಯಮವೇನು? ಒಣಗಿ ಸಾಯುವಂತಿದ್ದರೆ ಸುಮ್ಮನೆ ನೀರೆರೆಯುವ ಶ್ರಮವೇಕೆಂದೇ? ಲಿಪಿಯ ಬಹುಸಂಸ್ಕರಣದಿಂದ ಸಿಗುವ ಫಲವು ಅಲ್ಪ, ಅನನುಕೂಲತೆಗಳು ಬಹಳ. ತನ್ನಂತೆ ಒಂದೊಂದಾಗಿ ಗದ್ದಲವಿಲ್ಲದೆ ಆಗುವುದಾದರೆ ಆಗಲಿ, ಅಲ್ಲಲ್ಲಿ ನಮ್ಮ ಕೈಕೊಡಲಿಕ್ಕೂ ಬೇಕು. ವ ಮ ಎಂಬ ಅಕ್ಷರಗಳ ಪೀಠಗಳನ್ನು ಮುದ್ರಣದ ಸಣ್ಣ ಟೈಪುಗಳಲ್ಲಿ ಮಾರ್ಪಡಿಸಲಿಲ್ಲವೇ?

11. ಕನ್ನಡ ಲಿಪಿಯಂತೆ ಸುಂದರವಾದುದು ಬೇರೆ ಇಲ್ಲ. ಇದಕ್ಕೆ ವೃತ್ತಾಂಶರಚನೆಯೆಂಬೊಂದೆ ಕಾರಣವಲ್ಲ, ಅಂತಹ ಲಿಪಿಗಳು ಬೇರೆ ಇವೆ. ಎಷ್ಟು ಸಣ್ಣದಾಗಿಯೂ ಬರೆಯಲೂ ಟೈಪು ಮಾಡಲೂಬಹುದು, ಸ್ಪಷ್ಟವಾಗಿ ತೋರುವುದು. ಇದು ದೇವನಾಗರಿಯಲ್ಲಿ ಸಾಧ್ಯವಿಲ್ಲ. ಕನ್ನಡ ಅಕ್ಷರಗಳನ್ನು ಸರಪಳಿ ಜೋಡಿಸುವುದಕ್ಕೆ ಸುಲಭ. ಹೊಸ ಪದ್ಧತಿಯಿಂದ ಇದು ಪ್ರಯಾಸವಾಗುವಂತಿದೆ. ಲಿಪಿಸಂಸ್ಕರಣವನ್ನು ಬರಲಿರುವ ತಲೆಗಳಿಗೆ ಬಿಡೋಣ. ಅವರಿಗೆ ಬಹಳ ಕೆಲಸವಿರಲಿಕ್ಕಿಲ್ಲ. ಸಂಸ್ಕರಣವು ಬೇಕೆ ಬೇಡವೆ ಎಂಬುದನ್ನು ಅವರು ತೀರ್ಮಾನಿಸಲಿ. ಸಾಹಿತ್ಯವನ್ನು ವರ್ಧಿಸಲಿಕ್ಕೆ ಏನೊಂದೂ ಮಾಡಬೇಕೆಂದಿದ್ದರೆ ಅಕ್ಷರನ್ಯಾಸ (Spelling)ದ ಮತ್ತು ವಾಕ್ಯರಚನೆ (Syntax)ಯ ಮೇಲೆ ಸ್ವಲ್ಪ ದೃಷ್ಟಿಯಿಡೋಣ.

12. ಇಂಗ್ಲಿಷಿನಲ್ಲಿ ಅಕ್ಷರನ್ಯಾಸವು ಸ್ಥಿರತೆಯನ್ನು ಹೊಂದಿರುವುದು. ಒಂದು ಪದದ ನ್ಯಾಸವು ಹೀಗೆಂದರೆ ಬೇರೆ ರೀತಿ ಹೆಚ್ಚುಕಡಮೆ ಎಂದೂ ಆಗದು. ಕನ್ನಡದಲ್ಲಿ ಒಂದು ಶಬ್ದವನ್ನು ಅರ್ಥ ಊಹಿಸಲಾಗುವಂತೆ ಬರೆದರಾಯ್ತು, ಬೇರೆ ನಿಬಂಧನೆಯಿಲ್ಲ. ಹಸ್ತಲೇಖನಗಳಲ್ಲಿ ಇದು ಪ್ರತ್ಯಕ್ಷ. ಸಾಹಿತ್ಯವೆನ್ನುವುದರಲ್ಲಿ ಅಷ್ಟಿಲ್ಲದಿದ್ದರೂ ಕಣ್ಣಿಗೆ ಹೊಡೆಯುವಷ್ಟು ಇದ್ದೇ ಇದೆ. ವಾಕ್ಯರಚನೆಯೂ ಆ ರೀತಿಯೇ. ಮಂಗಳೂರ ಕನ್ನಡ, ಮೈಸೂರ ಕನ್ನಡ, ಧಾರವಾಡ ಕನ್ನಡ; ಒಬ್ಬೊಬ್ಬರು ತಮ್ಮದು ಶುದ್ಧ, ಇನ್ನೆರಡು ಅಶುದ್ಧ, ಎನ್ನುವರು. ಇದು ಹೇಗೋ ಪರಮಾತ್ಮನೇ ಬಲ್ಲ. ಮೂಲವ್ಯುತ್ಪತ್ತಿ ಕಂಡು ಹಿಡಿಯುವಂತಿದ್ದರೆ ತರ್ಕಕ್ಕೆ ಆಧಾರವಿರಬಹುದು. ಇದನ್ನು ಶೋಧಿಸುವುದುತ್ತಮ. ವಾಕ್ಯರಚನೆಯು ಶೈಲಿಸರಣಿಗಳಿಗೆ ಸಂಬಂಧ ಪಟ್ಟಿರುವುದು; ವ್ಯಕ್ತಿತ್ವವಿರಲೇ ಬೇಕು, ಇದ್ದರೆ ಒಳ್ಳಿತಲ್ಲದೆ ಕೆಡಕಿಲ್ಲ, ಆದರೆ ಪ್ರಾಂತಿಕವಾಗಿರಬೇಕೆಂದಿಲ್ಲ. ಕರ್ಣಾಟಕದ ಏಕೀಕರಣವು ಬಾಯ್ಮಾತಿನ ಉಪಚಾರಕ್ಕೆ ಮಾತ್ರವಲ್ಲ, ಕಾರ್ಯದ ಸಾರ್ಥಕತ್ವಕ್ಕೆ ಇರಬೇಕು.

ಯಕೃತ್ತಿನ ರೋಗಗಳಿಗೆ ಔಷಧಗಳು ಅನೇಕ ಇವೆ; ಆದರೆ ಅವೆಲ್ಲ ರೋಗಗಳನ್ನು ಗುಣಪಡಿಸಬಲ್ಲ ಔಷಧವು ಒಂದೇ

ಈ ಔಷಧವನ್ನು 'ಸಂಜೀವಿನಿ'ಗೆ ಸಮಾನವೆಂತಲೂ, ಈ ಔಷಧವನ್ನು ಕಂಡುಹಿಡಿದವರನ್ನು ಪ್ರತ್ಯಕ್ಷ 'ಮೃತ್ಯುಂಜಯ'ನೆಂತಲೂ ಜನರು ಕರೆಯುತ್ತಾರೆ.

ಈ ಔಷಧವು 'ಸ್ವರ್ಗೀಯ'ವೆಂತಲೂ, ಅದು ತನ್ನ ಒಳ್ಳೆಯ ಹೆಸರನ್ನು ನ್ಯಾಯವಾಗಿ ಸಂಪಾದಿಸಿದೆ ಎಂತಲೂ ಜನರು ಆಡುತ್ತಾರೆ. ಗುಣಪಡಿಸುವಲ್ಲಿ ಅದು ಯಶಸ್ವಿಯಾಗಿದೆ. ಅದರಿಂದ ಗುಣವಾಗುವುದು ಖಂಡಿತ.

ಆ ಔಷಧವು,—

ಲಿವರ್‌ಕ್ಯೂರ್ (ರಿಜಿಸ್ಟರ್ಡ್)

ಮತ್ತೂ ಯಕೃತ್ತು ಹಾಗೂ ಪ್ಲೀಹಗಳ 'ಸ್ಪೆಶಲಿಸ್ಟ್' ಜಮ್ಮಿ ವೆಂಕಟರಮಣಯ್ಯನವರ ಸುಪ್ರಸಿದ್ಧವಾದ ಗುಣಕಾರಿ ಔಷಧ.

ಮೈಲಾಪುರ, ಮದ್ರಾಸು. } ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್, ಬೆಂಗಳೂರು ಸಿಟಿ. { ಹ್ಯಾರಿಸನ್ ರೋಡ್, ಕಲ್ಕತ್ತಾ.

ESTD. 1925.

THE CANARA
Industrial & Banking Syndicate, Ltd.

(INCORPORATED IN BRITISH INDIA.)

Head Office:-UDIPI.

Authorised Capital	....	....	Rs. 5,00,000/—
Subscribed Capital	....	....	,, 2,86,500/—
Paid-up Capital	....	....	,, 2,16,500/—
Reserve & other funds	....	....	,, 52,500/—
Depisits exceed	....	....	,, 14,82,000/—
Working Capital Exceeds	....	....	,, 22 lakhs.

ANNOUNCEMENT

The 21st Branch of the Syndicate will be opened on Tuesday the 23rd July 1936 at

GADAG

where every facility will be given to customers to transact all kinds of Banking business at very remunerative rates.

2, 14-7.

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ರಿಜಿಸ್ಟರ್ಡ್

ಪ್ರೇಡ್‌ಮಾರ್ಕ್.

ಡಾ. ವಾಮನ್ ಗೋಪಾಲರ

ನಸ್ಯ ಪೌಡರ್

೬ ಪರ್ಷಗಳ ಅನುಭವದಿಂದ ತಿಳಿದುಬಂದಿರುವ ತಲೆನೋವು, ರಕ್ತ ಸುಸ್ತಿಕಾರಕ ಔಷಧಿಗಳಲ್ಲಿ ಇದೇ ಉತ್ತಮವೆಂದು ಕಂಡೂಕ್ತವಾಗಿ ಹೊಗಳುತ್ತಿರುವ ಡಾ! ಗೌತಮರಾವ್ ಕೇಶವರಾವ್‌ರವರ ಹೊಸಾ ಪುಸ್ತಕಗಳನ್ನೊಮ್ಮೆ ನೋವಿಸಿ ನೋಡಿ.

ಡಾ! ಗೌತಮರಾವ್ ಕೇಶವ್ ಎಂಡ್ ಸನ್, ಥಾಕೂರ್‌ದ್ವಾರ್ 2, ಬೊಂಬಾಯಿ.

ವೆಂಕಟಗಿರಿ ಮುದ್ರಾತ್ಮ

೫೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ಶ್ರೀಕಳಹೇಶನು ಗಿರಿಯಲ್ಲಿ ನಡೆಸಿದ ಆಶ್ಚರ್ಯಕರ ಕಾರ್ಯಗಳು ವಾಚಕರಿಗೆ ಪುನಃಪುನಃಚಿತವಾಗುವಂತೆ ಗ್ಲೇಜ್ ಕಾಗದಪಟ್ಟಿ ೧೪ ಹಾಫ್ ಟೋನ್ ಚಿತ್ರಗಳಿಂದ ಕೂಡಿದೆ.

ಮುದ್ರಾಂಕಿತ ಮುದ್ರಣ.

ಬೆಲ್ಲೆ ರೂಪಾಯಿ ೧—೪—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮ ಕೃಷ್ಣಯ್ಯನವರಿಂದ ಭಾಷಿನಿ ಪಟ್ಟಣದಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಪಂಡಿತರಿಗೂ ಅನುನಿತ್ಯ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಗುಪ್ತಮಂತ್ರ

100 ರೂಪಾಯಿಗಳ ಬಹುಮಾನ.

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಧಿಸಬೆ ಕೆಲಸಗಳು ಈ 'ಮಂತ್ರ'ದ ಏಳು ಬಾರಿಯ ಪುನರುಚ್ಚಾರಣೆಯಿಂದಲೇ ಸಾಧ್ಯವಾಗುವುವು. ಅದರ ಪರಿಣಾಮವು ನೆಟ್ಟಗಾಗುವಂತೆ ಮಾಡಲು ನೀವು ಸ್ವಲ್ಪವೂ ಕಷ್ಟಪಡಬೇಕಾಗಿಲ್ಲ. ಯಾವ ಸಿದ್ಧತೆಯೂ ಇಲ್ಲದೆ ಅದು ಒಳ್ಳೆಯ ಫಲ ಕೊಡುವುದು. ಆಕೆ ಎಷ್ಟೇ ಕಠಿನ ಮನಸ್ಸಿನವಳಾಗಿಯೂ, ಗರ್ವಿಷ್ಠೆಯಾಗಿಯೂ ಇರಲಿ! ಈ ಮಂತ್ರವನ್ನು ಓದಿದಾಗ ಅವಳಲ್ಲಿ ನಿಮ್ಮ ಮೇಲಿನ ಮಮತೆಯುಂಟಾಗಿ, ನಿಮ್ಮೊಡನೆಯೇ ಯಾವಾಗಲೂ ಇರಬೇಕೆನ್ನುವ ಹಂಬಲು ಹುಟ್ಟುವುದು. ಇದಕ್ಕೆ 'ವಶೀಕರಣ ಮಂತ್ರ'ವೆನ್ನುವರು. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುವುದು, ನಿಮಗೆ ಕೆಲಸವನ್ನೂ 'ಎಡ್ವಾನ್ಸ್'ನ್ನೂ ಕೊಡಿಸುವುದು; ವ್ಯಾಜ್ಯ ವ್ಯವಹಾರಗಳಲ್ಲಿ ನೀವು ಗೆಲ್ಲುವಂತಾಗುವುದು; ವ್ಯಾಪಾರದಲ್ಲಿ ನಿಮಗೆ ಲಾಭ ಬರುವುದು. ಇದು ಸುಳ್ಳೆಂದು ರುಜುವಾತಾದಲ್ಲಿ ನಿಮಗೆ ನಷ್ಟ ಬಹುಮಾನ—ರೂ. 100! ಪೋಸ್ಟೇಜ್ ಕೂಡ ಬೆಲೆ ರೂ. 2—7—0. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Siddha Manthra Ashram,
No. 174, P. O. Katri Sarai. (GAYA.)

ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದ್ಯಗಳೂ ಮತ್ತು ಮರಾಠಿ ನಾಟಕದೊಳಗಿನ ಪದ್ಯಗಳು, ಹಿಂದೂಸ್ಥಾನೀ ಭೈರವಿಗಳ ಗ್ರಾಮೋಫೋನ್‌ನಲ್ಲಿ ಕೊಟ್ಟ ಪದ್ಯಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ. ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೫ ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK.
Fort MIRAJ, (S.M.C.)

ಪದವಿಗಳು! ಔಷಧಗಳು! ಪುಸ್ತಕಗಳು!

ಎಚ್. ಎಲ್. ಎಂ. ಎಸ್. ಎಚ್. ಎಂ. ಬಿ., ಎಚ್. ಯಂ. ಡಿ., ವೈದ್ಯರಾಜ ಮೊದಲಾದ ಹೋಮಿಯೋ-ಆಯುರ್ವೇದ, ಯುನಾನಿಗಳಲ್ಲಿ ಟಪ್ಪಾಲಿನ ಮೂಲಕ ಬೋಧನೆ ಪಡೆಯಬಹುದು. ಡಿಗ್ರಿಗೆ ಪ್ರತಿಫಲ ಕೊಡಬೇಕಾಗಿಲ್ಲ. ಹೋಮಿಯೋ-ಮೆಟೀರಿಯ ಮೆಡಿಕ ಇದರ ಬೆಲೆ ರೂ. 5. ಹೋಮಿಯೋ ಪ್ರಾಕ್ಟಿಸ್ ಓಫ್ ಮೆಡಿಸಿನ್ ಬೆಲೆ ರೂ. 4-೨ ಆಣೆಯ ಸ್ಟ್ಯಾಂಪುಗಳನ್ನಿಡಿರಿ.

ಇಂಡಿಯನ್ ಹೊಮಿಯೋಪೆತಿಕ್ ಇನ್ಸ್‌ಟಿಟ್ಯೂಟ್ ಮತ್ತು ಸೊಸ್ಯಾಟಿ (ರಿಜಿಸ್ಟರ್ಡ್),
ಪೋಸ್ಟು ಸಬರ್ಮತಿ, ಅಹಮ್ಮದಾಬಾದ್, (ಇಂಡಿಯಾ).

ಇದೀಗ ನಿಮಗೆ ಒಳ್ಳೆಯ ಸುಸಂದರ್ಭ!

ಇಂದಿನ ನಮೂನೆ! ಇಂದಿನ ಮ್ಯಾಲು!! ಇಂದಿನ ಕ್ರಯ!!!

ನಮ್ಮಲ್ಲಿ ಬೆನಾರಸ್, ಬೆಂಗಳೂರು, ಕೋಂಬೀಪುರಂ, ಹುಬ್ಬಳ್ಳಿ ಇಲಕಲ್ಲು, ಪುಲ್ಲಂಪೇಟು, ಪೋಂಡಿಚೇರಿ, ಬಡೋದೆ ವಗೈರೆ ಪ್ರಸಿದ್ಧ ಊರ ಹೊಸ ನಮೂನೆಯ ಸೀರೆಗಳು ಈಗಲೇ ಬಂದಿರುತ್ತವೆ ತಮ್ಮಲ್ಲಿ ನೆರವೇರುವ ಶುಭಕಾರ್ಯಗಳಿಗೆ ಬೇಕಾಗುವ ಜವುಳಿಯನ್ನು ಈಗಲೇ ಬಂದು

ನೋಡಿರಿ! ಪಡೆಯಿರಿ!! ಆನಂದ ಪಡೆಯಿರಿ!!!
ಹೊಸ ನಮೂನೆ! ಹೊಸ ಮ್ಯಾಲು!! ದರ ಅತೀ ಸುಲಭ!!!

ವಿ. ಸೂ.—ಒಮ್ಮೆ ಮುಂಚಿತವಾಗಿ ನಮ್ಮಲ್ಲಿ ಬಂದು ನೋಡಿದರೆ ಆಗ ತಮಗೆ ತಾನೆ ಸಮಾಧಾನವಾದೀತು.

ಸೂಜೀಕಾರ್ ಬ್ರದರ್ಸ್, ಜವುಳಿ ವ್ಯಾಪಾರಿಗಳು,

ಮಾರ್ಕೆಟು ರಸ್ತೆ, ಮಂಗಳೂರು, ದ. ಕ.

ಸ್ತ್ರೀಯರಿಗೆ ಯಾವ ಬಗೆಯ ಶಿಕ್ಷಣವು ಅಗತ್ಯವಿದೆ?

(ಲೇಖಕ:—ಶ್ರೀ. ಯ. ನಾ. ವಿಶ್ವಾಮಿತ್ರ)

ಸ್ತ್ರೀಯೆಂದರೆ ಹಳ್ಳಿಗಳಲ್ಲಿ ಬಹಳ ತಾತ್ಸಾರ. ಕಾರಣ, ಸ್ತ್ರೀ ಜನ್ಮವೇ ವಿಶೇಷ ಪಾಪಸಂಗ್ರಹದಿಂದಾದುದೆಂದೂ, ಅದರಲ್ಲೂ ವಿಧವೆಯರೆಂದರೆ ಮಹಾ ಪಾಪಿಗಳೆಂದೂ, ಅವರ ಮುಖವನ್ನು ಮುಂಜಾನೆ ಕಂಡರೆ ಅನ್ನಕ್ಕೇ ಸೊನ್ನೆ ಸುತ್ತುವುದೆಂದೂ ಜನರು ಆಡಿಕೊಳ್ಳುವುದುಂಟು. ಇದನ್ನು ಕೇಳಿದಲ್ಲಿ ಹಳ್ಳಿಗರು ಸ್ತ್ರೀಯರನ್ನು ಯಾವ ಭಾವನೆಯಿಂದ ನಡೆಸುವರೆಂದೂ ತಿಳಿಯುವುದು. ಗಂಡನು ತನ್ನ ಹೆಂಡತಿಯನ್ನು ಯಾವ ತರದಿಂದ ಶಿಕ್ಷಿಸಿದರೂ ಜನತೆಗೆ ಅವನು ಶಾಸ್ತ್ರಾಧಾರವನ್ನು ತೋರಿಸಬಲ್ಲನು. ಸ್ತ್ರೀಯಳು ಗಂಡನಿಂದ ನಕ್ಷತ್ರಕನ ಹಿಂಸೆ ಹೊಂದಿದರೂ ಮೂಕಳಾಗಿದ್ದು ಗಂಡನ ಎಂಜಲೆಲೆಯಲ್ಲೆ ಹೊಲತಿಯಂತೆ ಉಣ್ಣಬೇಕೆಂಬ ಶಾಸ್ತ್ರದ ವಾಕ್ಯಗಳನ್ನೂ ಉದಾಹರಿಸಬಲ್ಲನು. ಇದು ಹಳ್ಳಿಯ ವಿಚಾರವಾಯಿತು. ಪಟ್ಟಣದಲ್ಲಿ, ಪುರುಷನಷ್ಟೇ ಸ್ತ್ರೀಗೂ ಸ್ವಾತಂತ್ರ್ಯ ಬೇಕೆಂಬ ಚಳವಳಿಯೆದ್ದಿದೆ. ಇದರಿಂದ ಸ್ತ್ರೀಯರು 'ಗಂಡುಬೀರಿ'ಗಳಾಗಿ, ಪುರುಷ—ನಾರೀ, ಇವರ ಸಮಾನತೆಯ ಫಲವಾಗಿ ಪತಿತರಾಗಿ ಅಧೋಗತಿಯನ್ನು ಸೇರುತ್ತಿರುವರು. ಹಳ್ಳಿ—ಪಟ್ಟಣಗಳ ಸ್ತ್ರೀಜೀವನದ ವಿಚಿತ್ರ ದೃಶ್ಯಗಳ ಕಾರಣವೇನು? ಯೋಗ್ಯ ಶಿಕ್ಷಣದ ಅಭಾವ. ಹಳ್ಳಿಗಳಲ್ಲಿ ಸ್ತ್ರೀಯರನ್ನು ಹೋರಿನಲ್ಲಿ ಬೆಳೆಯುವ ಇಲಿಯಂತೆ ಬೆಳೆಸುವರು. ಪಟ್ಟಣದಲ್ಲಿ ಬೀದಿಯ ನಾಯಿಯಂತೆ ಸಾಕುವರು.

ಕೆಲವು ವಿದ್ವಾಂಸರು ಸ್ತ್ರೀಯರಿಗೆ ವಿದ್ಯಾದಾನ ಮಾಡಿದರೆ ಕೈವಿೂರಿ ಹೋಗುವಳೆಂದು ಅನೇಕ ಉದಾಹರಣೆಗಳನ್ನು ಕೊಡುವುದುಂಟು. ಇದು ತಪ್ಪೆಂದು ಮೋರೆ ತಿರುಗಿಸಲು ಸಾಧ್ಯವಿಲ್ಲ. ಕಾರಣ, ಸ್ತ್ರೀಯರಿಗೆ ಇಂದು ಕೊಡುವ ಶಿಕ್ಷಣವು ತಿರಸ್ಕಾರಾರ್ಹವಾದುದು. ಸಮಾಜರಥದ ಗಾಲಿಗಳಾದ ಸತಿಪತಿಯರಿಬ್ಬರೂ ಒಂದೇ ತರದ ವಿದ್ಯಾಭ್ಯಾಸದಿಂದ ದೊಡ್ಡ ನೌಕರಿಯನ್ನು ಸೇರಿದರೆ ಹಣವನ್ನು ಹೇರಳ ಕೂಡಿಸಬಹುದು. ಆದರೆ ಹಣವೇ ಸುಖಕ್ಕೆ ಸಾಧನವಲ್ಲವೆಂಬುದು ಸತ್ಯವಷ್ಟೆ! ಹಣವು ಒಳಗೆ ರಾಶಿ ಬಿದ್ದರೂ, ತನ್ನ ಪತ್ನಿಯಲ್ಲಿ ಇರಬೇಕಾದ ಮುಖ್ಯ ಗುಣವು ಲೋಪವಾಗಿದೆಯೆಂದು ಸೊರಗುವ ನನ್ನ ಮಿತ್ರರೊಬ್ಬರನ್ನು ನಾನು ಕಂಡುದುಂಟು. ಹಾಗಾದರೆ, ಆ ಸ್ತ್ರೀಯಲ್ಲಿ ದೋಷವುಂಟಾಗಲು ಕಾರಣವೇನು? ಇಂದಿನ ವಿದ್ಯಾಭ್ಯಾಸದ ದೋಷವೇ.

ಸ್ತ್ರೀಯರಿಗೆ ಅಲಂಕಾರವಾದುದು ಬಿಳಿಯ ಚರ್ಮವಲ್ಲ; ತುಂಬಿದ ಮೈಯಲ್ಲ; ಮಿಂಚುವ ಕಣ್ಣೂ ಅಲ್ಲ. ಲಜ್ಜೆ, ಬಾಮು(?) ಗೃಹಲಕ್ಷ್ಮಿಯಂತೆ ನಗುಮೊಗದಿಂದಿರುವಿಕೆ, ಸಂಸಾರನೌಕೆಯನ್ನು ಸುಲಭದಲ್ಲಿ ನಡೆಸುವ ರೀತಿ, ತುಸು ವೈದ್ಯ, ಸಂಗೀತ, ಶಿಶುರಕ್ಷಣದ ವಾರ್ಗ, ಗೃಹಕೃತ್ಯ, ನೈರ್ಮಲ್ಯ, ಹಿರಿಯರಲ್ಲಿ ವಿಧೇಯತೆ, ತೋಟಗಾರಿಕೆ, ಕಸೂತಿ ಮೊದಲಾದುವುಗಳ ಚಿರ ಪರಿಚಯ ವಿದ್ದರೆ ಆ ಗಂಡನು ಧನ್ಯನೆನಿಸಿಕೊಳ್ಳುವನು; ಅವನ ಸಂಸಾರವು ಸಂಸಾರವೇ ಆಗುವುದು. ಅವನಿಗೆ ಪ್ರಾಪಂಚಿಕದಿಂದ ಪಾರಮಾರ್ಥಿಕದ ಕಡೆಗೆ ಹೊರಳಲು ಸಾಧ್ಯವಾಗುವುದು. ಗೃಹಿಣಿಯೂ, ಒಮ್ಮೆ ಪತಿಯು ಮೋಹಾಂಧನಾಗಿ ದಾರಿತಪ್ಪುವ ಸಂಭವ ಕಂಡಲ್ಲಿ ಅವನನ್ನು ದಾರಿಗೆ ಎಳೆಯುವ ಚಮತ್ಕಾರವೂ ದರ್ಶನೀಯವಾದುದು. ಇಂಥ ಮಹಾನುಭಾವನ ಸಂಸಾರವು ಚಿನ್ನಕ್ಕೆ ಪರಿಮಳವುಂಟಾದಂತೆ ಶ್ರಾವ್ಯವಾದುದು. ಬಿ. ಏ., ಎಂ. ಏ. ಮೊದಲಾದ ಪರೀಕ್ಷೆಗಳಲ್ಲಿ ಪಾಸಾದ ಹೆಂಗುಸು 'ಗೃಹಿಣಿ' ಎಂಬ ಅನ್ವರ್ಥನಾಮವನ್ನು ಪಡೆದುದನ್ನು ನನ್ನ ಕಿವಿಯಿಂದ ಈ ವರೆಗೂ ನಾನು ಕೇಳಿಲ್ಲ. ಯೋಗ್ಯ ಗೃಹಿಣಿಯಾದ ಹೊರತು ಆ ಸ್ತ್ರೀಯಿಂದ ಪುರುಷನಿಗಾಗಲೀ, ಗೃಹಕ್ಕಾಗಲಿ ಸುಖವಿಲ್ಲ; ಗೌಲವಿಲ್ಲ. ಅಂಥ ಸ್ತ್ರೀಯು ಗರತಿಯಾಗಿಯೇ ಬಾಳುವಳೆಂಬ ನಿಯಮವಿಲ್ಲ. ಕಾರಣ, ಸ್ತ್ರೀಗೆ ಪುರುಷನೂ, ಪುರುಷನಿಗೆ ಸ್ತ್ರೀಯರೂ ಪ್ರಬಲ ವಿಕಾರವಸ್ತುಗಳು. ಮಹರ್ಷಿ ವಿಶ್ವಾಮಿತ್ರ, ಪರಾಶರರಂಥವರು ದೃಷ್ಟಿಮಾತ್ರದಿಂದಲೇ ತಪೋಭಂಗ ಮಾಡಿಕೊಂಡರು. ಇಂದಿನ ವಿದ್ಯಾಭ್ಯಾಸದ ಪರಿಣಾಮವಾಗಿ, ಸ್ತ್ರೀ ಪುರುಷರು ತೆಕ್ಕೆತೆಕ್ಕೆಯಾಗಿ ತಿರುಗಲಾರಂಭಿಸಿರುವಾಗ ಅವರ ಜೀವನವೇ ಮಣ್ಣುಪಾಲಾಗುವುದೆಂದು ಬೇರೆ ಹೇಳಬೇಕೆ? ನಾಗರಿಕ ಸ್ತ್ರೀಯರಿಂದು ದಿಂಡೆಯರಾಗುತ್ತಿರುವರು—ಆಗಿರುವರು. ಇದರ ಪರಿಣಾಮದಿಂದ ಅವರು ಆತ್ಮಪತಿತರಾಗುವುದಲ್ಲದೆ, ಪತಿಗೆ ವಿವಾಹಕಾಲದಲ್ಲಿ ಮಾಡಿದ ವಾಗ್ದಾನವನ್ನು ಮರೆತು (ಗಂಡಸರಿಗೂ ಅನ್ವಯಿಸುವುದು) ವಂಚಕರಾಗುವರು. ಇಂಥ ವಂಚಕ ಸ್ತ್ರೀಪುರುಷರಿಂದ ಸನಾತನ ಪುಣ್ಯಭೂಮಿಯು ತುಂಬುತ್ತಿದೆ—ತುಂಬಿದೆ.

ನಮ್ಮ ದೇಶದ ಧರ್ಮವನ್ನು ಲಕ್ಷಿಸಿಯೇ ಪೂರ್ವದ ಋಷಿಗಳು ಪುರುಷರ ಕರ್ಮಗಳನ್ನೂ, ಸ್ತ್ರೀಯರ ಧರ್ಮವನ್ನೂ ಪ್ರತ್ಯೇಕ ವಿಭಾಗಿಸಿದ್ದರು. ಆ ಕಾಲದಲ್ಲೇ ಜನ್ಮಿಸಿ ಯಶಶ್ಶರೀರಿಗಳಾದ ಸೀತಾ, ದ್ರೌಪದಿ, ಸಾವಿತ್ರಿ, ಮೈತ್ರೇಯಿ ಮೊದಲಾದ ಆದರ್ಶಸ್ತ್ರೀಯರು ಯಾವ ವಿದ್ಯಾಲಯಗಳಲ್ಲೂ ಸರ್ಟಿಫಿಕೇಟು ಹೊಂದಿದವರಲ್ಲ. ಮೊನ್ನೆ ತಾನೇ ಹೋದ ಭಗವಾನ್ ರಾಮಕೃಷ್ಣರ ಪತ್ನಿ ಶಾರದಾವೇಣಿಯು ಯಾವ ಕೊಲೇಜಿನಲ್ಲಿ ಪಾಸಾಗಿದ್ದಳು? ಹಿಂದಿನ ಸ್ತ್ರೀಯರನ್ನು ದೊಡ್ಡ ಡಿಗ್ರಿ ಪಡೆದ ಇಂದಿನ ಸ್ತ್ರೀಯರು ತಿರಸ್ಕರಿಸುತ್ತಿದ್ದರೆ ಇವರು ಮಾಡಿದ ಮಹತ್ಕಾರ್ಯಗಳೇನು? ಅವುಗಳ ಫಲಿತಾಂಶವೇನು? ವಾಚಕರೆ! ಇತಿಹಾಸ ಯುಗದ ಅಹಲ್ಯಾಬಾಯಿಯನ್ನೊಮ್ಮೆ ಸ್ಮರಿಸಿರಿ. ಇದರಿಂದ ಮನಸ್ಸಿಗೆ ಹೊಳೆಯುವುದೇನು? ಸ್ತ್ರೀ-ಪುರುಷರ ವಿದ್ಯಾಭ್ಯಾಸದಲ್ಲಿ ಭಿನ್ನತೆ ಇರಬೇಕೆಂದಲ್ಲವೇ? ಪ್ರತಿಯೊಂದು ಸ್ತ್ರೀಯನ್ನೂ ಯೋಗ್ಯ ಗೃಹಿಣಿಯಾಗಲು ತರಬೇಯತ್ತು, ಮಾಡುವ ವಿದ್ಯೆಯೇ ಸ್ತ್ರೀಯರಿಗೆ ಅತ್ಯಾವಶ್ಯಕವಾದುದು. ಈ ವಿದ್ಯಾಮಂದಿರವೂ ಪಟ್ಟಣದಿಂದ ದೂರದಲ್ಲಿದ್ದು, ಪುರುಷರ ದೃಷ್ಟಿಗೆ ಮರೆಯಾಗಿರಬೇಕು. ಅಂಥಾ ವಿದ್ಯಾಲಯಗಳಲ್ಲಿ ಕನ್ನಡ, ಸಂಸ್ಕೃತ, ಹಿಂದಿ ಇವುಗಳ ಸಾಹಿತ್ಯಜ್ಞಾನವನ್ನೂ ಸ್ವಲ್ಪ ಉಣ್ಣಿಸಬಹುದು. ಮಾನ್ಯ ಸರಕಾರವು ಈ ಕಡೆಗೆ ದೃಷ್ಟಿಯನ್ನೇಕೆ ಹಾಯಿಸಬಾರದು? ವಾಚಕರೇ! ನನ್ನ ಅಭಿಪ್ರಾಯವು ನಿಮಗೆ ಸಮ್ಮತವಷ್ಟೆ!

ಹೆಂಗಸರಿಗಾಗಿ

ಸ್ತ್ರೀಧರ್ಮರಹಸ್ಯದ ಸಾರ.

ಭಾರ್ಯಾ ಅಥವಾ ಸದ್ಗೃಹಿಣಿಯು, ಭಿಕ್ಷುಕಿ, ಸ್ವೇಚ್ಛಾಚಾರಿಣಿ, ಯೋಗಿನಿ, ವ್ಯಭಿಚಾರಿಣಿ, ಕುಹಕಿ, ಪರಭಿದ್ರಾನ್ವೇಷಿಣಿ, ಕಲಹಪ್ರಿಯಳು, ಈ ಎಲ್ಲಾ ತರದ ಸ್ತ್ರೀಯರೊಡನೆ ಸ್ನೇಹವನ್ನು ಮಾಡಬಾರದು.

ಹಟವಾದಿಗಳು, ಧೂರ್ತರು, ಹೊಟ್ಟೆಬಾಕರು, ಕಳ್ಳರು, ದುಷ್ಟರು, ಚಪಲರು ಇಂಥವರು ನಿನ್ನಿಂದ ತ್ಯಜಿಸಲ್ಪಡಲಿ; ಸತ್ಕುಲ ಪ್ರಸೂತರು, ಪಾಪರಹಿತರು, ಪತಿವ್ರತೆಯರು ಇಂಥಾ ಸ್ತ್ರೀಯರೊಡನೆ ನಿನಗೆ ಸಖ್ಯವಿರಲಿ.

ಭಾರತ.

ಸತ್ಪುರುಷರ ಸಂಗವು, ಕೆಟ್ಟ ಬುದ್ಧಿಯನ್ನು. ದೂರಮಾಡುವಿಕೆಯು, ಚಿತ್ತವನ್ನು ನಿರ್ಮಲವಾಗಿಡೋಣವು, ಪಾಪಕೃತ್ಯಗಳನ್ನು ನೆನಸದಿರುವಿಕೆಯು, ಪ್ರಾಣಿಗಳಲ್ಲಿ ಹೆಚ್ಚಾದ ದಯೆಯನ್ನು ತೋರಿಸುವಿಕೆಯು ಇವೆಲ್ಲಾ ಒಳ್ಳೇದನ್ನು (ಮಂಗಳವನ್ನು) ತರುವಂಥವುಗಳು.

ಭಾಮಿನೀವಿಲಾಸ.

ಸದ್ಗೃಹಿಣಿಯು, ಊಟೋಪಚಾರಗಳಲ್ಲಿ, ರುಚಿಕರವಾದುದಿದು, ಇದು ಅರುಚಿಕರವಾದುದು; ಇದು ಹಿತ, ಇದು ಅಹಿತ ಎಂಬುದನ್ನು ಚೆನ್ನಾಗಿ ತಿಳಿಯತಕ್ಕದ್ದು.

ಪತಿಯು ದಣಿದು ಮನೆಗೆ ಬರುವಾಗ, ಅವನ ಸ್ವರವನ್ನು ಕೇಳಿದೊಡನೆಯೇ, ತಮಗೇನಾಗಬೇಕೆಂದು ಒಳಗಿನಿಂದ ಕೇಳಬೇಕು. ಹೊಲದಿಂದಾಗಲಿ, ವನದಿಂದಾಗಲಿ, ಪಟ್ಟಣದಿಂದಾಗಲಿ ಪತಿಯು ಮನೆಗೆ ಹಿಂತಿರುಗಿ ಬಂದೊಡನೆ, ಹೆಂಡತಿಯು ಎದುರಾಗಿ ಬಂದು, ಆಸನೋದಕಗಳನ್ನು ಕೊಟ್ಟು ನಮಸ್ಕರಿಸಬೇಕು. ಈ ಕೆಲಸವನ್ನು ಸೇವಕನಿಂದ ಮಾಡಿಸದೆ ತಾನೇ ಸ್ವತಃ ಮಾಡತಕ್ಕದ್ದು.

ಪತಿವ್ರತೆಯಾದ ಸ್ತ್ರೀಯು, ಯಾರೂ ಇಲ್ಲದ ವೇಳೆಯಲ್ಲಾದರೂ, ಪತಿಯನ್ನು ಸಂದರ್ಶಿಸುವಾಗ ಆಭರಣಗಳನ್ನಿಡದೆ ಇರಬಾರದು. ಯಾಕಂದರೆ ಸ್ತ್ರೀಯ ಭೂಷಣವು ಪತಿಯ ಸಂತೋಷಕ್ಕಾಗಿಯೇ ಆಗಿರುವುವು.

ಕುಮಾರಸಂಭವ.

ಶ್ರೇಷ್ಠರಾದ ಸ್ತ್ರೀಯರ ವಿಲಾಸಗಳು, ವೇಷಭೂಷಣಗಳು, ವರ್ತನಗಳು ಇವೆಲ್ಲಾ ಪತಿಗೆ ಹಿತಕರವಾದವುಗಳೇ ಆಗಿರಬೇಕು.

ಭಾರತ.

ಸದ್ಗೃಹಿಣಿಯು ಅತಿವ್ಯಯ, ಅನಾವ್ರಯ ಮಾಡುವಂಥಾ ತನ್ನ ಪತಿಯನ್ನು ಏಕಾಂತದಲ್ಲಿ ಬೋಧಿಸಬೇಕು.

ತಿರುಗಾಡಲಿಕ್ಕೆ, ವಿವಾಹಕ್ಕೆ, ಯಜ್ಞಕ್ಕೆ, ದೇವಸ್ಥಾನಕ್ಕೆ, ಇಂಥಾ ಕಡೆಗಳಿಗೆ ಹೋಗುವಾಗ ಎಂತಹ ಸಖಿಯರೊಡನೆ ಹೋಗಬೇಕು, ಯಾವ ಸಂದರ್ಭದಲ್ಲಿ, ಯಾರೊಡನೆ ಹೇಗೆ ಮಾತಾಡಬೇಕು ಎಂಬುದನ್ನು ಚೆನ್ನಾಗಿ ವಿಚಾರಿಸಿ ಮಾಡಬೇಕು.

ಪತಿಯ ವಚನ ಪರಿಪಾಲನೆಯೇ ಸತಿಯ ಕರ್ತವ್ಯವು.

ಯಾಜ್ಞವಲ್ಕ್ಯ.

ಪತಿಯೊಡನೆ ಕೇಳದೆ ಮನೆಯಿಂದ ಹೊರಡಬಾರದು.

ಶಂಖ.

ಪತಿಯ ಅಪ್ಪಣೆಯನ್ನು ಕೇಳದೆ, ಸ್ವತಂತ್ರಳಾಗಿ ಸ್ತ್ರೀಯು, ಮನೆಯ ಹೊರಬಾಗಲಲ್ಲಿ ನಿಲ್ಲಬಾರದು; ನೆರೆಮನೆಗೆ ಹೋಗಬಾರದು.

ವಿಷ್ಣು.

ಪತಿಯು ಮಲಗಿದ ಅನಂತರ ಸತಿಯು ಮಲಗಬೇಕು; ಆತನು ಏಳುವುದಕ್ಕೆ ಮೊದಲೇ ಏಳಬೇಕು ಮತ್ತು ಆತನನ್ನು ಮೆಲ್ಲಗೆ ಎಚ್ಚರಿಸಬೇಕು. ಸುಖನಿದ್ರೆಯಲ್ಲಿದ್ದರೆ ಯಾವಾಗಲೂ ಆತನನ್ನು ಎಚ್ಚರಿಸಬಾರದು.

ಭಾರತ.

ಅತ್ಯಾಶ್ಚರ್ಯಕರವಾದ ಇಲೆಕ್ಟ್ರೋ-ಟಾನಿಕ್ ಉಪಚಾರ

ಇಂದ್ರಿಯದೌರ್ಬಲ್ಯ, ಎಲ್ಲಾ ತರದ ನರಗಳ ರೋಗಗಳು, ನಿದ್ರೆಯಿಲ್ಲದಿರುವಿಕೆ, ಮೆದುಳಿನ ಅಶಕ್ತತೆ, ನೆನಪು ಮತ್ತು ಮನೋದಾರ್ಢ್ಯ ಕಡಿಮೆಯಾಗುವಿಕೆ ಇತ್ಯಾದಿಗಳಿಗೆ

ಚೈತನ್ಯ, ಮೆದುಳಿನ ಶಕ್ತಿ ಮತ್ತು ಆರೋಗ್ಯವನ್ನು ತೀವ್ರಪಡಿಸಿಯೂ, ಏನೊಂದು ಬಾಧೆಯಿಲ್ಲದ ರೀತಿಯಲ್ಲಿಯೂ ಉಂಟುಮಾಡುವ, ಶಕ್ತಿವಂತವಾದ ಚೈತನ್ಯದಾಯಕ ಪದಾರ್ಥಗಳನ್ನುಳ್ಳ ಈ ಆಶ್ಚರ್ಯಕರವಾದ ಟಾನಿಕ್ ಗುಳಿಗೆಗಳ ವಿಸ್ಮಯಕರವಾದ ಗುಣಕಾರಿ ಪರಿಣಾಮವನ್ನು ಒಂದೇ ದಿನದಲ್ಲಿ ಕಂಡುಕೊಳ್ಳುವಿರಿ. ಉಷ್ಣಕಾಲದ ಅಶಕ್ತತೆಯು ಮಾಯವಾಗುವುದು, ನಿಮ್ಮ ಜೀರ್ಣಶಕ್ತಿ, ಜೀವನದ ಸುಖ ಮತ್ತು ಮುಖದ ಕಾಂತಿ ಎಣಿಕೆಗಿಂತಲೂ ಅಪರಿಮಿತವಾಗಿ ವರ್ಧಿಸುವುದು—ಚುರುಕಾದ ಮಾನಸಿಕ ಮತ್ತು ಶಾರೀರಕ ಉದ್ಯೋಗಗಳಲ್ಲಿ ನಿರತರಾದವರಿಗೆ ಅದರ್ಶಪ್ರಾಯವಾದುದು. ಅವನ್ನು ಇಂದೇ ಉಪಯೋಗಿಸಿರಿ—ಹೊಸ ಮನುಷ್ಯರಾಗಿರಿ!

ಕ್ರಯ: 25 ಮಾತ್ರೆಗಳ ಒಂದು ಬಾಟಲಿಗೆ ರೂ. 1—4—0. 40 ಮಾತ್ರೆಗಳ ಒಂದು ಬಾಟಲಿಗೆ ರೂ. 2—0—0. ವಿ. ಪಿ. ಚಾರ್ಜು ಪ್ರತ್ಯೇಕ.

ಪ್ರೊ. ಜೇಮ್ಸರ ಇಲೆಕ್ಟ್ರೋ ಟೋನಿಕ್ ಪಲ್ಸ್‌ನ್

ಉಚಿತ ಮಾದರಿ. 2 ದಿನಗಳ ಉಪಯೋಗದ ಮಾದರಿ ಬಾಟ್ಲಿಯು 4 ಆಣೆಗಳ ಅಂಚೆ ಚೀಟುಗಳನ್ನು ಕಳುಹಿದಲ್ಲಿ ಧರ್ಮಾರ್ಥವಾಗಿ ರವಾನಿಸಲ್ಪಡುವುದು.
ವೇದನೆಯನ್ನು ಕೂಡಲೇ ಉಪಶಮನಗೊಳಿಸುತ್ತದೆ.

"ಆಡ್‌ಮನ್ಸ್ ಸ್ಯಾಪ್ರೆಸ್ಸ್ ಸಾಲ್ವ್" (ಬಾಮು) (ರಿಜಿಸ್ಟರ್ಡ್)

ನೀವು ಆದರ ಪರಿಣಾಮವನ್ನು ಕಂಡು ಆಶ್ಚರ್ಯಪಡುವಿರಿ. ಅದು ಯಾವದೇ ತರದ ಹೊರ ವೇದನೆಯಾಗಿರಲಿ, ಈ ಆಶ್ಚರ್ಯಕರವಾದ ಬಾಮನ್ನು ಕೂಡಲೇ ಸವರಿದಲ್ಲಿ ತೀವ್ರ ಉಪಶಮನವು ಸಿಗುವುದು: ಇಂದೇ ಒಂದು ಭರಣಿಯನ್ನು ಉಪಯೋಗಿಸಿರಿ. ಆ ಮೇಲೆ ನೀವು ಅದನ್ನು ಬಿಡಲಾರಿರಿ. ಅದು ಆಶ್ಚರ್ಯಕರವಾಗಿದೆ. ಎಲ್ಲೆಲ್ಲಿಯೂ ಸಿಗುತ್ತದೆ.
ಕ್ರಯ: ಭರಣಿಯೊಂದರ ರೂ. 1-0-0, ವಿ. ಪಿ. ಚಾರ್ಜು ಪ್ರತ್ಯೇಕ. ಟಪ್ಪಾಲು ಖರ್ಚಿಗಾಗಿ 2 ಆಣೆಗಳ ಅಂಚೆಚೀಟಿನೊಡನೆ ಬರೆದರೆ ಉಚಿತವಾದ ಮಾದರಿಯು ಸಿಗುವುದು.

Sole Agents:—**Anglo-Indian Drug & Chemical Co.,**
285, Juma Masjid, Bombay No. 2.

ಪ್ಲೀಹ ಮತ್ತು ಯಕೃತ್ತಿನ ಬೆಳವಣಿಗೆಯಿಂದ

ಮಕ್ಕಳನ್ನು ಕಾಪಾಡಿರಿ.

ಬಾಲಸಂಜೀವಿನಿಯನ್ನು ಉಪಯೋಗಿಸಿರಿ.

(ರಿಜಿಸ್ಟರ್ಡ್)

ಉತ್ತಮ, ಖರೆ ಮತ್ತು ತಾಜಾ ಆದ ಅದೊಂದೇ
ವಿಜಯನಗರಂ ಔಷಧ.

ವಿ. ಸೂ. ಅನೇಕ ಡಾಕ್ಟರರೂ, ಹೆತ್ತವರೂ 'ಬಾಲಸಂಜೀವಿನಿ' ಮಾತ್ರ ಈ ಭಯಂಕರ ರೋಗವನ್ನು ಎಷ್ಟೇ ಕಠಿಣತರ ದ್ದಾಗಿದ್ದರೂ ಫಲಕಾರಿಯಾಗಿ ಗುಣವಡಿಸಬಲ್ಲುದೆಂದು ಅನುಭವ ಮಾಡಿಕೊಂಡಿರುವರು. ಅನೇಕ ಮಕ್ಕಳು ಇತರ ಎಲ್ಲಾ ಔಷಧಗಳನ್ನು ಉಪಯೋಗಿಸಿ, ಗುಣವನ್ನು ಪಡೆಯದೆ, ಇದನ್ನುಪಯೋಗಿಸಿ ಸಂಪೂರ್ಣ ಗುಣಲಾಭ ಪಡೆದಿರುವರು.

ಪಿಳ್ಳಾ ಪಾಪಯ್ಯ್ಯ ಪಾತ್ರುಡು ಛುತ್ತು ಸಹೋದರ,
(ವಿಜಯನಗರಂ ಸಂಸ್ಥಾನದ ಆಯುರ್ವೇದ ಪಂಡಿತರು),
98—99 ಬ್ರೋಡೀಸ್ ರೋಡ್, ಮೈಳಾಪುರ್, :: ಮದ್ರಾಸು.
(ರಾಮಕೃಷ್ಣ ಮಠದ ಎದುರು).

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಹೊಸತರುಗು ಪೇಟೆ, ಬೆಂಗಳೂರು ಸಿಟಿ.

ಕ್ಲೈಮ್ ಹಣ ರೂ. 300,000 (3 ಲಕ್ಷ ರೂ.ಗೆ)ಗೆ ಮೇಲ್ಪಟ್ಟು ಪಾವತಿಯಾಗಿರುತ್ತೆ.

ಮೈಸೂರು ಸರ್ಕಾರದ ಕಂಪೆನಿ ರೆಗ್ಯುಲೇಷನ್ ನಂ. VIII 1917ರ ಪ್ರಕಾರ ಸ್ಥಾಪಿತವಾದದ್ದು; ಮತ್ತು ಇಂಡಿಯನ್ ಲೈಫ್ ಅಷ್ಯೂರೆನ್ಸ್ ಆಕ್ಟ್ VI (1912)ರ ಪ್ರಕಾರ ಠೇವಣಾತಿ (Deposit) ಇಟ್ಟು, ಅದರ ನಿಯಮಗಳಿಗೊಳಪಟ್ಟಿದೆ.

ಈ ಕಂಪೆನಿಯ ಅತಿ ಮುಖ್ಯವಾದ ಮತ್ತು ಲಾಭಕರವಾದ ನವೀನ ಪರತ್ತುಗಳನ್ನು ಗಮನಿಸಿರಿ. (1) ಶುರುವಾದ ಲಾಗಾಯ್ತು ವರ್ಷ ಒಂದಕ್ಕೆ ರೂ. 1000ಗೆ ರೂ. 15ರಂತೆ ಗ್ಯಾರಂಟಿಯಾದ ಬೋನಸ್ಸನ್ನು ಕೊಡುವ ಪಾಲಿಸಿಗಳು. (2) ಸರೆಂಡರ್ ವ್ಯಾಲ್ಯುವಿನ ಶೇಕಡ 90% ರಷ್ಟು ಸಾಲ ಪಡೆಯುವಿಕೆ. (3) ಇಮ್ಮಡಿ ವಿಮೆ ಹಣ ಪಡೆಯುವಿಕೆ; (4) ಸ್ಥಿರವಾದ ಅಶಕ್ತತೆಯ ನಿಯಾಯಿತಿ; (5) ವೈದ್ಯಪರೀಕ್ಷೆಯೇ ಇಲ್ಲದೆ ಮಕ್ಕಳ ಹೆಸರಿನಲ್ಲಿ 5000 ರೂ.ಗೆ ವಿಮೆ ಮಾಡಿ, ಪಾಲಿಸಿಯೊಂದನ್ನು ಹೊಂದಬಹುದಾದ ನವೀನ ಕ್ರಮ. (6) ಸ್ತ್ರೀ ಜೀವ ವಿಮಾ ಮಾಡುವ ಕ್ರಮ. ನಮ್ಮ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಸಮರ್ಥರಾದ ಮತ್ತು ಅನುಭವ ಶಾಲಿಗಳಾದ ಏಜಂಟರುಗಳು ಬೇಕು.

ಹೆಚ್ಚಿನ ವಿವರಗಳಿಗೆ ಬರೆಯಿರಿ.

ತಿರುಪತಿ ಬಲಿಜಾ ಅಂಡ್ ಕಂಪೆನಿ,
ಮ್ಯಾನೇಜಿಂಗ್ ಏಜಂಟರುಗಳು.

ಅಶಕ್ತ ಮಕ್ಕಳು

ಡೋಂಗರೆ

ಇವರ

ಬಾಲಾಮೃತ.

ಪಾನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷಚಿತ್ತರೂ ಆಗುವರು.

ಕೆ. ಟೀ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

GOOD NEWS

We on behalf of our customers, undertake to register from the Government of India Patent, Design & Trade Names, Mark, Labels etc.

Please write for terms to:—

The Star Commercial Agency,
10, Collin Street, CALCUTTA.

ಅಖಿಲ ಹಿಂದುಸ್ಥಾನದಲ್ಲಿ ಪ್ರಖ್ಯಾತಿಪಟ್ಟ
ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್‌ರವರ ತ್ರಿಲೋಕ (ನಾರದ) ಮಾರ್ಕಿನ

ಸ್ಟೀಲು ಟ್ರಂಕುಗಳು, ಮತ್ತು ಸೂಟ್ ಕೇಸುಗಳು

ಅನೇಕ ವರ್ಷಗಳ ಮಾಹಿತಿಯಿಂದಲೂ, ಒಳ್ಳೇ ಕೆಲಸಗಾರರಿಂದಲೂ ಬಹಳ ನಾಜೂಕಾಗಿ ತಯಾರಿಸಲ್ಪಡುತ್ತಿವೆ. ನಮ್ಮಲ್ಲಿ ನಿಮ್ಮ ಬಟ್ಟೆಗಳು ಕೆಟ್ಟುಹೋಗದಂತೆಯೂ, ಬಹುಕಾಲ ಬಾಳಿಕೆ ಬರುವಂತೆಯೂ, ಮನಸ್ಸಿಗೆ ತೃಪ್ತಿಕರವಾಗುವ ರೀತಿಯಲ್ಲಿ ನಾನಾ ತರದ ಸ್ಟೀಲು ಟ್ರಂಕುಗಳೂ, ಸೂಟ್ ಕೇಸುಗಳೂ, ಕ್ಯಾಬಿನ್ ಸೂಟ್ ಕೇಸುಗಳೂ, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳೂ, ಅಭರಣಗಳನ್ನಿರಿಸುವ ಕೈಪೆಟ್ಟಿಗೆಗಳೂ, ಕ್ಯಾಷ್‌ಬೋಕ್ಸ್ ಇವೇ ಮೊದಲಾದುವುಗಳು ವಿಕ್ರಯಕ್ಕೆ ಸಿದ್ಧವಿರುವವು.



ತ್ರಿಲೋಕ (ನಾರದ) ಟ್ರೇಡ್‌ಮಾರ್ಕಿನ ಮುದ್ರೆಯು ಮತ್ತು ಒಳಗಡೆ ಲೇಬಲ್ ನಮ್ಮ ಪ್ರತಿಯೊಂದು ಪೆಟ್ಟಿಗೆಯಲ್ಲೂ ಇರುವುದು. ಕ್ರಯಕ್ಕೆ ತಕ್ಕ ಮ್ಹಾಲು ಬೇಕಾದಲ್ಲಿ ಈ ಟ್ರೇಡ್‌ಮಾರ್ಕು ಇರುವ ಪೆಟ್ಟಿಗೆಗಳನ್ನು ಪರೀಕ್ಷಿಸಿ ಪಡೆಕೊಂಡು ಸಂತೋಷ ಪಡೆಯಿರಿ.

ವ್ಯಾಪಾರಸ್ಥರಿಗೆ ಸುಸಂದರ್ಭ. ನಮ್ಮ 'ಷೋ' ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ, ನಿಮಗೆ ಖಚಿತವಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈಕೆಳಗಿನ ವಿಳಾಸಕ್ಕೆ ಬರೆಯಿರಿ:—

ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಪ್ರೊಪ್ರೈಟರ್:—ಜಿ. ಟಿ. ಮಾಣಿಕ ನಾಯಗರ್.
ಹೆಡ್ ಆಫೀಸು: 22, ಬೇಕರ್ ಸ್ಟ್ರೀಟ್. ಜಿ. ಟಿ. ಮದ್ರಾಸು. ಬ್ರಾಂಚ್ ಆಫೀಸು: ರೈಲ್ವೇ ಗುಡ್ಸ್‌ಶೆಡ್ ಬಳಿ, ಮಂಗಳೂರು, ದ. ಕ.

ಖಾತ್ರಿಯಾದ ತೃಪ್ತಿಯೂ, ವಿಜಯವೂ ಉಂಟೆಂದು
ಗ್ಯಾರಂಟಿ.

ಜಾಹೀರಾತಿನಂತೆ ಇಲ್ಲವೆಂದು ಕಂಡುಬಂದರೆ, ಕೊಟ್ಟ ಹಣ ಹಿಂದೆ.

ಇಂದ್ರಜಾಲದ ಉಂಗುರ

ಅತ್ಯದ್ಭುತವಾದ ಈ 'ಮೆಸ್ಮರಿಜಮ್ಮಿನ' ಉಂಗುರವು, ಬಹಳ ಪರಿಶ್ರಮದೊಡನೆ ತಯಾರಿಸಲಾಗಿದೆ. ಇದರಲ್ಲಿ ಆಶ್ಚರ್ಯಕರವಾದ, ಸೂಜಿ



ಕಲ್ಲಿನ ಗುಣಗಳುಳ್ಳ, ವಿದ್ಯುಚ್ಛಕ್ತಿಯುಳ್ಳ ಪದಾರ್ಥಗಳಿವೆ. ವಿಸ್ಮಯಜನಕವಾದ ಈ ಉಂಗುರದಲ್ಲಿ, ವಿಚಿತ್ರವಾದ ಇಂದ್ರಜಾಲ ಶಕ್ತಿಯು ತುಂಬಿದೆ. ಈ ಉಂಗುರದ ಮೂಲಕ, ಕ್ಷಣಮಾತ್ರದಲ್ಲಿ, ವರ್ತಮಾನ, ಭೂತ, ಭವಿಷ್ಯತ್ತಿನ ವಿಷಯಗಳನ್ನು ಬಹಳ ಸುಲಭವಾಗಿ ನಿರ್ಧರಿಸಬಹುದು. ಸತ್ತವರನ್ನು ಅಥವಾ ಇದ್ದವರನ್ನು ಸಂದರ್ಶಿಸುವುದು, ಸಾವಿರಾರು ಮೈಲುಗಳ ದೂರದ ಸಂಗತಿಗಳನ್ನು ತಿಳಿದುಕೊಳ್ಳುವುದು, ಹುಗಿದ ನಿಧಿಯ ಶೋಧನೆ, ರೋಗಿಯ ಕಾಹಿಲೆಯ ವಾರ್ತೆ, ಕಳೆದು ಹೋದ ಪದಾರ್ಥ ತಿರುಗಿ ದೊರಕೋಣ, ಬಂದು ಮಾಡಿದ ಕವರಿನ ವಿಚಾರ ತಿಳಿಯೋಣ, ಅಲ್ಲದೆ ಸೋಡ್ತಿಯಲ್ಲಿ ಬಹುಮೂಲ್ಯವಾದ ಸಿಕ್ಕುವ ನಂಬರು, ಗುಪ್ತ ದ್ರವ್ಯದ ಕುರುಹು, ಗುಪ್ತ ಪ್ರಶ್ನೆಗಳಿಗೆ ಉತ್ತರಗಳು—ಇವೇ ಮೊದಲಾದ ಇತರ ಸಾವಿರಾರು ಆಶ್ಚರ್ಯಕರವಾದ ಕಾರ್ಯಗಳೂ ಈ ಉಂಗುರದ ಮೂಲಕ ಕ್ಷಣಕಾಲದಲ್ಲಿ ಸಾಧ್ಯವಾಗುತ್ತದೆ. ಪ್ರತಿ ಉಂಗುರದೊಡನೆ ಸೂಚೀಪತ್ರವೂ. ಬೆಲೆ ರೂ. 2/- ಪೋಸ್ಟೇಜ್ ಆಣೆ 8. ಸಿಕ್ಕುವ ವಿಳಾಸ:—

KRISHNA MAGICAL HOUSE,
No. 2, Aligarh, U. P.

ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

'ಕಂಠೀರವ' ಪತ್ರಿಕೆಗೆ ಇಂದೇ ಚಂದಾದಾರರಾಗಿರಿ!

ತಾ. 11-7-'36ರಿಂದ **ಗ್ರೇಂಡ್ ಆಕ್ಷನ್ ಸೇಲ್** 20-7-'36ರ ವರೆಗೆ.

ಅನೇಕ ತರದ ಜವುಳಿಗಳನ್ನು ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಈ ವಿಶೇಷ ಲಾಭದ ಸುಸಂದರ್ಭವನ್ನು ಕಳಕೊಳ್ಳದೆ ಮುಂಚಿತವಾಗಿಯೇ ಜಾಗ್ರತರಾಗಿರಿ!

ಏಲಂ ಸಂಜೆ ಘಂಟೆ 5ಕ್ಕೆ ಪ್ರಾರಂಭ.

ಏಲಂ ನಡಿಯುವ ಸ್ಥಳ:—

ಸೇಲಂಕಾರ್ ಎ. ವರದರಾಜು ಚೆಟ್ಟಿಯಾರ್, ಜವುಳಿ ಅಂಗಡಿ,
ಮಾರ್ಕೆಟು ರಸ್ತೆ, ಮಂಗಳೂರು.

ನಲ್ಮೆಯ ನಟರೂ ಅವರ ಉತ್ತಮ ಚಿತ್ರಗಳೂ

ಬೋರಿಸ್ ಕಾರ್ಲೊಫ್:-'ಬ್ರೈಡ್ ಓಫ್ ಫ್ರೇಂಕೆನ್‌ಸ್ಟೈನ್.'
(The Bride Of Frankenstein)

ಶವವನ್ನು ತಮ್ಮ ಅದ್ಭುತ ಶಕ್ತಿಯಿಂದ ಜೀವಿತವನ್ನಾಗಿ ಮಾಡಲು ಮನುಷ್ಯರು ಬಲ್ಲರು. ಅದರ ಪರಿಣಾಮವನ್ನೂ, ಶವವು ಮಾನವ ಜೀವಿಗಳನ್ನು ಕಂಡು ಭಯಗೊಂಡು ಮಾಡುವ ಹುಚ್ಚಾಟವನ್ನೂ ನೀವೆಲ್ಲಾ 'ಫ್ರೇಂಕಿನ್‌ಸ್ಟೈನ್' (Frankenstein) ಎಂಬ ಚಿತ್ರದಲ್ಲಿ ಕಂಡು ಭೀತಿಯಿಂದ ಸ್ತಂಭೀಭೂತರಾಗಿದ್ದಿರಿ. ಇದೀಗ ಮನುಷ್ಯನ ಇನ್ನೂ ಅನೇಕ ಶಕ್ತಿಗಳ ಪರಿಣಾಮವಾಗಿ ಆ ಶವವು ಮಾತನಾಡತೊಡಗುತ್ತದೆ. ವ್ಯವಹಾರದಲ್ಲಿ ಭಾಗಿಯಾಗುತ್ತದೆ. ಇನ್ನೂ ಅದೇ ರೀತಿಯಿಂದ ಹೆಂಗಸೊಬ್ಬಳ ಶವಕ್ಕೆ ಜೀವ ತರಲು ಆಕೆಯನ್ನು ಕಂಡು ಚಲಿಸುವ ಈ ಶವವು ಮೋಹಿತವಾಗುತ್ತದೆ. ಅದನ್ನು ಕಂಡು ತನಗೆ ಹೆಂಡತಿ ಬೇಕೆಂದು ಕೂಗಾಡುತ್ತದೆ. ತನ್ನ ಹೆಂಡತಿಯಾಗಿ ಆ ಹೆಣ್ಣು ಶವವನ್ನು ಮಾಡಿಕೊಳ್ಳುತ್ತದೆ. ಅದೇ ಹೆಣ್ಣಿಗಾಗಿ ಹೆಣವು ಹಾತೊರೆಯುವುದು ಈ ಚಿತ್ರದಲ್ಲಿ. ತನ್ನ ವೇಶಬದಲಾವಣೆಯಲ್ಲಿ—ಜಗತ್ತಿನಲ್ಲೇ ಪ್ರಖ್ಯಾತನಾದ 'ಬೋರಿಸ್ ಕಾರ್ಲೊಫ್'ನೇ, ಹಿಂದೆ ಜನರನ್ನು ನಡುಗಿಸಿದಂತೆ ಇದೀಗ ನಡುಗಿಸಲು ಬಂದಿರುವನು; ತನ್ನ ಅಭಿನಯಕಲಾಕೌಶಲ್ಯವನ್ನು ತೋರಲು ಬಂದಿರುವನು. ಅಲ್ಲದೆ ಇತರ ಪ್ರಾಮುಖ್ಯ ನಟರಾದ 'ಕೋಲಿನ್ ಕ್ಲೈವ್' (Colin Clive) 'ವಲೇರೀ ಹೋಬ್ಸನ್' (Valerie Hobson) 'ಎಲ್ಸಾ ಲಾಂಕೆಸ್ಟರ್' (Elsa Lanchester) ಮುಂತಾದವರು 'ಕಾರ್ಲೊಫ್'ನೊಂದಿಗೆ ತಮ್ಮ ಅಭಿನಯ ಕಲಾನೈಪುಣ್ಯವನ್ನು ತೋರಿರುವರು.

ಸುಲೋಚನಾ:-'ಬೊಂಬೈಕೀ ಬಿಲ್ಲೀ.'
(Wild Cat Of Bombay)

ಭಾರತೀಯ ಚಲಚ್ಚಿತ್ರಕ್ಷೇತ್ರದಲ್ಲಿ ಅಭಿನಯರಾಣಿಯೆಂದೆ ಪ್ರಖ್ಯಾತಿಯನ್ನು ಪಡೆದು ಅಭಿನಯಗಾರರಲ್ಲಿ ಅತ್ಯಧಿಕ ವೇತನವನ್ನು ಪಡೆಯುವ ಚೆಲುವಿನ ರಾಣಿಯಾದ ಸುಲೋಚನಾಳು ತನ್ನ ಚಲಚ್ಚಿತ್ರಪ್ರೇಮಿಯಾದ ಡಿ. ಬಿಲ್ಲಿಮೋರಿಯನೊಂದಿಗೆ ಅಭಿನಯಿಸಿರುವಳು. ಅಲ್ಲದೆ ಇಂಪೀರಿಯಲ್ ಕಂಪೆನಿಯ ಸುಪ್ರಸಿದ್ಧ ನಟರಾದ ಜಮ್‌ಶೆಡ್ಜಿ, ಜಿಲ್ಲೂ, ಲಕ್ಷ್ಮಿ, ಬಾಬಾ ವ್ಯಾಸ್, ಗುಲಾಮ್ ಮಹಮ್ಮದ್ ಮುಂತಾದವರೂ ಇದರಲ್ಲಿ ಅಭಿನಯಿಸಿ ಚಿತ್ರದ ಶ್ರೇಷ್ಠತೆಯನ್ನು ಕಾಯ್ದಿದ್ದಾರೆ. ಟೆಂಪ್ಲ್ ಬೆಲ್ಸ್, ಇಂದಿರಾ ಯಂ. ಎ., ಅನಾರ್ಕಲೀ, ಮುಂತಾದುವುಗಳಿಗಿಂತಲೂ ಕಥಾಸಂವಿಧಾನವೂ ಅತೀ ಉತ್ತಮವಾದುದು. ಇದರಲ್ಲಿ ಸುಲೋಚನಾಳು ತನ್ನ ಬಣ್ಣಬದಲಾವಣೆಯ—ವೇಷಬದಲಾವಣೆಯ ಚಾತುರ್ಯವನ್ನು ಬೀರಿದ್ದಾಳೆ. ಒಬ್ಬಳೇ ಏಳೆಂಟು ತೆರನ ವೇಷದಿಂದ ಬಂದು ಪ್ರೇಕ್ಷಕರನ್ನು ಆಶ್ಚರ್ಯಗೊಳಿಸಿರುವಳು. ಮುಂಬಾಯಿಯನ್ನೇ ನಡುಗಿಸಿದ ಭೀಕರ ಬೆಕ್ಕಾಗಿರುವಳು. ಬೆಕ್ಕೆಂದರೆ ಸಾಮಾನ್ಯವಲ್ಲ! ಪ್ರೇಕ್ಷಕರ ಹೃದಯವನ್ನೇ ಸೂರೆಗೊಳ್ಳುವ ಬೆಕ್ಕು. ಸುಲೋಚನಾಳು ತನ್ನ ಅಭಿನಯಕಲಾಕೌಶಲ್ಯವನ್ನು ತೋರಿ ಎಲ್ಲರನ್ನೂ ದಂಗುಬಡಿಸುವ ಬೆಕ್ಕಾಗಿರುವಳು. ಅದೂ ಕಾಡುಬೆಕ್ಕು:—Wild Cat Of Bombay.

ಅರುಣಾದೇವಿ:—'ಡೆಕ್ಕಾನ್ ಕ್ವೀನ್' (Deccan Queen)

ಈಕೆಯು ಚಲಚ್ಚಿತ್ರಪ್ರಪಂಚಕ್ಕೆ ಹೊಸಬಳು. ಆದರೆ ಅಭಿನಯಕಲೆಯಲ್ಲಿ ಇವಳನ್ನು ಮಿಗಿಸಿದವರಿಲ್ಲ—ಎಂದರೂ ಎನ್ನಬಹುದಾಗಿದೆ. ಹೊಸತಾಗಿ ನಟನು ಚಲಚ್ಚಿತ್ರ ಪ್ರಪಂಚಕ್ಕೆ ಬಂದಾಗ ಅವನು ಚಲಚ್ಚಿತ್ರಪ್ರಪಂಚವನ್ನು ತನ್ನ ಅಭಿನಯ ಸಾಮರ್ಥ್ಯದಿಂದ ದಂಗುಬಡಿಸುವನು. ಅಂತೆಯೇ ಅರುಣಾದೇವಿಯೂ ತನ್ನ ಅಭಿನಯದ ಭಾಂಡಾರವನ್ನೆಲ್ಲಾ ಜನತೆಯ ಮುಂದೆ ಹರವಿರುವಳು. ತನ್ನ ಚಾತುರ್ಯವನ್ನು ಹಲವು ತೆರನ ರೂಪಬದಲಾವಣೆಗಳಿಂದ, ಕೌಶಲ್ಯತೆಯಿಂದ ಪ್ರದರ್ಶಿಸಿರುವಳು. ಇವಳ ಚಲಚ್ಚಿತ್ರಪ್ರೇಮಿಯೂ ಇವಳಂತೆಯೇ ಹೊಸಬ ನಟನಾದುದರಿಂದ ಯಾರೂ ಈ ತನಕ ತೋರದ ಕೌಶಲ್ಯವನ್ನು ತೋರಿ ಅಭಿನಯಕಲೆಯ ಹಬ್ಬದೂಟವನ್ನು ಉಣ್ಣಿಸಿರುವನು. ಇವರಿಬ್ಬರ ಕುಶಲತೆ ಬಂತೆಂದ ಮೇಲೆ ಹಿತ್ತಾಳಿಯೂ ಚಿನ್ನವಾಗುವುದರಲ್ಲಿ ಸಂದೇಹವೇನು. ಆದುದರಿಂದಲೇ 'ಡೆಕ್ಕಾನ್ ಕ್ವೀನ್' ಚಿತ್ರವೂ ಬಹಳ ಪ್ರಶಂಸನೀಯವಾಯಿತು. ಪ್ರತಿಯೊಬ್ಬನೂ ನೋಡಿ ಆನಂದಗೊಂಡನು—ಬಾಯಿತುಂಬಾ ಹೊಗಳಿದನು. ಕಣ್ಣು ತುಂಬಾ ಪುನಃ ಪುನಃ ಕಂಡನು. ಸಾಗರ ಕಂಪೆನಿಯವರ ಅತೀ ಉತ್ತಮ ಚಿತ್ರಗಳಲ್ಲೊಂದು. ಸಿಲ್ವರ್ ಕಿಂಗ್, ಡಾಕ್ಟರ್ ಮಾಧುರಿಕಾಗಳಿಗಿಂತಲೂ ಮಿಗಿಲಾದುದು.

ಬಾಲನಟನಿಗೆ ವಾರ್ಷಿಕ ವೇತನ ಒಂದೂವರೆ ಲಕ್ಷ:—

ಡೇವಿಡ್ ಕಾಪ್ಪರ್‌ಫೀಲ್ಡ್ ಎಂಬ ಫಿಲ್ಮಿನಲ್ಲಿ ಪ್ರಖ್ಯಾತಿಪಡೆದ ಫ್ರೆಡಿ ಬಾರ್ಥೊಲೋಮಿಯೋ ಎಂಬ ಲಂಡನಿನಲ್ಲಿರುವ ಒಬ್ಬ ಬಾಲನಟನಿಗೆ, ಮೆಟ್ರೋ ಕಂಪೆನಿಯು ವರ್ಷಕ್ಕೆ ಒಂದೂವರೆ ಲಕ್ಷ ರೂಪ್ಯಾ ಸಂಬಳ ತೆರುತ್ತದಂತೆ. ಸದ್ಯದಲ್ಲೆ ಈ ಸಂಬಳವು ಇನ್ಮಡಿಯಾಗಬಹುದು.

ಸಿನೆಮಾ ಪುಟ

ದೇಶದ್ರೋಹ ವಿಷಯದಲ್ಲಿ ಜರ್ಮನ್ ಫಿಲ್ಮ್:—

ಜರ್ಮನಿನಲ್ಲಿ ತಯಾರಾದ ದೇಶದ್ರೋಹವೆಂಬ ಫಿಲ್ಮಿನಲ್ಲಿ ಸ್ವೇಚ್ಛೆಯಿಂದ ದೇಶದ್ರೋಹಕಾರ್ಯದಲ್ಲಿ ಭಾಗವಹಿಸಿದ ನ್ಯಕ್ತಿಗಳು ವಿದೇಶೀ ಗುಪ್ತಚರರ ಬಲೆಯಲ್ಲಿ ಬಿದ್ದು ಹೇಗೆ ಸ್ವದೇಶ ಘಾತುಕರಾಗುತ್ತಾರೆಂದು ತೋರಿಸಿದ್ದಾರೆ. ಈ ವಿದೇಶೀ ಗುಪ್ತಚರರಿಂದ ತಪ್ಪಿಸಿಕೊಳ್ಳುವ ಬಗೆ ಹೇಗೆಂದು ಈ ಫಿಲ್ಮಿನಿಂದ ಜನರು ಸುಲಭವಾಗಿ ಹಿಡಿಯಬಹುದು.

ಮಹಾರಾಜರ ಜೀವನಚರಿತ್ರೆಯನ್ನು ಪ್ರದರ್ಶಿಸುವ ವರ್ಣಚಿತ್ರ:—

ಎಚ್. ಡಬ್ಲ್ಯೂ. ವಿಲ್ಸನ್ ಎಂಬ ಆಂಗ್ಲೇಯ ಯುವಕನೊಬ್ಬನು, ಬಿಕಾನೇರ್, ಮತ್ತು ಜೋಧಪುರ ಮಹಾರಾಜರ, ಮತ್ತು ಹೈದ್ರಾಬಾದಿನ ನಿಜಾಮರ ವ್ಯಕ್ತಿಗತ ಜೀವನದ ಫಿಲ್ಮ್ ತೆಗೆಯಲು ಅಪ್ಪಣೆ ಹೊಂದಿದ್ದಾನೆ. ಈ ಫಿಲ್ಮ್‌ಗಳಲ್ಲಿ ಲೋಕಪ್ರಸಿದ್ಧರಾದ ಈ ಧನಕುಬೇರರ ನಿತ್ಯಜೀವನವು ಬಹಳ ಧೂಂಧಾಮಿನಿಂದ ಪ್ರದರ್ಶಿಸಲ್ಪಡುವುದು. ಈ ಫಿಲ್ಮ್‌ಗಳಿಗೆ ಬಣ್ಣ ಕೊಡುವ ಯೋಜನೆ ಕೂಡ ನಡೆಯುತ್ತದೆ.

ಮೆಟ್ರೊ ಗೋಲ್ಡವಿನ್‌ರ ಫಿಲ್ಮಿನಲ್ಲಿ ಉದಯಶಂಕರ:—

ಮೆಟ್ರೊ ಗೋಲ್ಡವಿನರು ಹೊಸತಾಗಿ ತಯಾರಿಸಿರುವ 'ನರ್ತಕನ ಜೀವನ'ವೆಂಬ ಫಿಲ್ಮ್‌ನಲ್ಲಿ ನಟಶ್ರೇಷ್ಠ ಉದಯಶಂಕರನು ಪ್ರಧಾನ ಪಾತ್ರ ವಹಿಸುವನೆಂಬ ವಾರ್ತೆ ಹೊರಟಿದೆ. ಶ್ರೀಮತಿ ಭವಾನಿಯು ಕೂಡ ಈ ಫಿಲ್ಮಿನಲ್ಲಿ ಭಾಗವಹಿಸಬಹುದೆಂದು ಅಂದಾಜು ಇದೆ.

ಲೋಕಪ್ರಸಿದ್ಧ ಕ್ರಿಕೇಟಿಯರನ ಫಿಲ್ಮ್:—

ಲೋಕಪ್ರಸಿದ್ಧ ಕ್ರಿಕೆಟ್ ಆಟಗಾರನಾದ ಡಾನ್ ಬ್ರಾಡ್‌ಮೆನ್ನನು ಆಸ್ಟ್ರೇಲಿಯನ್ ಫಿಲ್ಮ್‌ಗಾರರಲ್ಲಿ ಕ್ರಿಕೇಟ್ ಆಟದಲ್ಲಿ ಬೋಲಿಂಗ್ ಮಾಡುವ ದೃಶ್ಯವು ತೋರಿಸಲ್ಪಟ್ಟಿದೆ. ಕ್ರಿಕೆಟ್ ಆಟಗಾರನ ರೂಪದಲ್ಲಿ ನಾನು ಫಿಲ್ಮಿಗೆ ಹೋಗದೆ ನಟರೂಪದಲ್ಲಿ ಹೋದದ್ದೆಂದು ಆತನ ಹೇಳಿಕೆ.

ಫಿಲ್ಮಿನ ಮೂಲಕ ಹರಿಜನೋದ್ಧಾರ:—

ಹರಿಜನೋದ್ಧಾರದ ವಿಷಯವಾದ ಕಥೆಗಳನ್ನು ತೋರಿಸುವುದರಲ್ಲಿ ಫಿಲ್ಮ್ ನಿರ್ಮಾಪಕರು ಮುಂದುವರಿಯುತ್ತಿದ್ದಾರೆ. ಕಲ್ಕತ್ತೆಯ ನ್ಯೂ ಥಿಯೇಟರ್ಸಿನವರ 'ಚಂಡೀದಾಸ' ಪ್ರಭಾತ್ ಕಂಪೆನಿಯವರ 'ಧರ್ಮಾತ್ಮ'-ವೊದಲಾದ ಚಿತ್ರಗಳು ಸಮಗ್ರ ಭಾರತದಲ್ಲಿ ಹೆಸರು ಪಡೆದಿವೆ. ಈಗ ರಣಜಿತ್ ಕಂಪೆನಿಯವರು 'ಅಸ್ಪೃಶ್ಯರ ಹುಡುಗಿ' ಎಂಬ ಫಿಲ್ಮನ್ನೂ, ಬೊಂಬೈ ಟಾಕೀಸಿನವರು 'ಅಸ್ಪೃಶ್ಯರ ಕನ್ಯೆ'ಯೆಂಬ ಫಿಲ್ಮನ್ನೂ ತಯಾರಿಸುವುದರಲ್ಲಿ ವ್ಯಸ್ತರಾಗಿದ್ದಾರೆ.

ಅಂತರರಾಷ್ಟ್ರೀಯ ಫಿಲ್ಮ್ ಪ್ರದರ್ಶನ:—

ವೆನಿಸ್ ನಗರದಲ್ಲಿ ಅಂತರರಾಷ್ಟ್ರೀಯ ಸಿನೆಮಾ ಕಲೆಯ ಚತುರ್ಥ ಪ್ರದರ್ಶನವು ಆಗೋಸ್ತು ೧೦ ರಿಂದ ೩೧ರ ವರೆಗೆ ನೆರವೇರಲಿರುವುದು.—ಜುಲೈ ೨೦ರ ಒಳಗೆ ಪ್ರದರ್ಶನಕ್ಕಿರುವ ಫಿಲ್ಮುಗಳೆಲ್ಲಾವೆನಿಸಿಗೆ ತಲಪಬೇಕು.

FIXED DEPOSITS

ARE NOW RECEIVED ON THE FOLLOWING RATES:—

5½% p. a. for 6 months
6 „ „ 12 „
6¼ „ „ 24 „

INTEREST BEING PAYABLE EVERY QUARTER.

Please apply for further particulars

The Udipi Bank, Ltd.,
UDIPI.

ಇಲ್ಲಿಯ ಶ್ರೀ ಕೃಷ್ಣ ಸಿನೆಮಾ ಮಂದಿರದಲ್ಲಿ ಪ್ರದರ್ಶಿಸಲ್ಪಡುತ್ತಿರುವ "ವೈಲ್ಡ್ ಕ್ಯಾಟ್ ಒಫ್ ಬೋಂಬೈ" ಎಂಬ ಚಿತ್ರದಲ್ಲಿನ ಒಂದು ದೃಶ್ಯ.

WANTED

In the South Kanara District young and ambitious men on very liberal terms, to represent the BHARAT INSURANCE COMPANY, LTD., LAHORE. An excellent opportunity to earn a decent living.

Apply to:—
DUTT & CO., *Chief Agents,* KARWAR.

ಪಂಚಮ ಜಾರ್ಜರ ಸ್ಮಾರಕನಿಧಿಗೆ ಧನಸಹಾಯವಿತ್ತವರ ಪಟ್ಟಿ.

(ಮುಂದರಿದುದು)

ರೂ. ೧ರಂತೆ ಕೊಟ್ಟವರು.

ಟಿ. ವೆಂಕಟ್ರಮಣಾಚಾರ್, ಯಚ್. ಶಂಕರರಾವ್, ಕೆ. ಅಬ್ದುಲ್ಲ ಇದಿನಬ್ಬ, ಯು. ಚಾಯಬ್ಬ ಸಾಹೇಬ, ಕೆ. ಮಾಧವ, ಎ. ಅಹಮ್ಮದ್ ಬ್ಯಾರಿ, ಕೆ. ಸಾಯದ್ ಆಲಿ, ವಲ್ಲಿ ಮಹಮ್ಮದ್, ಕೆ. ಕಾಸಿಂ ಸಾಹೇಬ, ಕೆ. ಅಬ್ದುಲ್ ಜಲೀಲ್ ಸಾಹೇಬ್, ಕೆ. ಅಲ್ಲಿ ಸಾಹೇಬ್, ಸಯದ್ ಕೋಯ, ಮೂಸೆ ಬ್ಯಾರಿ, ಟಿ. ಆದಂ ಸಾಹೇಬ್, ಕೆ. ಸಯ್ಯದ್ ಅಹಮ್ಮದ್ ಸಾಹೇಬ, ಯು. ಸ್ಯಾಮು ಬ್ಯಾರಿ, ಮಿಸೆಸ್ ಜೆನ್ನಿ ಫೆರ್ನಾಂಡಿಸ್, ಮಾಸ್ಟರ್ ಜೆರ್ರಿ ಅಲ್ಬುಕರ್ಕ್ ಅಲಿಸ್ ಡಿ'ಸೋಜ, ಎ. ವಿ. ಫೆರ್ನಾಂಡಿಸ್, ಮಿಸೆಸ್ ಜಿ. ಯಚ್. ಲೋಬೊ, ಶ್ರೀಧರರಾವ್, ದೇವಣ್ಣ ಕವ್ತಿ, ನರ್ಸಪ್ಪ, ವೆಂಕಪ್ಪಯ್ಯ, ವೆಂಕಟ್ರಮಣ ಪುಟ್ಟುರಾಯ, ಬಿ. ಪರಮೇಶ್ವರಯ್ಯ, ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ಉಪಾಧ್ಯಾಯರುಗಳು, ವೈ. ಶ್ರೀನಿವಾಸರಾವ್, ದೇವದಾಸ್ ಭಂಡಾರಿ, ಕೆ. ಯಮ್. ಕತ್ವಾರ್, ಜಿ. ಕೃಷ್ಣರಾವ್, ಯಚ್. ವೆಂಕಟ್ರಾಯ ಪೈ, ಯಂ. ಗೋವಿಂದಾಚಾರಿ, ಡಬ್ಲ್ಯು. ಸಲ್ದಾನ, ಬಿ. ನಾರಾಯಣರಾವ್, ಈಶ್ವರ ಸೆಟ್ಟಿ, ಶ್ಯಾಮರಾವ್, ಬಾಬು ಪೂಜಾರಿ, ಫೌಲ್ ಬ್ರಿಟೊ, ಟಿ. ಮಂಜುನಾಥರಾವ್, ಗೋಪಾಲಕೃಷ್ಣಯ್ಯ ಶಾನಭೋಗ್, ಎ. ಜಾರಪ್ಪ ಜೌಟ, ಪೀಟರ್ ಬ್ರಿಟೊ, ಕೆ. ಶಾಮರಾವ್, ಸೈಂಟ್ ಜೋಸೆಫ್ ಚರ್ಚ್, ಬಜ್ಪೆ, ಥೋಮಸ್ ಸಿಕೇರ, ಎ. ಸುಬ್ರಾಯ ಹೆಗ್ಡೆ, ಎ. ಸದಾನಂದ ಪೈ, ಮಿಸೆಸ್ ವಿಕ್ಟೋರಿಯಾ ಬಂಗೇರ, ಮಿಲಿಟೆರಿ ಪೆನ್ಶನರ್, ತನಿಯಪ್ಪ ಬಂಗೇರ, ಬಿ. ಬಾಬುರಾವ್, ಕೊ-ಒಪರೇಟಿವ್ ಸೊಸ್ಯಾಟಿಯ ಡಿ. ರಿಜಿಸ್ತ್ರಾರರ ಕ್ಲಾರ್ಕರು ಗಳಿಂದ, ಮಿಸೆಸ್ ರಾಮಕ್ಕ, ಕೆ. ಆರ್. ಹೆಗ್ಡೆ ಬೈಂದೂರು, ಎ. ಜೆ. ಮೆನೀಜಸ್, ಮೂಲ್ಕಿ, ಮೆರಿ ಪೆರೀರ, ಯಂ. ನಳಿನಿ ಬಾಯಿ, ರೆವೆರೆಂಡ್ ಫಾದರ್ ಡಿ. ಮತಾಯಸ್, ಮೂಡು ಪೆರಾರ್, ಪೌಲ್ ಡಿ'ಸೋಜ, ಒಂಗ್ರಕೂಳೂರ್ ಕೃಷ್ಣಯ್ಯ, ಜೋನ್ ಪೌಲ್ ಡಿ'ಸೋಜ, ಡಿ. ವೆಂಕಟ್ರಾವ್, ಕುಂಜತ್ ಬೈಲ್ ಪಠೇಲ್ ದೇವಪ್ಪ ಮಲ್ಲಿ, ಮಲವೂರು ಪಠೇಲ್ ಯಂ. ಕಾಂತಪ್ಪ ಸೆಟ್ಟಿ, ಪಣಂಬೂರು ಪಠೇಲ್ ದುಗ್ಗಪ್ಪಯ್ಯ, ಕುತ್ತೆತ್ತೂರು ಪಠೇಲ್ ಪಕೀರ ಸೆಟ್ಟಿ.

ಹನ್ನೆರಡಾಣೆ ಕೊಟ್ಟವರು.

ಬಿ. ವಾದಿರಾಜ ತಂತ್ರಿ.

೦—೮—೦ಯಂತೆ ಕೊಟ್ಟವರು.

ಯನ್. ಯಸ್. ರಾವ್, ಮಂಜುನಾಥ ಪೈ, ಎ. ಟಿ. ಯಂ. ಸಲ್ದಾನ, ಯು. ಸೋಮಯ್ಯ, ಕೆ. ದೇವಪ್ಪ, ಮಿಸೆಸ್ ಗ್ರೇಸ್ ಮಿನೇಜಸ್, ಯಸ್. ಸುಂದರರಾವ್, ಕೆ. ಪಿ. ಕುನ್ನಿ ಕನ್ನನ್, ಸಿ. ಎ. ಐರನ್, ಜೆ. ಯಂ. ಜೆ. ಫೆರ್ನಾಂಡಿಸ್, ಕ್ಲೇವಿಯರ್ ಕುನ್ನ, ಮೇರಿಯಾನ ಎಶ್‌ವೆಲ್, ಯಂ. ಮಂಜಯ ಸೆಟ್ಟಿ, ಸರಸ್ವತಿ, ಅಚ್ಚುತ್ತ ಕವ್ತಿ, ಕೂಳೂರು, ತೋಮಸ್ ಡಿ'ಸೋಜ, ಕೂಳೂರು, ತನಿಯ ಮಲ್ಯ, ಪಡೂರು, ಸೀನ ಮಲ್ಯ, ಪಡೂರು, ಕೆ. ರಾಮರಾವ್, ಚಿಕ್ಕಯ್ಯ ಐಕ, ಮರವೂರು, ಕೆ. ನಾರಾಯಣ ಆಳ್ವ, ಕೆ. ಆನಂದರಾವ್, ಕೆ. ವಿಟ್ಟಲ್ ನಾಯ್ಕ, ಕೆ. ನಾರಾಯಣ ಆಳ್ವ, ಕೆ. ಪದ್ಮನಾಭ ಪ್ರಭು, ತ್ಯಾಂಪು ಬುಡಲೆ, ಯಂ. ಕೊಲ್ಲುರಾಯ, ಯಂ. ಶ್ರೀನಿವಾಸಯ್ಯ, ರಾಘವ ಸೆಟ್ಟಿ, ಸಂಜೀವ ಹೆಗ್ಡೆ, ಅಣ್ಣು, ಯಂ. ವೆಂಕಟ್ರಾವ್, ಪಕೀರ ಪೂಜಾರಿ, ಯಚ್. ಸುಬ್ಬಣ ಹಕ್ವಾರ, ಬಿ. ರಾಮಕೃಷ್ಣಯ್ಯ, ಎ. ಶಿವರಾಮರಾವ್, ವೆಂಕಣ್ಣ ಸೆಟ್ಟಿ.

೦—೬—೦ ಕೊಟ್ಟವರು.

ಕೆ. ಪ್ರಭಾಕರ ಪ್ರಭು.

೦—೪—೦ಯಂತೆ ಕೊಟ್ಟವರು.

ಯಂ. ಅನಂತ ಪ್ರಭು, ಪಿ. ಜೆ. ಸಿಕೇರ, ಎ. ಕೃಷ್ಣರಾವ್, ಯಚ್. ಗೋಪಾಲ ನಾಯ್ಕ, ಪಿ. ದೇವರಾವ್, ಯಚ್. ಚೆರ್ಡಪ್ಪ ನಾಯ್ಕ, ಯಂ. ಡಿ'ಸೋಜ, ಯಂ. ನಾರಾಯಣ ಭಟ್, ಡಿ. ಯಂ. ಅಬುಬಕ್ಕರ್, ಟಿ. ವೆಂಕಟರಾವ್, ಯಂ. ಐತಪ್ಪ, ಯಂ. ಸುಬ್ಬರಾವ್, ಕೆ. ಸುಂದರರಾವ್, ಯಂ. ಅಬ್ದುಲ್ ಕರೀಂ ಸಾಹೇಬ, ಕೆ. ಚಂದ್ರಯ ಆಚಾರಿ, ಯಂ. ಗಣಪತಿ, ಯಂ. ವಾಸುದೇವ ಪ್ರಭು, ಬಿ. ಯಂ. ಸುಂದರ, ಯಂ. ಶಂಕರ ಮೆನನ್, ಕೆ. ಜಿ. ನಂಬಿಯಾರ್, ವರಮೇಶ್ವರ್, ಎನ್ನಿ ಲೋಬೊ, ಡೇನಿಯಲ್ ಕೋಡ್ರಸ್, ಬುಲಾಸ್, ಶ್ಯಾಮರಾವ್, ತೋಮರ ಸೆಟ್ಟಿಗಾರ, ಚಂದು ಸೆಟ್ಟಿ, ಮಂಗಳಪೇಟೆ ಉಪೇಂದ್ರ ಮುಕುಂದ ಕಾಮತ್, ಈಶ್ವರ ಮೇಲಂತ, ಆರ್. ರಾಮರಾವ್, ಕಲಾಯಿ ಮಾಮ್ ಬ್ಯಾರಿ, ಪಿ. ರಾಮಚಂದ್ರ ರಾವ್.

ನೊಕ್ಕಿದ ನರಗಳಿಗೆ ಪಟುತ್ವವೀವುದು



Alembic
The Seal of Purity

ಜೀರ್ಣಶಕ್ತಿ ಮತ್ತು ದೇಹಬಲ ಹೆಚ್ಚಿಸುವ ಔಷಧಗಳಲ್ಲಿ ಅಲೆಂಬಿಕ್ ಹೆಮೋ ದ್ರಾಕ್ಸೋಮ್ಯಾಲ್ಟ್ ಶ್ರೇಷ್ಠವಾದದ್ದು.

ಇದು ಬಲವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸಿ ನರಗಳಿಗೆ ಪಟುತ್ವವನ್ನು ಕೊಡುವುದೇ ಅಲ್ಲದೆ ಜೀವನಸೌಖ್ಯವನ್ನನುಭವಿಸಲು ಸಹಾಯವಾಡುವುದು.

ಹೆಮೋ-ದ್ರಾಕ್ಸೊ-ಮಾಲ್ಟ್

ಅಲೆಂಬಿಕ್ ಕೆಮಿಕಲ್ ವರ್ಕ್ಸ್, ಲಿಮಿಟೆಡ್.

ಮುಂಬಯಿ ಬರೂಡಾ ಮದರಾಸು.

೦—೨—೦ಯಂತೆ ಕೊಟ್ಟವರು.

ಕೆ. ಗೋವಿಂದರಾವ್, ಯಲ್. ಗಾಯತ್ರಿನಾಥ ಅಯ್ಯರ್, ಯಸ್. ಲಿಂಗಪ್ಪ, ಟಿ. ಶ್ರೀನಿವಾಸರಾವ್, ಕೆ. ನಾರಾಯಣ, ಯಂ. ಯನ್. ಕಾಮತ್, ಯಚ್. ಶೇಕ್ ಇಸ್ಮಾಯಿಲ್, ಸಿ. ವೆಂಕಟರಾವ್, ಕೆ. ರಾಮಚಂದ್ರರಾವ್, ಯಚ್. ರಂಗಪ್ಪಯ್ಯ, ಎ. ರಾಮಪ್ಪ, ಬಿ. ಬಾಬು, ಪಿ. ಸುಂದರರಾವ್, ಯಸ್. ದಾಸಪ್ಪಯ್ಯ, ಸಾಬ್ಜಾನ್ ಸಾಹೇಬ, ಲಕ್ಷ್ಮೀನಾರಾಯಣ ಭಟ್ಟ, ಗೋಪಾಲಕೃಷ್ಣಯ್ಯ, ಕೃಷ್ಣ ನಾಯ್ಕ, ಪಿ. ಚಡ್ಡಪ್ಪ ಕಾಮತ್, ಅಮ್ಮಚ್ಚು ಕುಡ್ವ, ಅನಂತ ನಾಯ್ಕ, ಜನಾರ್ಧನಾಚಾರಿ.

ಮ. ರಾ. ರಾ. ಇ. ಕೆ. ಕೃಷ್ಣನ್ ಅವರ್ಗಳ್, ಇವರ ಮೂಲಕ ಬಂದ ಕಲೆಕ್ಷನ್.

ಮ. ರಾ. ರಾ.ಗಳಾದ ಇ. ಕೆ. ಕೃಷ್ಣನ್ ಅವರ್ಗಳ್, ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸರ್ ರೂ. ೧೦; ರಾಮುನ್ನಿ ಮೆನನ್ ಅವರ್ಗಳ್, ರೇಂಜ್ ಆಫೀಸರ್ ರೂ. ೫; ಕುನ್ನಿರಾಮು ಮೆನನ್ ಅವರ್ಗಳ್, ರೇಂಜ್ ಆಫೀಸರ್ ರೂ. ೨; ಸಿ. ವಾಸು ಅವರ್ಗಳ್, ರೇಂಜ್ ಆಫೀಸರ್ ರೂ. ೩; ಆಲ್ಬರ್ಟ್ ಸಿಕೇರ ಅವರ್ಗಳ್, ಕ್ಲಾರ್ಕ್ ಆಣೆ ೮; ಯಲ್. ಪಿ. ಡಿ. ಸೋಜ ಅವರ್ಗಳ್, ಕ್ಲಾರ್ಕ್ ಆಣೆ ೮; ಬಿ. ವಿ. ಸುಬ್ರಮಣ್ಯ ಅಯ್ಯರ್ ಅವರ್ಗಳ್, ಡ್ರೇಫ್ಟ್‌ಸ್‌ಮೇನ್ ಆಣೆ ೮; ಸಿ. ಸಿ. ಅಚ್ಚುತ್ತನ್ ಅವರ್ಗಳ್, ಕ್ಲಾರ್ಕ್ ಆಣೆ ೮; ಬಿ. ಪಾಂಡುರಂಗರಾವ್ ಅವರ್ಗಳ್, ಕ್ಲಾರ್ಕ್ ರೂ. ೧; ಯಸ್. ಪಿ. ಯಲ್. ಪಿಂಟೊ ಅವರ್ಗಳ್, ಕ್ಲಾರ್ಕ್ ರೂ. ೧; ಯನ್. ಯಂ. ವೆಂಕಟರಾವ್ ಅವರ್ಗಳ್, ಕ್ಲಾರ್ಕ್ ರೂ. ೧; ಯಂ. ಸಿಕೇರ ಅವರ್ಗಳ್, ಫೊರೆಸ್ಟರ್ ರೂ. ೧; ಯಂ. ಯಂ. ಮುದ್ದಯ್ಯ ಅವರ್ಗಳ್, ಫೊರೆಸ್ಟರ್ ರೂ. ೧; ಸಿ. ಜೆ. ಕೊಯಿಲೊ ಅವರ್ಗಳ್, ಫೊರೆಸ್ಟರ್ ರೂ. ೧; ಸಿ. ಕೆ. ಗೋಪಾಲ ಪಿಳ್ಳೆ ಅವರ್ಗಳ್, ಫೊರೆಸ್ಟರ್ ರೂ. ೧; ಜೋನ್ ಜೀಸುದಾಸನ್ ಅವರ್ಗಳ್, ಫೊರೆಸ್ಟರ್ ರೂ. ೧; ಜೋನ್ ವೊಂತೇರೊ ಅವರ್ಗಳ್, ಫೊರೆಸ್ಟರ್ ರೂ. ೧; ಇ. ಪಿ. ಕೃಷ್ಣ ಮೆನನ್ ಅವರ್ಗಳ್, ಫೊರೆಸ್ಟರ್ ರೂ. ೧—೮—೦; ಬಿ. ದೇವಪ್ಪ ಹೆಗ್ಗಡೆ ಅವರ್ಗಳ್, ಫೊರೆಸ್ಟರ್ ಆಣೆ ೮; ಸಿ. ಡಿ. ಕುಟಿನ್ನ ಅವರ್ಗಳ್, ಫೊರೆಸ್ಟರ್ ರೂ. ೧; ಯಂ. ಎ. ರಾಮಕೃಷ್ಣ ಅವರ್ಗಳ್, ಫೊರೆಸ್ಟರ್ ರೂ. ೧; ಸೇಕ್ ಬುಡಾನ್ ಅವರ್ಗಳ್, ಫೊರೆಸ್ಟರ್ ರೂ. ೧.

(ಮುಂದರಿಯುವುದು)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

"ಗೊನೊಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER (REGD. ORIGINAL TRADE MARK)

ಇಂದಿನ ಆಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ಸಮ್ಮೋಹನ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರಪಿಲ್ಲೆ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—೦—೦ (ಮೂರು) ವಿ. ಪಿ. ಖರ್ಚು ಬೇರೆ.

ಸಕಲ ಮುದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

ಮಂಗಳೂರು ಪೇಟೆಯ ಚಾಲತಿ ಧಾರಣೆ.

ಅಕ್ಕಿ	...	3— 6	3—10
ಅಕ್ಕಿ ಉಪ್ಪು ಮಣ ಒಕ್ಕೆ	...	3—12	4— 8
ಅಕ್ಕಿ	...	3—10	3—14
ಅಕ್ಕಿಲ್ ಬೆಲ್ಲಗೆ „ ರಿ„	...	4— 4	4—12
ಅಕ್ಕಿ ಬೆಲ್ಲಗೆ „ „	...	3—10	4— 0
ಅಕ್ಕಿಲ್ ಬೆಲ್ಲಗೆ ಗೊ ಟಣಂಗಕ್ಕೆ	...	6— 2	7— 0
ಅಕ್ಕಿಲಾ ಗೊಜ್ಜೆ ಒಕ್ಕೆ	...	8— 8	10— 4
ಅಕ್ಕಿಲಾ „ „	...	5— 4	5—14
ಅಕ್ಕಿಲಾ „ „	...	7—10	9— 0
ಅಕ್ಕಿಲಾ „ „	...	9— 0	9— 8
ಅಕ್ಕಿಲಾಬೇಳೆ ಗೊಜ್ಜೆ ಒಕ್ಕೆ	...	11— 0	19— 0
ಅಕ್ಕಿಲ್ಲ ಹುಡಿ ಒಕ್ಕೆ	...	4— 6	—
ಅಕ್ಕಿರು „ „	...	4— 4	—
ಅಕ್ಕಿ ಗೊಜ್ಜೆ ಒಕ್ಕೆ	...	5— 0	6— 4
ಅಕ್ಕಿಲ ಬೆಲ್ಲ ಖಂಡಿ ಒಕ್ಕೆ	...	30— 0	35— 0
ಅಕ್ಕಿಲ್ಲ ಗೊಜ್ಜೆ „	...	4— 8	4—12
ಅಕ್ಕಿಲ್ಲ ಖಂಡಿ „	...	60—	70— 0
ಅಕ್ಕಿಲ್ಲ ಹಿಂಡಿ ಖಂಡಿ ಒಕ್ಕೆ	...	22— 0	23— 0
ಅಕ್ಕಿಲ್ಲ ಖರಡಿ ಒಕ್ಕೆ	...	22— 8	25— 0
ಅಕ್ಕಿಲ್ಲ ಎಣ್ಣೆ ಮಣ ಒಕ್ಕೆ	...	4—12	5—12
ಅಕ್ಕಿಲ್ಲ ಹಬ್ಬಿಗೆ	...	—	6— 0
ಅಕ್ಕಿಲ್ಲ ಎಣ್ಣೆ ಹೆಬ್ಬಿಗೆ ಒಕ್ಕೆ	...	—	6— 5
ಅಕ್ಕಿಲ್ಲಿಸ್ ಸಕ್ಕರೆ ಮಣ ಒಕ್ಕೆ	...	3— 9	—
ಅಕ್ಕಿಲಿನ ಕಾಯಿ ಮಣ ಒಕ್ಕೆ	...	2— 8	3— 2
ಅಕ್ಕಿಲ್ಲಿ ಹುಡಿ ಒಕ್ಕೆ	...	5— 4	6— 0
ಅಕ್ಕಿಲ್ಲಿಚರಿ ಹುಡಿ ಒಕ್ಕೆ	...	2— 8	3— 0
ಅಕ್ಕಿಲಿ ಕಾಫಿ ಖಂಡಿ ಒಕ್ಕೆ	...	135— 0	145— 0
ಅಕ್ಕಿಲಿ ಪೀಬರಿ ಕಾಫಿ ಖಂಡಿ ಒಕ್ಕೆ	...	160— 0	170— 0
ಅಕ್ಕಿಲ್ಲಸೂಸ್ ಏ ಏ ಕಾಫಿ ಖಂಡಿ ಒಕ್ಕೆ	...	170— 0	175— 0
ಅಕ್ಕಿಲ್ಲಿಗೋಟು ಅಡಿಕೆ ಖಂಡಿ ಒಕ್ಕೆ (ಹಳ್ತು)		100— 0	115— 0
ಅಕ್ಕಿಲಿಮಾಸು ಖಂಡಿ ಒಕ್ಕೆ	...	95— 0	102— 8
ಅಕ್ಕಿಲ್ಲಿ ಮಣ ಒಕ್ಕೆ ಕೊಡಗು	...	40— 0	45— 0
„ „ „ ಸಕಲೇಶಪುರ	...	30— 0	35— 0
„ „ „ ಬೀಜ	...	40— 0	50— 0
ಗೇರುಬೀಜ ಹುಡಿ ಒಕ್ಕೆ	...	4— 4	4— 6
ಅಕ್ಕ ಹುಡಿ ಒಕೆ	...	1— 8	1—10
ಅಕ್ಕಿ ಹುಡಿ ಒಕ್ಕೆ	...	5— 0	5— 4
ಅಕ್ಕಿಪ್ಪ ಮಣ ಒಕ್ಕೆ	...	17— 0	18— 0
ಅಕ್ಕಿಲ ಖಂಡಿ ಒಕ್ಕೆ	...	35— 0	37— 8
ಅಕ್ಕಿಲ್ಲಾ ತಗಡು ಮಣ ಒಕ್ಕೆ	...	9—12	9—14
ಅಕ್ಕಿಲು ಒಕ್ಕೆ	...	22— 8	—
ಅಕ್ಕಿಲ್ಲಿ ಪಾತ್ರಗಳು ಮಣ ಒಕ್ಕೆ	...	12— 8	14— 0
ಅಕ್ಕಿಲ ಹೆಳೆ ಸೇರು ಒಕ್ಕೆ	...	17— 8	18— 0
ಅಕ್ಕಿಲ್ಲಾ ತಗಡು ಮಣ ಒಕ್ಕೆ	...	10— 0	10— 0
ಅಕ್ಕಿಸಕ್ಕ ಬಿಳಿಗೋಟು ಖಂಡಿ ಒಕ್ಕೆ	...	75— 0	85— 0
ಅಕ್ಕಿಲಿಕೊರು ಹಂಚು I ಕ್ಲಾಸ್—1000ಕ್ಕೆ		ರೂ. 26ರಿಂದ	30
„ ಹಂಚಿಗಳು „	„	ರೂ. 70ರಿಂದ	80
ಅಕ್ಕಿಲ್ಲಿ ಹಾಸುವ ಇಟ್ಟಿಗೆಗಳು „	„	ರೂ. 35ರಿಂದ	40

ಮಂಗಳೂರಿನ ವಾತಾವರಣ ಪರಿಸ್ಥಿತಿ.

ತಾರೀಖು	ಉಷ್ಣತೆ ಡಿಗ್ರಿ	ಹೀನೋಷ್ಣ ಡಿಗ್ರಿ	ವೃಷ್ಟಿ (ಇಂಚು) 24 ತಾಸುಗಳಲ್ಲಿ	ಏಪ್ರಿಲ್ 1ರಿಂದ	ಸಾಮಾನ್ಯ ಮಾಸದ ಪೆಚ್ಚು ಕಡಮೆ
7-7-'36	85.2	77.5	0 03		
8-7-'36	85.9	77.2	0.27		
9-7-'36	85.8	77.7	0.20		
10-7-'36	84.8	73.4	2.83		
11-7-'36	81.4	75.4	1.28		
12-7-'36	83.5	75.5	0.81		
13-7-'36	84.1	75 2	0.58	68.21	

ಕಂಠೀರವ

ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪ್ರಕಟವಾಗುವ
ಶ್ರೇಷ್ಮವರ್ಗದ ಕನ್ನಡ ವಾರ್ತಾ ಪತ್ರಿಕೆ.

ಚೆಂದಾ ವಿವರ.

	ಸ್ಥಳದವರಿಗೆ	ಪರಸ್ಥಳದವರಿಗೆ
೧ ವರ್ಷಕ್ಕೆ	ರೂ. ೨—೮—೦	ರೂ. ೪— ೨—೦
೬ ತಿಂಗಳುಗಳಿಗೆ	ರೂ. ೧—೪—೦	ರೂ. ೨— ೧—೦

ಬಿಡಿ ಸಂಚಿಕೆ ಬೆಲೆ ಮಂಗಳವಾರ ೦—೧—೦.
ಶುಕ್ರವಾರ ೧—೦—೬.

ಮಾದರಿ ಸಂಚಿಕೆಗಳು ಅಪೇಕ್ಷಕರಿಗೆ ಧರ್ಮಾರ್ಥವಾಗಿ ಕಳುಹಲ್ಪಡುವವು.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಬಿಡಿ ಸಂಚಿಕೆಗಳು ವಿಕ್ರಯಕ್ಕೆ ಸಿಗುವವು.

ನಮ್ಮ ಏಜೆಂಟರಿಲ್ಲದ ಸ್ಥಳಗಳಲ್ಲಿ ಏಜೆಂಟರಾಗಲಪೇಕ್ಷಿಸುವವರು ಕೂಡಲೇ ಬರಕೊಳ್ಳಬಹುದು. ಧಾರಾಳವಾದ ಕಮಿಶನ್ ಕೊಡಲಾದೀತು.

Circulation Manager,
THE KANTEERAVA,
MANGALORE.

ಮಂಗಳೂರಿನಲ್ಲಿ ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ	ಘಂಟೆ	ತಲಪುವ	ಘಂಟೆ
ಮಿಕ್ಸೆಡ್	ಬೆಳಿಗ್ಗೆ	5-55	ರಾತ್ರಿ	8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಿಗ್ಗೆ	8-25	ಮಧ್ಯಾಹ್ನ	1-20
ಮಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ	9-50	ಸಂಜೆ	4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	12-45	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸಂಜರ್	ಮಧ್ಯಾಹ್ನ	3-20	ಸಂಜೆ	6-15
ಶಟಲ್	ಸಂಜೆ	5-25	ಬೆಳಿಗ್ಗೆ	9-20

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.
O. P. No. 86/1936.

ಲಕ್ಷ್ಮಮತಿ — ಅರ್ಜಿದಾರಳು.
ಸೇಸಮ್ಮ ಹೆಂಗ್ಸು — ಎದ್ರಿಳು.

ಪುತ್ತೂರು ತಾಲೂಕು ಆಲಂಕಾರು ಗ್ರಾಮದ ಬೋರ್ಡು ಸ್ಕೂಲು ಮಾಸ್ತರು ಕೆ. ಗುಮ್ಮಣ್ಣಯ್ಯನವರು ಮೃತಪಟ್ಟಿರುವುದರಿಂದ ಸದ್ರಿಯವರ ಬಾಬ್ತು ಪುತ್ತೂರು ತಾಲೂಕು ಬೋರ್ಡು ಸರ್ವೆಂಟ್ಸ್ ಮ್ಯೂಚುವಲ್ ಬೆನೆಫಿಟ್ ಫಂಡಿನಿಂದ ಬಹಾ ರೂಪಾಯಿ 148—14—0ನ್ನು ಪಡೆಯುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕೆಂತ ವಗೈರೆ ಮೃತನ ವಿಧವೆ ಮ್ಯಾನರಳಾದ ಸದ್ರಿ ಅರ್ಜಿದಾರಳ ಕಡೆಯಿಂದ ಕೋರ್ಟು ಗಾರ್ಡಿಯನ್ ಪುತ್ತೂರು ವಕೀಲ್ ಎಚ್. ಪಿ. ಎ. ಜೈನ್ ಸದ್ರಿ ಅರ್ಜಿ ಕೊಟ್ಟಿರುವುದರಿಂದ ಆಕ್ಷೇಪವುಳ್ಳವರು ತಾ. 27—7—'36ನೇ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪಣೆ ಹೇಳಿಕೊಳ್ಳತಕ್ಕದ್ದು.

ಪುತ್ತೂರು, ತಾ. 4—7—'36. } **H. P. A. Jain,** ಕೋರ್ಟು ಗಾರ್ಡಿಯನ್.

ನೋಟೀಸು

ಕುಂದಾಪುರ ಪಂಚಾಯ್ತ ಕೋರ್ಟಿನಲ್ಲಿ
ಸಿವಿಲ್ ವ್ಯಾ. ಸಂ. 167/36.

ವಾದಿ: ವಿ. ಲಕ್ಷ್ಮಣ ಪ್ರಭು, ಜವುಳಿ ಅಂಗಡಿ, ಕೋಟ.
ಪ್ರತಿವಾದಿ: ಬೈಲೂರು ದೇವರಾಯ ಭಂಡಾರಿ, ಅಣ್ಣಪ್ಪ ಭಂಡಾರರ ಮಗ, ಕುಂದಾಪುರ ಕಸಬಾ.

ಮೇಲಿನ ಕೋರ್ಟಿನಲ್ಲಿ ಸದ್ರಿ ವಾದಿಯು ಪ್ರತಿವಾದಿ ಬೈಲೂರು ದೇವರಾಯ ಭಂಡಾರಿಯ ಮೇಲೆ ರೂಪ್ಯಾ 49-15-0ಗೆ ದಾವಾ ಮಾಡಿರುತ್ತಾನೆ. ದಾವೆಯ ನೋಟೀಸುಗಳಿಗೆ ಪ್ರತಿವಾದಿಯು ತಪ್ಪಿಸಿಕೊಳ್ಳುತ್ತಾನಾಗಿ ತಿಳಿದುಬಂದಿದೆ. ಸದ್ರಿ ನಂಬ್ರವು ಇದೇ ತಾ. 24—7—36ಕ್ಕೆ ಆಖೈರು ತನ್ನಿಗೆ ಇಟ್ಟಿರುತ್ತದೆ. ಆ ದಿವಸಕ್ಕೆ ಪ್ರತಿವಾದಿಯು ತಪ್ಪದೆ ಹಾಜರಾಗಿ ಉದಾಹರಣೆ ಕೊಡದಿದ್ದರೆ ನಂಬ್ರವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ.

ಕುಂದಾಪುರ, ತಾ. 9—7—'36. } **V. Laxmana Prabhu,** ಸದ್ರಿ ದಾವೆಯ ವಾದಿ.

ಶಕ ೧೮೫೭ ಧಾತು ಸಂ। ೧೯೩೫ನೇ ಇಸವಿ ಜುಲಾಯಿ ಮಾಹೆ ಪಂಚಾಂಗ

ತಾರೀಖು	ವಾರಗಳ ಹೆಸರು	ಚಾಂದ್ರಮಾನ ಮಾಸ	ತಿಥಿ	ಕಾಲ	ಸೌರಮಾನ ಮಾಸ	ತೇದಿ	ನಕ್ಷತ್ರಗಳು ಹೆಸರು	ಕಾಲ	ಸೂರ್ಯ ಉದಯ	ಸೂರ್ಯ ಅಸ್ತ
1	2	3	4	5	6	7	8	9	10	11	
				ಘ.ವಿ				ಘ. ವಿ.	ಗಂ. ನಿ.	ಗಂ.ನಿ.
15	ಬುಧವಾರ	ಆಷಾಢ ಬಹುಳ	12	44 48	ಕರ್ಕಾಟಕ ಸಂಕ್ರಮಣ	32	ರೋಹಿಣಿ	42 44	6 3	6 52
16	ಗುರುವಾರ		13	40 32		1	ಮೃಗ.	40 26	6 3	6 52
17	ಶುಕ್ರವಾರ		14	37 16		2	ಆರ್ದ್ರಾ	39 3	6 3	6 52
18	ಶನಿವಾರ		30	35 0		3	ಪುನರ್ವ.	38 43	6 4	6 52
19	ಆದಿತ್ಯವಾರ		1	33 55		4	ಪುಷ್ಯ	39 33	6 4	6 52
20	ಸೋಮವಾರ		2	34 5		5	ಆಶ್ಲೇಷ	41 37	8 4	6 52
21	ಮಂಗಳವಾರ		3	35-1		6	ಮಖ	44 55	6 4	6 52

ರಾಹುಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ
ಭಾನು	ಸಾಯಂಕಾಲ	4½	6
ಸೋಮ	ಬೆಳಿಗ್ಗೆ	7½	9
ಮಂಗಳ	ಸಾಯಂಕಾಲ	3	4½
ಬುಧ	ಬೆಳಿಗ್ಗೆ	12	1½
ಗುರು	ಸಾಯಂಕಾಲ	1½	3
ಶುಕ್ರ	ಬೆಳಿಗ್ಗೆ	10½	12
ಶನಿ	ಬೆಳಿಗ್ಗೆ	9	10½

ಗುಳಿಕಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ.
ಭಾನು	ಸಾಯಂಕಾಲ	3	4½
ಸೋಮ	„	1½	3
ಮಂಗಳ	ಬೆಳಿಗ್ಗೆ	12	1½
ಬುಧ	„	10½	12
ಗುರು	„	9	10½
ಶುಕ್ರ	„	7½	9
ಶನಿ	„	6	7½

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕೆಲ್ಮದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚು ವುದು, ಮಲಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು. ಬಾಟ್ಲಿ 1ಕ್ಕೆ ರೂ. 2—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣಜ್ವರ, ಕಫಜ್ವರ ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ಕ್ಕೆ ರೂ. 1—8—0.

ಮೇಹಕುಠಾರ

ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹರೋಗಗಳನ್ನು ಗುಣಪಡಿಸುವುದು. ಕ್ರಯ ಡಬ್ಬಿ 1ಕ್ಕೆ ರೂ. 2—8—0 ಮಾತ್ರ.

ಎಚ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ, ನಂಬ್ರ 18, ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:- ಶ್ರೀ ರಾಮಾ ಸ್ವೇಶರಿ ಹೌಸ್, ಶ್ರೀ ರಾಮು ಪೇಟೆ, ಕಾಸರಗೋಡು. ಡಾ। ಶ್ರೀನಿವಾಸ ಪೈ, ಪುತ್ತೂರು. ಮುಲ್ಲರಪೆಟೆನ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ., ವಿಟ್ಟಲ ಭ್ಯಾ ಪಟೇಲ್ ರೋಡ್, ಬಾಂಬಾಯಿ. ದಿ ವೆಂಕಟಿ ಹೋಲ್, ಮಡಿಕೇರಿ, ಕೂರ್ಗ್. ರಾವ್ ಫಾರ್ಮಸಿ, ಸಾಗರ.

ಮಾರ್ಗೊ ಸೋಪ್

ಬೇಸಿಗೆಯ ಕಾಲಕ್ಕೂ ಚರ್ಮದ ಮೃದುತ್ವಕ್ಕೂ
ಅತ್ಯುತ್ಕೃಷ್ಟವಾದುದು.

ಇದೇ ಪ್ರಥಮವಾದ ಮತ್ತೂ ಆಗಿರತಕ್ಕ ಒಂದೇ ಒಂದು "ನೀಮ್" ಸಾಬೂನು.

ಎಲ್ಲೆಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಮತ್ತು ಸ್ಥಳೀಯ ಸ್ಟೋಕಿಸ್ಟರಲ್ಲಿ ದೊರೆಯುತ್ತದೆ

"ನೀಮ್" ಟೂತ್‌ಪೇಸ್ಟ್

ಭಾರತೀಯರು ಅನಾದಿಕಾಲದಿಂದಲೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವ "ನೀಮ್" ಬೇವಿನ ಕಡ್ಡಿಯ ವಿಷಹಾರಿಯಾದ ಮತ್ತು ಸ್ತಂಭಕವಾದ ಗುಣಗಳೆ ಅದರ ಆರೋಗ್ಯಕರವಾದ ಹಲ್ಲುಗಳ ಗುಟ್ಟೆಂದು ತಿಳಿಯಲಾಗಿದೆ.

ಕಾಲ್ಕೆಮಿಕೊ ನೀಮ್ ಟೂತ್‌ಪೇಸ್ಟ್

ಬೇವಿನ ಕಡ್ಡಿಯ ಎಲ್ಲಾ ಗುಣಗಳನ್ನು ಉಳ್ಳುದಾಗಿದೆಯಲ್ಲದೆ ಪರಿಣಾಮಕಾರಿಯಾಗಿ ಹಲ್ಲನ್ನು ಶುದ್ಧಗೊಳಿಸುವದಕ್ಕೆ ಆಧುನಿಕ ದಂತ ವೈದ್ಯ ಶಾಸ್ತ್ರಕ್ಕೆ ತಿಳಿದಿರುವ ಪದಾರ್ಥಗಳನ್ನು ಒಳಕೊಂಡಿದೆ.

ಸೀಸವಿಲ್ಲದ ಟಿನ್ನಿನ ಕೊಲ್ಲ್ಯಾಪ್ಸಿಬಲ್ ಟ್ಯೂಬುಗಳಲ್ಲಿದೆ.

ದಾತನುಜ್ಜನನನ್ನು ಅಪೇಕ್ಷಿಸುವವರ ಉಪಯೋಗಕ್ಕಾಗಿ ನಮ್ಮ

ಮಾರ್ಗೋಫ್ಲಿಸ್ "ನೀಮ್ ಹಲ್ಲುಪುಡಿ"

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟೆ ಬಜಾರ್.
ಯು. ಆರ್. ಶೆಣೈ ಎಂಡ್ ಸನ್ಸ್, ರಥಬೀದಿ.
ಸ್ಕೂಲ್ ಬುಕ್ ಕೋ, ರಥಬೀದಿ.

1935ನೇ ದಶಂಬರದಲ್ಲಿದ್ದಂತೆ

ಬೆಲೆನಿರ್ಣಯದ
ಫಲಿತಾಂಶವು.

ಐದೈದು ವರ್ಷಗಳಿಲ್ಲಾಗುವ ಲೆಕ್ಕಾಚಾರದ ತೆಲುಕು

ರೂ. **26,24,202.**

ಪ್ರೀಮಿಯಮ್ಮಿನ ಚಾಲತೀ ದರಗಳಂತೆ

ಪ್ರಕಟಗೊಳಿಸಿದ ಬೋನಸು.

ಇಡೀ ಜೀವವಾನಕ್ಕೆ ವರ್ಷಕ್ಕೆ	ಎಂಡೋಮೆಂಟ್ ವಿಮೆ ವರ್ಷಕ್ಕೆ
ರೂ. 1000ಕ್ಕೆ ರೂ. 18.	ರೂ. 1000ಕ್ಕೆ 16.

ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,

ಹೆಡ್ ಆಫೀಸು:
7, ಕೌನ್ಸಿಲ್ ಹೌಸ್ ಸ್ಟ್ರೀಟ್, ಕಲ್ಕತ್ತ

S. K. M.

ಸಿದ್ಧಕಲ್ಪ ಮಕರಧ್ವಜ

(ರಿಜಿಸ್ಟರ್ಡ್)

ನಿಶ್ಯಕ್ತಿ, ನರಗಳ ಬಲಹೀನತೆ, ಅಜೀರ್ಣ, ಉಬ್ಬುಸ, ಮೇಹವ್ಯಾಧಿ, ಮೇಹ ವ್ರಣಗಳು, ಸ್ತ್ರೀ ಸಂಬಂಧದಿಂದುಂಟಾಗುವ ವ್ಯಾಧಿಗಳು, ಸ್ತ್ರೀಯರ ಗರ್ಭಾಶಯ ಮತ್ತು ಸೂತಿಕಾ ಸಂಬಂಧವಾದ ಎಲ್ಲಾ ವ್ಯಾಧಿಗಳು, ಚಿಕ್ಕಂದಿನ ದುರ್ನಡತೆಯ ಪರಿಣಾಮವಾಗಿ ಉಂಟಾಗುವ ವೀರ್ಯಕ್ಷಯ ಮತ್ತು ಬಲಹೀನತೆ ಇವುಗಳಿಗೆಲ್ಲಾ ಮಹಾಮಹಿಮೆಯುಳ್ಳ ದಿವ್ಯೌಷಧ ಇದು ಒಂದೇ. ೫೦ ವರ್ಷಗಳಿಂದ ಪ್ರಖ್ಯಾತಿಹೊಂದಿ ಅನೇಕ ಸುವರ್ಣ ಪದಕಗಳನ್ನೂ ಮತ್ತು ಯೋಗ್ಯತಾಪತ್ರಗಳನ್ನೂ ಹೊಂದಿರುತ್ತದೆ.

ಕ್ರಯ ೬೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ರೂ. ೧೦.

THE MADRAS
AYURVEDIC PHARMACY (LTD.),
Madras—P. O. Box 151, 289 Esplanade,
180, Mount Rd., MADRAS.

THE BANK OF MANGALORE, LTD.,

Head Office:—SRI LAXMINARAYAN BLDGS., CAR ST: MANGALORE. Branch:—MOODABIDRI.

ದಿ ಬೇಂಕ್ ಆಫ್ ಮಂಗಳೂರು, ಲಿಮಿಟೆಡ್, ಮಂಗಳೂರು.

Authorised Capital ಅಧಿಕೃತ ಮೂಲಧನ	Rs. 2,00,000.	Subscribed Capital ಚಂದಾ ಅರ್ಪಿಸಿದ್ದು	Rs. 30,175	Paid-up Capital ತೆತ್ತು ಬಂದದ್ದು	Rs. 6,915.

STATEMENT OF AFFAIRS AS ON 31ST DEC. 1935.

Capital ಶಾಲು ಷೇರುಗಳಿಂದ ಪಡೆದಿರುವ ಧನ	ರೂ.	6,915 – 0 – 0	Furniture and Safe ಟ್ರೆಜರಿ ವಗೈರೆ	ರೂ.	1,058— 0— 0
Reserve Fund ಕ್ಷೇಮ ನಿಧಿ	ರೂ.	1,000– 0 – 0	Authorised Investments ಪಿನ್ನಾಧರಣ, ವ ಇತರ ಜವಾಬ್ದಾರಿಯ ಮೇಲೆ	ರೂ.	112,508— 1— 8
Deposits, Fixed, Current, etc. ನಿರಖು, ಚಾಲ್ತಿ ಇತ್ಯಾದಿ ಠೇವಣಾತಿಗಳು	ರೂ.	84,706 – 9 – 4	Bills per contra ಬಿಲ್ಸ್ ಜಮಾ ಇರುವಂತೆ ಬಹಾ	ರೂ.	17,779—10— 5
Due to Bankers ಬೇಂಕರರಿಗೆ ಸಲ್ಲುತಕ್ಕದ್ದು	ರೂ.	21,996— 1— 6	Sundries ಸಾಧಿಲವಾರು	ರೂ.	1,642— 5— 7
Bills for Collection ಜಮಾ ಮಾಡುವರೆ ಇರುವ ಬೀಲುಗಳು	ರೂ.	17,779 – 10— 5	Cash in hand and with Bankers ಕೈಯಲ್ಲಿ ಇರತಕ್ಕ ವ, ಬೇಂಕರಲ್ಲಿರತಕ್ಕ ನಗದಿ ತಿಲ್ಕು	ರೂ.	1,787—14— 0
Sundries ಸಾಧಿಲವಾರು	ರೂ.	2,378—10— 5			
	ರೂ.	134,775 – 15 8		ರೂ.	134,775—15 – 8

Fixed Deposits ನಿರಖು ಠೇವಣಾತಿ.

For 2 years 6½% ಎರಡು ವರ್ಷ ವ್ಯಾದೆಯವುಗಳಿಗೆ. For 6 months 5% ಆರು ತಿಂಗಳ ವ್ಯಾದೆಯವುಗಳಿಗೆ.
For 1 year 6% ಒಂದು ವರ್ಷ " For 3 months 4½% ಮೂರು ತಿಂಗಳ "

Current, Savings Bank, Cumulative Deposits are accepted at most favourable rates. ಚಾಲ್ತಿ, ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ ಎಂಬ ಸಂಚಯದ ಠೇವಣಾತಿಗಳು ಸ್ವೀಕರಿಸೋಣಾಗುವುವು.
Drafts on Madras, Bombay, Calicut and Bangalore issued. Bills for collections received. ಮದ್ರಾಸು, ಮುಂಬಯಿ, ಕಲ್ಲಿಕೋಟೆ, ಮತ್ತು ಬೆಂಗಳೂರುಗಳಿಗೆ ಡ್ರಿಫ್ಟ್‌ಗಳು ಕೊಡಲಾಗುವುವು. ಚೆಕ್ಸ್ ಮತ್ತು ಬಿಲ್ಸ್ ಒಫ್ ಎಕ್ಸ್‌ಚೆಂಜ್ ಹಿಂದೂಸ್ಥಾನದಲ್ಲೆಲ್ಲಾ ಕಡೆಗಳದ್ದು ವಸೂಲು ಮಾಡಿ ಯಾ, ವಟಾಯಿಸಿಕೊಡಲಾಗುವುವು. Savings Bank Deposits-Interest allowed on daily balances at 4—6—0% ಸೇವಿಂಗ್ಸ್ ಬ್ಯಾಂಕ್ ಡಿಪೊಜಿಟಿನ ದಿವಸಂಪ್ರತಿ ತಿಲ್ಕಿನ ಮೇಲೆ 4—6—0% ಬಡ್ಡಿ ಕೊಡಲ್ಪಡುವುದು.

ALL KINDS OF BANKING BUSINESS UNDERTAKEN.
A FEW SHARES ARE STILL AVAILABLE AT PAR.
APPLY FOR PARTICULARS.

ಸಾಮಾನ್ಯ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವುವು.
ಮೂಲಬೆಲೆಗೇ ಕೆಲವು ಪಾಲುಗಳೂ ಮಾರಾಟಕ್ಕಿವೆ.
ವಿಶೇಷ ಮಾಹಿತಿ ಬಗ್ಗೆ ಆಫೀಸಿಗೆ ಬರಕೊಳ್ಳುವುದು.

Printed and Published by U. Ganesh Shenai, Superintendent at the Saraswathi Printing Works, Ltd., Mangalore.